PAPERS LAID ON THE TABLE.

Sri VEERENDRA PATIL (Minister for Public Works).—I beg to lay on the Table of the House a copy of the Notification No. GSR. 855 dated 26th February, 1966 (The Mysore Land Revenue Rules, 1965) as required under Section 198 of the Mysore Land Revenue Act, 1964.

CALLING ATTENTIQN MOTION

Re. **Grave Situation arising out of the Closure of Minerva and Mysore Textile Mills, Bangalore.**

Sri K. DEVIAH.—I call attention of the Hon'ble Minister for Labour to the grave situation arising out of the Closure of Minerva and Mysore textile Mills, Bangalore.

† Sri D. DEVARAJ URS (Minister for Labour Transport and Tourism).—In respect of calling attention motion I want to bring to the notice of the House a few facts. The Minerva and Mysore Mills have recently declared a lay out. Nearly 7 thousand workers have been laid off. Before this laying off, the Government had received a memorandum from the Management stating that their financial position was in great difficulty and they were finding it very hard to continue to work the Mills unless they were given some financial help either from the Banks or by Government coming forward to stand as guarantee. That was the position with which they were faced. The Mill products of South Indian Mills were used to be sold in Northern parts of India like Punjab. During those days of conflicts the market of those areas were affected and these Mills in the South could not freely send their goods for sale. That was one thing. Secondly, on account of credit squeeze, these Mills could not get credit in time. As a result of all these things, they have been faced with such a situation that they found it hard to continue the Mills running. This is what the memorandum stated. At the Government level, we will constitute a Committee to go into this question of closure and lay off and retrenchment in these Mills. This Committee, before any such large scale lay off and retrenchment takes place, will sit together with the management and discuss the question whether it would be possible to get over the difficulties that are in the way. We want that Committee to go into this question of Minerva and Mysore Mills and the difficulties they were facing. The Management have stated that apart from financial help and credit facilities that are required by them the level of wages and the D. A. that they are paying are higher as compared with other Mills. The D. A. these Mills are paying are higher than the wage award itself. So, they said, for some time to come they want to see that D. A. is given at a reduced scale that is being given in some other Mills especially the Davangere Mills. The workers were willing to discuss with the Management any other ideas of economising and improving the efficiency of the Mills to run on profitable basis. The Government was willing to

co-operate and give all necessary help to see that some understanding would be brought about between the Management and the workers. On more than one occasion the Management and the workers met the Labour Commissioner and discussed the several methods of economising and running the Mills in a better way. All of a sudden, some 10 days back or so, the Government was informed by the Management that they were resorting to lay off. They represented to the Chief Minister as to why they have decided to lay off and they have sent a copy to me. The very day the Chief Minister was pleased to call a meeting of both the workers' representatives and the Management and in the meeting both of them said said that Government should come to the aid of the Mills in the from of standing guarantee to get the bank credit.

Sir, there even in the petition given to the Government, the management have stated that they have resorted to this lay off with the consent of the labour representatives and this question I raised in the meeting convened by the Chief Minister in his Chambers. There; Sir, it looked as though labour representatives had indirectly given their consent for this lay off and when I specifically mentioned one strange case where the Management says labour representatives have also agreed for temporary lay off for a week or so, none of them protested. That is why I said it was indirectly understood that the labour was one with the management so far as lay off was concerned. Perhaps, it may be because they too realised the difficulties of the management and they thought by resorting to temporary lay off, the maragement would be enabled to get over the temporary difficulty they were having. I do not know what reasons prompted the labour to give their indirect and tacit consent. But that was the case. The management even went to the extent of saying that they were willing to hand over the Mills to the Government management if they so desire and they were not at all in a position to run the Mills unless the Government came to their help in a large measure by way of standing guarantee to get bank credit. The Government told both the management and lobour that Government would be willing to help the mills to run the mills provided they *i.e.*, both the labour and management gave a guarantee that they would not run into such difficulties any more. Supposing we stand guarantee and we give them financial assistance to the tune of some lakhs of rupees and again after 3 months or 5 months if they were to run into the same difficulty, I am afraid no Government would be in a position to go on giving bank guarantees and giving them credit facilities. So, that point was placed before this joint meeting and they were advised to find out ways and means of effecting some economies so that whatever financial help was given to them would be utilised to the best advantage of running the mills. That was agreed to tentatively that day. Sir, the notice of lay off that was given was for a period of one week to start with. I think that week closes by tomorrow or it may end today. In the normal course I expect the mills to start on Monday because tomorrow happens to be a holiday. In the meanwhile, Sir, what has happened is this. Day

(SRI D. DEVARAJ URS)

before yesterday a good number of workers roughly about 1500 to 2000 came in a procession and they told the police authorities that they wanted to meet the Labour Minister. As soon as I received this information I got the representatives of the Labour to meet me and I discussed the matter. Their apprehension was that the management perhaps would not be in a position to open the mills on Mondy. Secondly they also apprehended that the salarise or the wages that were due to the workers for the last month might not be paid in time, that is, well within 10th. According to the Payment of Wages Act, that is the time allowed for the management to clear the wage bills. On these matters they were rather doubtful as to what the management would do and what their stand was. They requested me to persuade management to see that they would open the Mills on Monday and make the payment well within time. I have also advised the representatives of the workers in the meanwhile to think seriously about ways and means of effecting economy if possible, and sit with the management and discuss these matters. I have also reiterated the stand of the Government that the Government will always be willing to help both the management and labour to come to any kind of understanding so far as economy measures are concerned. This is the position.

Today or tomorrow I intend calling the management and advising them to see that the Mills are opened on Monday and with regard to payment to make payments within time. In case the management fails to do this, the Government, I am sorry to say, will have no other option but to proceed against the management as per law laid down.

MR. SPEAKER.—That is a contingency.

GENERAL DISCUSSION ON THE FOURTH-FIVE YEAR PLAN

(continued)

† ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ನಿನ್ನೆ ದಿವನ ಶರಾವತಿಯ ವಿದ್ಯುಚ್ಛಕ್ತಿಯನ್ನು ಬೇರೆ ದೇಶಗಳಿಗೆ ಮಾರದೆ ನಮ್ಮ ದೇಶದಲ್ಲಿ ಸಾಕಾದಷ್ಟು ಕೈಗಾರಿಕೆಗಳನ್ನು ಬೆಳೆಸಿ ಗ್ರಾಮಾಂತರ ಪ್ರದೇಶದಲ್ಲೂ ಕೂಡ ನೀರಾವರಿ ಬಾವಿಗಳಿಗೆ ಮತ್ತು ರೂರಲ್ ಇಂಡಸ್ಟ್ರಿಗಳಿಗೆ ವಿದ್ಯುಚ್ಛಕ್ತಿ ದೊರಕುವಂತೆ ಮಾಡಬೇಕು ಎಂದು ಹೇಳಿದೆ. ಈಗ ಮುಖ್ಯವಾಗಿರುವುದು ದವನ, ವ್ಯವಸಾಯಕ್ಕೆ ಆದ್ಯತೆ ಕೊಡುವುದು. ರಷ್ಯಾದಲ್ಲಿ ಪ್ರತಿ 25 ಕಿಲೋ ವಾಟ್ಸ್ ಪವರ್ ಉತ್ಪತ್ತಿ ಆದರೆ ಅದರಲ್ಲಿ ಒಂದು ಕಿಲೋ ವ್ಯಾಟ್ ಪವರ್ ವ್ಯವಸಾಯಕ್ಕೆ ಕೊಡುತ್ತಾರೆ. ವ್ಯವಸಾಯಕ್ಕೆ ಅಷ್ಟು ಹೆಚ್ಚು ಗಮನ ಕೊಟ್ಟು ಎಲ್ಲ ವಿಧವಾದ ಅನುಕೂಲಗಳನ್ನೂ ಮಾಡಿಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ 5 ಸಾವಿರ ಹಳ್ಳಿಗಳನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಲೆಕ್ಟ್ರಿಫೈ ಮಾಡುತ್ತಾರೆಂದು ಹೇಳುತ್ತಾರೆ. 27 ಸಾವಿರ ಹಳ್ಳಿಗಳು ಇರತಕ್ಕ ಈ ರಾಜ್ಯದಲ್ಲಿ ತಾವು ಈ ರೀತಿ ಮುಂದುವರಿದರೆ ಪ್ರತಿಯೊಂದು ಹಳ್ಳಿಗೂ ಕೂಡ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಇವೊತ್ತು ಅಮೇರಿಕಾ ಅಂಥ ಬೇರೆ ದೇಶಗಳನ್ನು ನೋಡಿದರೆ ಅಲ್ಲಿ 99 ಪರ್ಸೆಂಟು ಫಾರಂಗಳು ಎಲೆಕ್ಟ್ರಿಫೈ ಆಗಿವೆ. ಅಂತಹ ಒಂದು ಸ್ಥಿತಿ ಇರುವಾಗ 4-5ನೇ ಪಂಚವಾರ್ಷಿಕ ಯೋಜನೆಯಲ್ಲಿ ಆದರೂ ಕೂಡ, ಕನಿಷ್ಠಪಕ್ಷ 75 ಪರ್ಸೆಂಟು ಹಳ್ಳಿಗಳನ್ನು ಎಲೆಕ್ಟ್ರಿಫೈ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳ ಮಾಡಬೇಕು ಎಂದು ನಾನು ಸೂಚನೆ ಕೊಡುತ್ತೇನೆ.

ಇನ್ನು ಇಂಡಸ್ಟ್ರೀಸ್ ವಿಷಯದಲ್ಲಿ ಹಿಂದೆಯೇ ಹೇಳಿದ್ದೇನೆ. ಮೊದಲನಿಂದಲೂ ಕೂಡ ಇದಕ್ಕೆ ಹೆಚ್ಚಿನ ಗಮನ ಕೊಟ್ಟಿಲ್ಲ. ನಮ್ಮ ಸರ್ಕಾರದವರು ಮಾಡಿರುವುದು bad planning ಆ ಪ್ಲಾನಿಂಗ್ ಕೂಡ ಸರಿಯಾಗಿಲ್ಲ, ಮತ್ತು ಅದಕ್ಕೆ ಹೆಚ್ಚು ನಿಗಾ ಕೊಡುತ್ತಾ ಇಲ್ಲ. ಅಕ್ಕಪಕ್ಕದ ಮದ್ರಾಸ್ ಮತ್ತು ಆಂಧ್ರ ದೇಶಗಳನ್ನು ನೋಡಿದರೆ ಅವರು ಎಷ್ಟೋ ಮುಂದುವರಿದಿದ್ದಾರೆ. ಆಂಧ್ರದಲ್ಲಿ ಮತ್ತು ಮದ್ರಾಸಿನಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರೀಸ್ ಸ್ಟಾರ್ಟ್ ಮಾಡುತ್ತಾರೆ. ಅಲ್ಯೂಮಿನಿಯಮ್ ಫ್ಯಾಕ್ಟರೀ ಆಗಿವೆ. ಅಟಾಮಿಕ್ ಎನರ್ಜಿ ಕೂಡ ಉತ್ಪನ್ನ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗಿರುವಾಗ ಮೈಸೂರಿನವರು ಕಣ್ಣು ಮುಚ್ಚಿಕೊಂಡು ಕುಳಿತರೆ ಸಾಧ್ಯವೇ? ಹಿಂದೆ ಮಹಾರಾಜರ ಕಾಲದಲ್ಲಿ ಮೈಸೂರು ಮಾಡರ್ ಸ್ಟೇಟ್ ಆಗಿತ್ತು. ಆದ್ದರಿಂದ ಇಂಡಸ್ಟ್ರೀಸ್ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಈ ಶರಾವತಿ ಪವರ್ ನಮಗೆ ಬೇಕಾದಷ್ಟು ಇರುವಾಗ ಎಲೆಕ್ಟ್ರಿಕಲ್ ಇಂಡಸ್ಟ್ರಿ ಜಾಸ್ತಿ ಡೆವಲಪ್ ಆಗಬೇಕು. ಬಸವನಹಳ್ಳಿಯಿನ ವೇಗದಲ್ಲೆ ನಾವು ಹೋಗುತ್ತಾ ಇದ್ದೇವೆ. ಈ ರೀತಿ ಮುಂದುವರಿದರೆ ಶರಾವತಿ ಪವರ್ ಹಾರ್ನೆಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮಗೆ ಇನ್ಸುಲೇಟರ್ಸ್ ಬೇಕು. ಇನ್ನು ಬೇರೆ ಬೇರೆ ಮೆಟೀರಿಯಲ್ಸ್ ಬೇಕು. ಇದಕ್ಕೆಲ್ಲಾ ಹೆಚ್ಚು ಗಮನಕೊಟ್ಟು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಬೆಳೆಯಣಿಗೆ ಮಾಡಬೇಕು. ಅದೇರೀತಿ ಮೆಟಲರ್ಜಿಕಲ್ ಇಂಡಸ್ಟ್ರೀಸು, ಅಲ್ಯೂಮಿನಿಯಮ್ ಸ್ಟೀಲ್ ಅರಾಯ್ ಮೆಟೀರಿಯಲ್ಸ್ ಇವು ತಯಾರಾಗಬೇಕು. ಇವನ್ನು ತಯಾರು ಮಾಡದೆ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಸ್ಟೀಲ್ ಕೋಟಾ ನೋಡಿದರೆ, ಬೇರೆ ದೇಶದಿಂದ ತರಬೇಕು. ನಾವೇ ಮಾಡಿಕೊಳ್ಳುವ ಅವಕಾಶ ಇರುವಾಗ ನಾವು ನಿಧಾನದಲ್ಲಿ ಹೋಗಬಾರದು. ಆದಷ್ಟು ಶೀಘ್ರದಲ್ಲಿ ನಮಗೆ ಬೇಕಾದುದನೆಲ್ಲಾ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ಸಾಮರ್ಥ್ಯವನ್ನು ಹೊಂದಬೇಕು ಎಂದು ನಾನು ತಿಳಿಸುತ್ತೇನೆ.

ಸಣ್ಣ ಕಾರುಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹಳ ವರ್ಷಗಳಿಂದಲೂ ಹೇಳುತ್ತಿದ್ದಾರೆ. ಆದರೆ ಅದು ಫಲಕಾರಿಯಾಗುತ್ತದೋ ಇಲ್ಲವೋ ಎನ್ನುವುದು ಅನುಮಾನವಾದ ಸಂಗತಿ. ಏಕೆಂದರೆ, ಈ ಕಾರ್ಖಾನೆಯನ್ನು ಬೇರೆ ದೇಶದವರು ಮಾಡುತ್ತಾರೆಂದು ವರ್ತಮಾನ ಕೇಳಿ ಬರುತ್ತಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಯಲ್ಲಿ ಇದ್ದಾರೆ. ಅವರಿಗೆ ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳು ಒಂದು ಟೆಲಿಗ್ರಾಮ್ ಕಳಿಸಿ ಸದ್ಯ ಬೇರೆದೇಶಕ್ಕೆ ಹೋಗ್ತುವಂತದ್ದನ್ನು ತಪ್ಪಿಸುವ ಹಾಗೆ ಮಾಡಬೇಕೆಂದು ಹೇಳಬೇಕು.

10-00 A.M.

ಅದೇ ರೀತಿ ನಮ್ಮ ರಾಜ್ಯದಲ್ಲಿ ಒಂದು, ಮೂರು ಟನ್ ಶಕ್ತಿಯ ಟ್ರಕ್ಸ್ ತಯಾರು ಮಾಡುವ ಕಾರ್ಖಾನೆ ಯನ್ನು ಸಹ ಆದಷ್ಟು ಜಾಗ್ರತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಮಿಕಲ್ ಇಂಡಸ್ಟ್ರೀಸ್ ವಿಷಯದಲ್ಲಿ ಹೇಳುವುದಾದರೆ, ನಮ್ಮ ಹಳೆಯ ಮೈಸೂರಿನಲ್ಲಿ ಬೆಳಗೊಳದಲ್ಲಿ ಒಂದೇ ಒಂದು ಕಾರ್ಖಾನೆ ಇದೆ. ಇತ್ತೀಚೆಗೆ ನಮ್ಮಲ್ಲಿ ಯಾವ ಫರ್ಟಿಲೈನರ್ಸ್ ಕಾರ್ಖಾನೆಯೂ ಅಭಿವೃದ್ಧಿಯಾಗಿಲ್ಲ. ನಾನಾದರೂ ಇಲ್ಲ ಹೇಳುವುದೇನೆಂದರೆ ಈ ವಿಜ್ಞಾನ ಯುಗದಲ್ಲಿ ಕೆಮಿಕಲ್ಸ್ ಕಾರ್ಖಾನೆಯು ಬಹಳ ಮುಖ್ಯವಾದುದು. ಈ ಯುಗದಲ್ಲಿ ಫರ್ಟಿಲೈಸರಸ್ ಇಂಡಸ್ಟ್ರಿಯ ಅಭಿವೃದ್ಧಿಯಾಗದಿದ್ದರೆ, ಬಹಳ ಕೊಂದರೆಯಾಗುತ್ತದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಈ ಕೆಮಿಕಲ್ಸ್ ಇಂಡಸ್ಟ್ರೀಸ್‌ಗಳನ್ನು ಹೆಚ್ಚು ಹೆಚ್ಚು ಸ್ಥಾಪನೆ ಮಾಡುವುದಕ್ಕೆ ಕೇಂದ್ರದ ನೆರವನ್ನು ಪಡೆದು ಪ್ರಯತ್ನಮಾಡಬೇಕೆಂದು ನಾನು ಇಲ್ಲಿ ಸೂಚನೆ ಮಾಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ವ್ಯವಸಾಯಕ್ಕೆ ಬೇಕಾಗಿರತಕ್ಕ ಹೆಸ್ಟಿಸೈಡ್ಸ್ ಇನ್‌ಸೆಕ್ಟಿಸೈಡ್ಸ್ ಫಂಗಿಸೈಡ್ಸ್ ಮೊದಲಾದವುಗಳನ್ನು ನಾವು ಹೊರಗಡೆಯಿಂದ ತರಿಸುವಾಗ ತುಂಬಾ ಹಣವನ್ನು ನಾವು ಹೊರಗೆ ಕೊಡಬೇಕಾಗುತ್ತದೆ. ಇದನ್ನೆಲ್ಲಾ ತಡೆಗಟ್ಟುವ ದೃಷ್ಟಿಯಿಂದ ಮತ್ತು ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಿಂದ ಇಲ್ಲಿ ಒಂದು ಕಾರ್ಖಾನೆಯು ಅಗತ್ಯ ಮತ್ತು ಅದಕ್ಕೆ ಗಮನ ಕೊಡಬೇಕೆಂದು ನಾನು ಸೂಚಿಸುಮತ್ತು ಸಿರಾಮಿಕ್ ಇಂಡಸ್ಟ್ರೀಸ್, ಪೊರ್ಸಿಲೆನ್ ಫ್ಯಾಕ್ಟರಿಗಳನ್ನೆಲ್ಲಾ ಅಭಿವೃದ್ಧಿ ಮಾಡಿದ್ದಾರೆ. ನಮ್ಮ ದೇಶದಲ್ಲಿ ಬೇರೆ ಕೈಗಾರಿಕೆಗಳನ್ನೂ ಅಭಿವೃದ್ಧಿಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಭಾಗೇಶ್‌ಪುರದಲ್ಲಿ ರಿಫ್ರಾಕ್ಟರಿ ಬ್ರಿಕ್ಸ್ ಫ್ಯಾಕ್ಟರಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ನಡೆದಿದೆ ಎಂದು ಸಾಮಾನ್ಯವಾಗಿ 5-6 ವರ್ಷದಿಂದ ಈ ಕೂಗನ್ನು ಕೇಳುತ್ತಿದ್ದೇವೆ. ಆದರೆ ಶ್ರೀಮಾನ್ ಮಲ್ಲಪ್ಪನವರೂ ನುಮ್ಮನೆ ಇದ್ದಾರೆ. ಇದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ. ಇದನ್ನು ಆದಷ್ಟು ಜಾಗ್ರತೆಗಾಗಿ ಮಾಡಬೇಕೆಂದು ಹೇಳುತ್ತೇನೆ. ಈಗ ಭೈರಾಪುರದಲ್ಲಿ ಕ್ರೋಮ್ ಮೈನ್ಸ್ ಇದೆ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಇದಕ್ಕೆಲ್ಲಾ ಬೋರ್ಡ್ ಆಫ್ ಮೈನರರ್ ಡೆವಲಪ್‌ಮೆಂಟ್‌ನವರು ಸರಿಯಾಗಿ ಗಮನಕೊಡುತ್ತಾ ಇಲ್ಲ. ಇರತಕ್ಕ ಅಧಿಕಾರಿಗಳು ಸಲೀಸಾಗಿ ಸಂಬಳ ತೆಗೆದುಕೊಂಡು ಇರುತ್ತಾರೆಯೇ ವಿನಾ ಯಾವ ಒಂದು ಪ್ರಯೋಜನವಾಗುತ್ತಾ ಇಲ್ಲ. ಇದನ್ನೆಲ್ಲಾ ತಡೆಗಟ್ಟಬೇಕು; ಮತ್ತು ಅಧಿಕಾರಿಗಳಿಗೆ ಸರಿಯಾದ ಉಪದೇಶಗಳನ್ನು ಕೊಟ್ಟು ಜಾಗ್ರತೆಯಾಗಿ ಫಲಪ್ರದವಾದ ಕೆಲಗಳನ್ನು ಮಾಡುವಂತೆ ತಿಳಿಸಬೇಕು.

ಮತ್ತು ರೂರರ್ ಇಂಡಸ್ಟ್ರೀಸ್ ವಿಷಯಲ್ಲಿ ಸರ್ಕಾರದವರು ಹೆಚ್ಚು ನಿಗಾ ಕೊಟ್ಟಿಲ್ಲ. ಅದನ್ನು ಮೊದಲಿನಿಂದಲೂ ನಿರ್ಲಕ್ಷ್ಯ ಮಾಡುತ್ತಾ ಬಂದಿದ್ದಾರೆ. ಇವತ್ತು ಜಪಾನ್ ದೇಶದವರು ಏನು ಮಾಡಿದ್ದಾರೆಂದರೆ, ಕೈಗಾರಿಕೆಗಳನ್ನು ಎರಡು ಭಾಗ ಮಾಡಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಅರ್ಬನ್ ಏರಿಯಾದಲ್ಲಿ ಸ್ಥಾಪನೆ ಮಾಡುತ್ತಾರೆ. Ancilliary industriesನ್ನು ರೂರರ್ ಏರಿಯದಲ್ಲಿ ಸ್ಥಾಪನೆ ಮಾಡುತ್ತಾರೆ ಮತ್ತು ಬಿಡಿ ಭಾಗಗಳನ್ನು ತಯಾರು ಕೂಡ ಮಾಡುವುದು ರೂರರ್ ಏರಿಯಾದಲ್ಲಿ. ಇದರಿಂದ ವ್ಯವಸಾಯಗಾರರಿಗೂ ವ್ಯತ್ತಿಯನ್ನು ಒದಗಿಸಿದಂತಾಗುತ್ತದೆ. ಅಂಥ ಒಂದು ಕಾನೂನು ನಿಯಮವನ್ನು ನಮ್ಮ ದೇಶದಲ್ಲಿ ಕೂಡ ಮಾಡಿದರೆ, ನಮ್ಮ ಗ್ರಾಮಾಂತರ ಪ್ರದೇಶಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನೆಲ್ಲಾ ಕಡ್ಡಾಯ ಪೂರ್ವಕವಾಗಿ ಮಾಡಲಕ್ಕಾಗಿ ನಾಲ್ಕನೆಯೋಜನೆಯಲ್ಲಿ ಸೇರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕೈಗಾರಿಕೆಗಳಲ್ಲಿ ಏರುಪೇರು ಆಗುತ್ತಿದೆ. ಸುಮ್ಮನೆ ಖರ್ಚು ಮಾಡುತ್ತಾರೆಯೇ ಹೊರತು ಅದರ ಅಭಿವೃದ್ಧಿಯು ಅಷ್ಟೊಂದು ಫಲಕಾರಿಯಾಗುವುದಿಲ್ಲ. ಅಲ್ಲಿ ಆಗತಕ್ಕ ರೇಬರ್ ಪ್ರೊಡಕ್ಟ್‌ವಿಟಿ ಏನಿದೆ, ಮತ್ತು ನಾವು ಮಾಡತಕ್ಕಂಥ ಫಿನಿಶ್‌ಡ್ ಗೂಡ್ಸ್ ಕ್ವಾಲಿಟಿ ಏನು, ಇದನ್ನೆಲ್ಲಾ ನಾವು ಯೋಚಿಸುವುದಿಲ್ಲ. ಅದೇ ರೀತಿ means of production and articles of consumption ಎಂದು ಎರಡು ಭಾಗ ಇದೆ. ಇದರಲ್ಲಿ ಒಂದಕ್ಕೊಂದು ಹೋಲಿಕೆ ಇರಬೇಕು. ಇದನ್ನೆಲ್ಲಾ ಲೆಕ್ಕ ಹಾಕಿಕೊಂಡು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಕೈಗಾರಿಕೆಗಳು ಮುಂದುವರಿಯಬೇಕಾದರೆ, ಸೈಂಟಿಸ್ಟ್‌ಸ್, ಎಕಾನಮಿಸ್ಟ್‌ಸ್, ಮತ್ತು ಟೆಕ್ನಿಶಿಯನ್ಸ್ ಜಾಸ್ತಿ ಇರಬೇಕು. ನಮ್ಮ ದೇಶದ ದೊಡ್ಡ ದೊಡ್ಡ ಬುದ್ಧಿವಂತರನ್ನು ಇದರಲ್ಲಿ ನೇಮಿಸಿಕೊಂಡು, ದೇಶದಲ್ಲಿ ಕೈಗಾರಿಕೆಯು ಒಂದು ಪ್ರಗತಿಪರ ಮಾರ್ಗವನ್ನು ಹೊಂದುವುದಕ್ಕೆ ಎಷ್ಟು ಸಾಧ್ಯವೋ, ಅಷ್ಟು ಮಾಡಬೇಕೆಂದು ನಾನು ನೂಡನೆ ಮಾಡುತ್ತೇನೆ.

ಇನ್ನು ಮೈನರರ್ ಡೆವಲಪ್ ಮತ್ತು ಮೈನರರ್ ಎಕ್ಸ್‌ಪ್ಲಾಯಿಟೇಶನ್ ವಿಷಯದಲ್ಲಿ ನಮ್ಮ ದೇಶ ಬಹಳ ಹಿಂದುಳಿದಿದೆ. ಇವತ್ತು ಈ ಇರಾಬಿಯ ಕೆಲಸವೇನೆಂದರೆ, ರಾರಿಗಳನ್ನು ಕೊಂಡುಕೊಂಡು ರಾರಿಗಳನ್ನು ಮಾರುವುದು ಇಷ್ಟೆ. ನಮ್ಮ ದೇಶದಲ್ಲಿ ಬೇಕಾದಷ್ಟು ಮ್ಯಾಂಗನೀಸ್ ಮತ್ತು ಐರನ್ ಓರ್ ಇದ್ದರೂ ಕೂಡ ಅದನ್ನು ಸರಿಯಾಗಿ ಉಪಯೋಗ ಮಾಡುತ್ತಾ ಇಲ್ಲ. ಇದರಿಂದ ನಮ್ಮ ದೇಶದಲ್ಲಿರುವ ಮೈನರಲ್ಸ್‌ನ್ನು ಹೆಚ್ಚು ಹೆಚ್ಚು ಉಪಯೋಗಿಸಲು ಸರ್ವ ಪ್ರಯತ್ನ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಅರಸಿಕೆರೆಯ ಹತ್ತಿರ ಮ್ಯಾಂಗನೀಸ್ ಓರ್‌ಗೆ ಟ್ರೈಯರ್ ಪಿಟ್ಸ್ ಮಾಡಿ ಬಿಟ್ಟು ಬಿಟ್ಟಿದ್ದಾರೆ. ಇದನ್ನೆಲ್ಲಾ ಹೆಚ್ಚು ಉತ್ಪತ್ತಿ ಮಾಡುವಂತೆ ನೋಡಬೇಕೆಂದು ಸಲಹೆ ಮಾಡುತ್ತೇನೆ.

ಇವತ್ತು ಕೋ-ಆಪರೇಟಿವ್ ಸಂಸ್ಥೆಗಳನ್ನು ನೋಡುವುದಾದರೆ, ಅಲ್ಲಿ ಹಣ ತಿನ್ನುವ ಹೆಗ್ಗಣಗಳು ಜಾಸ್ತಿಯಾಗಿ ಎಲ್ಲಾ ಕೆಟ್ಟುಹೋಗಿವೆ. ಇದನ್ನು ಸರ್ಕಾರದವರೇ ಸರಿಯಾದ ರೀತಿಯಲ್ಲಿ ಮ್ಯಾನೇಜ್ ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು; ಮತ್ತು ಅಲ್ಲಿ ಆಗುವ ಅನ್ಯಾಯ, ಅಧರ್ಮ ಮೊದಲಾದುವುಗಳನ್ನು ತಪ್ಪಿಸಬೇಕು. ನಾಲ್ಕನೆಯ ಯೋಜನೆಯಲ್ಲಿ ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡು ಕೋ-ಆಪರೇಟಿವ್ ಸಂಸ್ಥೆಗಳು ದೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ಕೆಲಸಮಾಡುವಂತೆ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ, ಇವತ್ತು ಜಮೀನು ಇದ್ದವರಿಗೇನೆ ಲೋನ್ ಸಿಕ್ಕುವುದಲ್ಲದೆ, ಬಡ ಜನರಿಗೆ, ಜಮೀನು ಇಲ್ಲದವರಿಗೆ, ಏನೊಂದು ತರದ ಸೌಲಭ್ಯ; ಸಹಾಯವೂ ಸಿಗುತ್ತಾ ಇಲ್ಲ. ಸಾಮಾನ್ಯವಾಗಿ ಯಾರು ವ್ಯವಸಾಯಗಾರರಿರುತ್ತಾರೋ ಅವರಿಗೆ ಯಾರಿಗೂ ಸಿಗುತ್ತಾ ಇಲ್ಲ. ರೈತನು ಉತ್ಪಾದನೆ ಮಾಡಬೇಕಾದರೆ, ಅವನಿಗೆ ಗೊಬ್ಬರಬೇಕು, ಬೀಜಬೇಕು, ಎತ್ತುಗಳನ್ನು ಕೊಂಡುಕೊಳ್ಳಲು ಹಣ ಬೇಕು; ಇದು ಪ್ರತಿಯೊಬ್ಬನಿಗೂ ಸಿಗುವ ಹಾಗೆ ಮಾಡಬೇಕು. ಈ ವಿಶಾಲ ದೃಷ್ಟಿಯನ್ನು ಇಟ್ಟುಕೊಂಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ರೋಡ್ ಇಂಪ್ರೂವ್‌ಮೆಂಟ್ ವಿಚಾರ. ಸಾಮಾನ್ಯವಾಗಿ ಇವತ್ತಿನ ದಿವಸ ಈ ರೂರರ್ ಕಮ್ಯುನಿಕೇಶನ್ ರೋಡುಗಳನ್ನು ಸರಿಯಾಗಿ ಒಂದು ಸ್ಟ್ಯಾಂಡರ್ಡಿಗೆ ತರಬೇಕು. ಈ ರೀತಿ ಮಾಡುವುದರಿಂದ ಗ್ರಾಮಾಂತರ ಪ್ರದೇಶಗಳ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಸರ್ಕಾರದ ವರು ಸಾಮಾನ್ಯವಾಗಿ ಟ್ಯಾಕ್ಸ್ ಹಾಕುತ್ತಾರೆಯೇ ಹೊರತು ಇಂಥ ಜನರಿಗೆ ಅನುಕೂಲವಾಗುವಂತೆ ಕೆಲಸಗಳನ್ನು ಮಾಡುವುದಿಲ್ಲ. ಇದರಿಂದ ಕೇಂದ್ರದ ನೆರವನ್ನು ಪಡೆದು ಇದನ್ನು ಸರಿಪಡಿಸಬೇಕೆಂದು ನಾನು ಸೂಚಿಸುತ್ತೇನೆ, ಉದಾಹರಣೆಗೆ ಒರಿಸ್ಸಾದಲ್ಲಿ ಅಲ್ಲಿಯ ಮುಖ್ಯಮಂತ್ರಿಯವರು ಕೇಂದ್ರಕ್ಕೆ ಒಂದು ಬೆದರಿಕೆಯನ್ನು ಹಾಕಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಬಂದದ್ದೇ ಸಾಕು ಎಂದು ಸುಮ್ಮನಿರಬಾರದು. ಕೇಂದ್ರಕ್ಕೆ ಬೆದರಿಕೆಯನ್ನು ಹಾಕಬೇಕು. ಇಲ್ಲದಿದ್ದರೆ ನೀವು ರಾಜಿನಾಮೆಕೊಡಿ, ನಾವು ಎಲ್ಲರೂ ಕೊಡುತ್ತೇವೆ. ಆಗ ಕೇಂದ್ರದವರು ಕಣ್ಣು ತೆರೆಯುತ್ತಾರೆ. ಇವತ್ತು ಏನಾಗಿದೆ ಎಂದರೆ, ದೇಶದಲ್ಲಿ ಸಾಹುಕಾರರು ಇನ್ನೂ ಸಾಹಕಾರರಾಗುತ್ತಿದ್ದಾರೆ, ಬಡವರು ಇನ್ನು ಹೆಚ್ಚು ಬಡವರಾಗುತ್ತಿದ್ದಾರೆ. ಸಾಹುಕಾರರಿಗೂ ಬಡವರಿಗೂ ಇರುವ ಅಂತರವನ್ನು ತಡೆಗಟ್ಟಬೇಕು. ಮತ್ತು ದೇಶದಲ್ಲಿ ಸತ್ಯವಂತರಿಗೆ, ಈಗ ಅವಕಾಶವಿಲ್ಲದಂತಾಗಿದೆ. ಈ ರೀತಿ ಮುಂದುವರಿದರೆ ನಮ್ಮ ದೇಶಕ್ಕೇನೇ ಕೆಡುಕು ಉಂಟಾಗುತ್ತದೆಂಬುದನ್ನು ನಾವು ಆರೋಡನೆ ಮಾಡಬೇಕು. ಮೈಸೂರು ದೇಶಕ್ಕೆ ಕೊಯಮುತ್ತೂರು ಕಡೆಯವರು ಬಂದು ಖೋಟಾ ನೋಟು ಗಳು ಚಲಾವಣೆಮಾಡುತ್ತಿದ್ದಾರೆ. ಅಂತಹವರಲ್ಲಿ ಒಬ್ಬರನ್ನಾದರು ಹಿಡಿದು ಗಲ್ಲಿಗೆ ಹಾಕಿದ್ದರೆ, ಈ ರೀತಿಯ ಕೆಲಸಗಳು ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತಿತ್ತು. ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸುತ್ತೇನೆ.

ಟೂರಿಸಮ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಳೆಯ ಮೈಸೂರಿನಲ್ಲಿ ಹಂಪೆ, ಹಳೇಬೀಡು, ಬೇಲೂರು ಮುಂತಾದ ಇತಿಹಾಸ ಪ್ರಸಿದ್ಧವಾದ ಕ್ಷೇತ್ರಗಳಿವೆ. ಸರ್ ವಿಶ್ವೇ ಕಾಲದಲ್ಲಿ ಇವುಗಳ ಅಭಿವೃದ್ಧಿಗಾಗಿ ಬೇಕಾದಷ್ಟು ಹಣ ಖರ್ಚುಮಾಡಿದರು. ಆದರೆ ಈಗಿನ ಸರ್ಕಾರದವರು ದೇವರನ್ನೇ ಮರೆತಿದ್ದಾರೆ, ಜನರನ್ನೇ ಕೈಬಿಟ್ಟಿದ್ದಾರೆ; ದುಡ್ಡನ್ನು ಮಾತ್ರ ಸರಿಯಾಗಿ ಕೊಡಿ ಎಂದು ಹೇಳುತ್ತಿರುತ್ತಾರೆ. ನಾಲ್ಕನೆಯ ಯೋಜನೆಯಲ್ಲಿ ಇವುಗಳ ಅಭಿವೃದ್ಧಿಗಾಗಿ ಹೆಚ್ಚಿನ ಗಮನಕೊಟ್ಟು ಹೆಚ್ಚು ಹಣ ಖರ್ಚುಮಾಬೇಕೆಂದು ಹೇಳುತ್ತೇನೆ. ಈ ಕೆಳಗಿನ ಮೂರು ಸಾಲುಗಳನ್ನು ಓದಿ ನನ್ನ ಮಾತನ್ನು ಮುಗಿಸುತ್ತೇನೆ.

(1) to turn agriculture work into a variety of industrial work and machanise it;

(2) to bring closely level of labour remuneration to farmers to that of waged and salaried workers in towns;

(3) to improve living conditions of public services in the country.

ಇವನ್ನು ಸಾಧಿಸುವ ದೃಷ್ಟಿಯಲ್ಲಿ ಈ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ನಿಮ್ಮ ಶಕ್ತಿಯನ್ನು ನೋಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಮಾನ್ಯ ಅಧ್ಯಕ್ಷರೇ, ಈ ಚತುರ್ಥ ಯೋಜನೆಯ ವಿಚಾರವಾಗಿ ಕೂಲಂಕಷವಾಗಿ ಚರ್ಚಿಸುವಂತಹ ಸುಯೋಗ ಒದಗಿದ್ದಕ್ಕಾಗಿ ನಾವೆಲ್ಲಾ ಸಂತೋಷ ಪಡಬಹುದಾಗಿದೆ. ನಮ್ಮ ದೇಶದ ಮೇಲೆ ಎರಡು ಕಡೆಯಿಂದ, ಎರಡು ದೇಶಗಳವರು ದಾಳಿ ಮಾಡಿದ್ದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುವ ಕಾಲ ಬಂತು. ಆದರೂ ಸಹ ನಮ್ಮ ದೇಶದ ಮುಖಂಡರು ಧೈರ್ಯದಿಂದ ನ್ಯಾಷನಲ್ ಎಮರ್ಜೆನ್ಸಿಯಿರುವಾಗಲೇ ಪಂಚವಾರ್ಷಿಕ ಯೋಜನೆಯ ಕರಡನ್ನು ತಯಾರು ಮಾಡಿದರು. ಈ ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸುವ ಉದ್ದೇಶವೆಂದರೆ ಭಾರತ ದೇಶದಲ್ಲಿರುವ ಹಾಗೂ ಮೈಸೂರು ದೇಶದಲ್ಲಿರುವ ಹಳೆಯ ಜಾಡನ್ನು ತೆಗೆದು ಒಂದು ಹೊಸ ಚೇತನವನ್ನು ಉಂಟುಮಾಡಲಿಕ್ಕಾಗಿ, ಹಳ್ಳಿಗಳ ಹಾಗೂ ಗ್ರಾಮಾಂತರ ಪ್ರದೇಶಗಳ ಉತ್ತರೋತ್ತರದ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಈ ಯೋಜನೆಗಳನ್ನು ಇಟ್ಟುಕೊಂಡಿದ್ದಾರೆ. ಈ ಪಂಚವಾರ್ಷಿಕ ಯೋಜನೆಗಳು ಮುಂದುವರೆದಂತೆಲ್ಲಾ ಹಿಂದುಳಿದ ಪ್ರದೇಶಗಳಲ್ಲರುವ ಭೇದ ಭಾವಗಳು ತಾರತಮ್ಯಗಳು ಕಡಿಮೆಯಾಗುತ್ತವೆ. ವ್ಯವಸಾಯಕ್ಕೆ ಮತ್ತು ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳು ಮತ್ತು ಇತರ ವಸ್ತುಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಿ ಹೆಚ್ಚಿನ ಉಪಯೋಗ ಪಡೆಯಲಿಕ್ಕೆ ಈ ಯೋಜನೆಯಿಂದ ಅವಕಾಶವಾಗುತ್ತದೆ. ಆಯಾ ಸ್ಥಳದಲ್ಲರುವ ಸಂಸ್ಥೆಗಳಿಗೆ ಮತ್ತು ಕಾರ್ಖಾನೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕು, ಆ ಮೂಲಕ ದೇಶದ ಜನರ ಬದುಕು ಬಂಗಾರವಾಗುವಂತೆ ಮಾಡಬೇಕೆನ್ನು

(ಶ್ರೀ ಎಸ್. ನುಬ್ಬಯ್ಯ ನಾಯಕ್)

ವುದೇ ಈ ಪಂಚವಾರ್ಷಿಕ ಯೋಜನೆಯ ಮುಖ್ಯ ಉದ್ದೇಶ. ಭಾರತ ದೇಶದಲ್ಲಿ ಹಾಗೂ ಮೈಸೂರು ದೇಶದಲ್ಲಿ ನುಮಾರು ನೂರಕ್ಕೆ 70-80 ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಹಳ್ಳಿಗಳ ರಾಜ್ಯ ವೆಂದು ನಮ್ಮ ದೇಶಕ್ಕೆ ಹೆಸರು ಬಂದಿದೆ. ಹಳ್ಳಿಗಳ ಉದ್ಧಾರವಾದರೆ, ಹಳ್ಳಿಗಳಲ್ಲಿರುವ ಜನರು ಕ್ಷೇಮ ವಾಗಿದ್ದರೆ ದೇಶದ ಉದ್ಧಾರವಾದ ಹಾಗೆ. ರೈತನ ಆರ್ಥಿಕಮಟ್ಟ ಹೆಚ್ಚಿದರೆ ದೇಶದ ಆರ್ಥಿಕ ಮಟ್ಟ ಹೆಚ್ಚಿದ ಹಾಗೆ. ರೈತನ ಅಭಿವೃದ್ಧಿಯಾದರೆ ಸರ್ಕಾರದ ಕೆಲಸವೂ ಸುಲಭವಾಗಿ ಮುಂದುವರಿಯುತ್ತದೆ. ಆತನ ದಕ್ಷತೆ ಹೆಚ್ಚಿದರೆ ಹೆಚ್ಚು ಹಣ ಸಂಪಾದಿಸುತ್ತಾನೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ಮಂಡ್ಯ ಜಿಲ್ಲೆಯಲ್ಲಿ ರೈತರಿಗೆ ಹೆಚ್ಚಿನ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟ ಕಾರಣ ಹೆಚ್ಚಿನ ಬೆಳೆಯನ್ನು ಬೆಳೆಯಲಿಕ್ಕೆ ಪ್ರಾರಂಭ ಮಾಡಿದರು. ಹೆಚ್ಚಿನ ಹಣವನ್ನು ಸಂಪಾದನೆ ಮಾಡಿದರು. ಜನರೇ ಸೇರಿಕೊಂಡು ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಸಾರ್ವಜನಿಕ ಹಿತ ದೃಷ್ಟಿಯಿಂದ ಕೆಲಸಕಾರ್ಯಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದರು. ಇಂಜಿನಿಯರಿಂಗ್ ಕಾಲೇಜನ್ನು ಜನರು ತಮ್ಮ ಪ್ರಯತ್ನದಿಂದಲೇ ಪ್ರಾರಂಭ ಮಾಡಿದರು. ಈ ರೀತಿಯಲ್ಲಿ ನೋಡಿದರೆ ಪಂಚ ವಾರ್ಷಿಕ ಯೋಜನೆಯಿಂದ ದೇಶದ ಅಭಿವೃದ್ಧಿಯಾಗುತ್ತದೆ, ಜನರ ಆರ್ಥಿಕಮಟ್ಟ ಹೆಚ್ಚುತ್ತದೆ. ಆದ್ದರಿಂದ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ರೂಪುಗೊಳ್ಳಬೇಕು ಎಂದು ಹೇಳುತ್ತೇನೆ. ನಮಗೆ 1965ನೇ ಇಸವಿಯಲ್ಲಿ ಕೊಟ್ಟ ಮುಮ್ಮಾರ್ಯಾಂಡಮ್‌ನಲ್ಲಿ ನಾಲ್ಕನೆ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷದ ಪ್ಲಾನನ್ನು ತಯಾರು ಮಾಡುವಾಗ ಎಮರ್ಜೆನ್ಸಿ ಇತ್ತು ಎಂದು ಹೇಳಿದೆ. 500 ಕೋಟಿ ರೂಪಾಯಿಗಳನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಖರ್ಚು ಮಾಡಬೇಕೆಂದು ಇತ್ತು. ಆದರೆ ಈಗ ಕೊಟ್ಟಿರುವ ನೋಟ್ ಪ್ರಕಾರ 537 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆ ಎಂದು ಸೂಚಿಸಿದ್ದಾರೆ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ರಾಜ್ಯ 250 ಕೋಟಿ ಖರ್ಚುಮಾಡಬೇಕೆಂದು ಇತ್ತು. ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ 537 ಕೋಟಿ ರೂಪಾಯಿಗಳನ್ನು ಅಳವಡಿಸಿಕೊಳ್ಳಬೇಕೆಂದು ಇದರಲ್ಲಿ ಸೂಚಿಸಿದ್ದಾರೆ. 1966-67ನೇ ಸಾಲಿಗೆ 50-81 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಹೇಳಿದ್ದಾರೆ. ಇದು ಬಹಳ ಕಡಮೆಯಾಯಿತೆಂದು ಹೇಳುತ್ತೇನೆ. ಲೆಕ್ಕದ ಪ್ರಕಾರ 1966-67ನೇ ಸಾಲಿಗೆ 107 ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು. ಆದರೆ ಕೇವಲ 50.81 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದ್ದರಿಂದ ಈಗಿರುವುದನ್ನು 75 ಕೋಟಿ ರೂಪಾಯಿಗಾದರೂ ಏರಿಸಬೇಕೆಂದು ಹೇಳುತ್ತೇನೆ. ಕೆಲವೊಂದು ಕಾರ್ಯಕ್ರಮಗಳು ಬಹಳ ನಿಧಾನವಾಗಿ ನಡೆಯುತ್ತಿವೆ. ಉದಾಹರಣೆಗೆ ಹೇಳಬೇಕೆಂದರೆ, ಮೈನರ್ ಇರಿಗೇಷನ್, ಲಿಫ್ಟ್ ಇರಿಗೇಷನ್‌ಗೆ ಬಹಳ ಕಡಮೆ ಹಣ ಇಟ್ಟಿದ್ದಾರೆ. ಇವುಗಳಿಗೆ ಹೆಚ್ಚು ಹಣ ಇಟ್ಟು ಹೆಚ್ಚಿನ ಪ್ರಾಜೆಕ್ಟುಗಳನ್ನು ತೆಗೆದುಕೊಂಡರೆ ಜನರು ಸಹ ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಅಲ್ಲದೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಲೆಕ್ಕದ ಪ್ರಕಾರ 107 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕಾಗದಿದ್ದರೂ, ಇನ್ನು 50 ಕೋಟಿ ರೂಪಾಯಿಗಳನ್ನಾದರೂ ಹೆಚ್ಚು ಒದಗಿಸುವುದು ಒಳ್ಳೆಯದು ಎಂದು ಹೇಳುತ್ತೇನೆ. ಮೈನರ್ ಇರಿಗೇಷನ್ ವಿಚಾರ ಹೇಳುವಾಗ, ಮೂರನೆ ಯೋಜನೆಯಲ್ಲಿ ಈ ಬಾಬಿಗೆ 1,600 ಲಕ್ಷ ಒದಗಿಸಿದ್ದರು. ನಾಲ್ಕನೇ ಯೋಜನೆಯಲ್ಲಿ 4,000 ಲಕ್ಷ ಒದಗಿಸಿದ್ದಾರೆ. ಇದರಲ್ಲಿ 1966-67ನೇ ಸಾಲಿಗೆ 620 ಲಕ್ಷ ಒದಗಿಸಿದ್ದಾರೆ, ಲೆಕ್ಕದ ಪ್ರಕಾರ ೯೦೦ ಲಕ್ಷ ಒದಗಿಸಬೇಕಾಗಿತ್ತು. ಈಗಾಗಲೆ ಕೆಲಸಕಾರ್ಯಗಳು ತಡವಾಗಿವೆ. ಉದ್ದೇಶಕ್ಕಿಂತಲೂ ಬಹಳ ಹಣ ಒದಗಿಸಿರುವುದರಿಂದ ದೇಶದ ಅಭಿವೃದ್ಧಿ, ರೈತರ ಅಭಿವೃದ್ಧಿ ಕುಂಠಿತವಾಗುತ್ತದೆ. ದೇಶದ ಅಭಿವೃದ್ಧಿಗಾಗಿ ಕೆಲಸ ಮಾಡುವ ರೈತರ ಕಡೆ ಸರ್ಕಾರದವರು ಗಮನ ಹರಿಸಬೇಕು. ಆದ್ದರಿಂದ ಈ ಬಾಬಿಗೆ 800 ಲಕ್ಷ ಇಡಬೇಕೆಂದು ಹೇಳುತ್ತೇನೆ. ಮೂರನೆ ಪ್ಲಾನ್‌ನಲ್ಲಿ ಇರಿಗೇಷನ್ ಮತ್ತು ಪವರ್‌ಗಾಗಿ ಶೇಕಡ 40-70 ಇಟ್ಟಿದ್ದಾರೆ. ಹಾಗೆಯೇ ಅಗ್ರಿಕರ್‌ಚರ್ ಮತ್ತು ಕಮ್ಯುನಿಟಿ ಡೆವಲಪ್‌ಮೆಂಟ್‌ಗೆ 25 ಪರ್ ಸೆಂಟ್ ಒದಗಿಸಿದ್ದಾರೆ. ವ್ಯವಸಾಯದ ಬಾಬು ಬಹಳ ಮುಖ್ಯವಾಗಿರುವುದರಿಂದ ಇದಕ್ಕೆ 40 ಪರ್ ಸೆಂಟ್ ಇಡಬೇಕಾಗಿತ್ತು. ಹಿಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ಪಡೆದ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು ಸಹ ಕೃಷಿ ಬಾಬಿಗೆ ಹೆಚ್ಚು ಹಣವನ್ನು ಈ ಸಾಲಿಗೆ ಇಟ್ಟಿಲ್ಲ. ಆದ್ದರಿಂದ ಆಹಾರಕ್ಕೋಸ್ಕರವಾಗಿ ತೊಳಲಾಡಬೇಕಾಗಿದೆ. ಈ ವರ್ಷ ಬರಗಾಲ ಬೇರೆ ಬಂದಿದೆ. ನಾವು ಇಟ್ಟುಕೊಂಡಿರುವ ಒಂದು ಗುರಿಯನ್ನು ಮುಟ್ಟಲಿಕ್ಕಾದರೂ ಸಹ ಕೃಷಿ ಬಾಬಿನ ಕಡೆಗೆ ಹೆಚ್ಚಿನ ಗಮನವನ್ನು ಹರಿಸಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ ನಾನು ಹೇಳುವುದು, ಇದುವರೆಗೆ ಕೃಷಿಗಾಗಿ ಕೊಟ್ಟ ಗಮನ ಸಾಲದಾಗಿದೆ. ಆದ್ದರಿಂದ ಕೃಷಿ ಬಾಬಿಗೆ ಇಟ್ಟಿರುವ 25 ಪರ್ಸೆಂಟ್‌ನ್ನು 40 ಪರ್‌ಸೆಂಟ್‌ಗೆ ಹೆಚ್ಚಿಸಿದರೆ ಸರ್ವತೋಮುಖವಾದ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾದೀತುಎಂದು

ಹೇಳುತ್ತೇನೆ. ಕೃಷಿ ವಿಚಾರ ಹೇಳುವಾಗ ಇನ್ನೊಂದು ವಿಚಾರ ಮಾಡಬೇಕು. ಜಿಲ್ಲಾವಾರು ಸ್ಕೀಮುಗಳನ್ನು ತಯಾರಿಸುವುದು ಅಗತ್ಯವೆಂದು ಕಾಣುತ್ತದೆ. 19 ಜಿಲ್ಲೆಯೊಳಗೂ ಸರ್ವೆಮಾಡಿಸಿ ಯಾವ ಯಾವ ಭಾಗದಲ್ಲಿ ಏನೇನು ಬೆಳೆ ಬೆಳೆಯಬಹುದು, ಅಲ್ಲಿಗೆ ಏನೇನು ಸೌಕರ್ಯಗಳು ಬೇಕು ಎಂಬುದರ ಬಗ್ಗೆ ವಿವರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಚತುರ್ಥ ಪಂಚವಾರ್ಷಿಕ ಯೋಜನೆಯಲ್ಲಿಯೇ ಅದನ್ನೆಲ್ಲಾ ಸಂಪೂರ್ಣವಾಗಿ ನಿರ್ವಹಿಸಲಿಕ್ಕೆ ದೃಢ ನಿರ್ಧಾರ ಮಾಡಬೇಕು. ಆಗ ಮಾತ್ರ ಆಹಾರದಲ್ಲಿ ಸ್ವಾವಲಂಬಿಗಳಾಗುವುದಕ್ಕೆ, ಮತ್ತು ನಮ್ಮ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಭಾನ್ಕರಶೆಟ್ಟಿ (ಕಾಪು).—ಇಷ್ಟು ಮಹತ್ವವಾದ ನಾಲ್ಕನೆ ಪಂಚವಾರ್ಷಿಕ ಯೋಜನೆ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಯಾರೊಬ್ಬ ಮಂತ್ರಿಯೂ ಸಹ ಪಾಯಿಂಟ್‌ಗಳನ್ನು ಗುರುತು ಮಾಡಿಕೊಳ್ಳಲಿಕ್ಕೆ ಇಲ್ಲಿ ಇಲ್ಲ. ಇದರಿಂದ ಇವರು ಎಷ್ಟು ನಿರ್ಲಕ್ಷ್ಯದಿಂದ ಇದ್ದಾರೆ ಎಂಬುದು ಗೊತ್ತಾಗುತ್ತದೆ.

Mr. SPEAKER.—Order, Order.

ಶ್ರೀ ಎಸ್. ನುಬ್ಬಯ್ಯನಾಯಕ್.—ನೀರಾವರಿ ವಿಷಯ ಹೇಳಬೇಕಾದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಅಪ್ಪರ್ ಕೃಷ್ಣಾ ಮತ್ತು ಗೋದಾವರಿ ಬೇಸಿನ್ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕೆಂದು ಚರ್ಚಿಸಿ ಒಮ್ಮತದ ನಿರ್ಣಯವನ್ನು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ನೀರಾವರಿ ಕೆಲಸ ನೂರಕ್ಕೆ 7-8 ಇದೆ, ಮದ್ರಾಸಿನಲ್ಲಿ 40 ಪರ್ಸೆಂಟ್ ಇದೆ. ನಮ್ಮಲ್ಲಿಯೂ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂದು ಸರ್ಕಾರದವರು ನಿರ್ಧಾರ ಕೈಗೊಂಡಿದ್ದಾರೆ; ಮತ್ತು ಆ ಪ್ರಕಾರವಾಗಿ ಕೆಲಸ ಮಾಡುತ್ತಲೂ ಇದ್ದಾರೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಬೇಕೆಂದು ಸರ್ಕಾರ ಮನಸ್ಸು ಮಾಡಿದರೂ ಕೇಂದ್ರ ಸರ್ಕಾರ ಧಾರಾಳವಾಗಿ ಹಣವನ್ನು ಕೊಡುತ್ತಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ 200 ಇಂಚು ವರೆಗೂ ಮಳೆ ಬೀಳುತ್ತದೆ. ಆದರೆ ಆ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಹೆಚ್ಚು ಮಳೆ ಬೀಳುವ ಪ್ರದೇಶವಾಗಿರುವುದರಿಂದ ಅಣೆಕಟ್ಟುಗಳನ್ನು ಕಟ್ಟಿದರೆ ಅದರಿಂದಏನೂ ಪ್ರಯೋಜನವಾಗುವುದಿಲ್ಲ. ಅಲ್ಲ ಲಫ್ಟ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್‌ನಿಂದ ಹೆಚ್ಚು ಪ್ರಯೋಜನವನ್ನು ಪಡೆಯಬಹುದು; ಅದ್ದರಿಂದ ನಣ್ಣ ನೀರಾವರಿ ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

1959ನೇ ಇನವಿ ಫೆಬ್ರುವರಿ ತಿಂಗಳಿನಲ್ಲಿ ದೊಡ್ಡಯ್ಯ ಕಮಿಟಿ ಎಂದು ಮಾಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ನೀರಾವರಿ ಸೌಕರ್ಯಗಳನ್ನು ಮಾಡಬಹುದು ಎನ್ನುವುದರ ವಿಚಾರದಲ್ಲಿ ಅವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಆದರ ಮೇಲೆ ಏನೂ ಕಾರ್ಯಕ್ರಮ ಮಾಡಿಲ್ಲ, ಏನೂ ಪ್ರಾರಂಭ ಮಾಡಿದ ಹಾಗೂ ಕಾಣುವುದಿಲ್ಲ. ಈ ಕಮಿಟಿಯವರು ಹೇಳಿರುವ ನಲಹೆಗಳನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲ ಯಾವ ವಿಧದಿಂದ ನೋಡಿದರೂ ಬರೇ ಮೈನರ್ ಇರಿಗೇಷನ್‌ನಿಂದ ಹೆಚ್ಚು ಪ್ರಯೋಜನವೆಂದರೆ ಶೀಘ್ರ ಫಲ ಕೊಡುತ್ತದೆ ಮತ್ತು ಖರ್ಚು ಕಡಮೆ ಬೀಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಅಲ್ಲಿ ಒಂದು, ಎರಡು, ಮೂರು ಬೆಳೆಯವರೆಗೂ ಬತ್ತದ ಬೆಳೆ ತೆಗೆದು ಹೆಚ್ಚಿನ ಆಹಾರವನ್ನು ಒದಗಿಸುವುದಕ್ಕೆ ಅವಕಾಶವಾಗುತ್ತದೆ.

ಇನ್ನು ವ್ಯವಸಾಯ ಏಕೆ ವಿಫಲ ಆಗಿದೆ ಎಂಬುದನ್ನು ಪರಿಶೀಲಿಸಿ ಇದನ್ನು ಹೆಚ್ಚು ಪ್ರಬಲಗೊಳಿಸುವುದಕ್ಕೆ ಏನೇನು ಕಾರ್ಯಕ್ರಮವನ್ನು ತೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. ಮುಖ್ಯವಾಗಿ ಕೃಷಿಯನ್ನು ಕೇಂದ್ರವಾಗಿಟ್ಟುಕೊಂಡು ಕೈಗಾರಿಕೆ ಅಥವಾ ಆತರ ಸಾಮಾಜಿಕ ಕಾರ್ಯಗಳು ಮುಂದುವರಿಯಬೇಕು. ಅಲ್ಲದೆ ಹೋದರೆ ಎಷ್ಟು ಪಂಚವಾರ್ಷಿಕ ಯೋಜನೆಗಳನ್ನು ಮಾಡಿದರೂ ಏನೂ ಪ್ರಯೋಜನವಾಗರಾರದು, ಅದು ನಿರರ್ಥಕ ಎಂದು ಹೇಳಬಹುದು.

ಮೊನ್ನೆಯ ದಿನ ಕೇಂದ್ರ ಸರ್ಕಾರದ ಯೋಜನಾ ಸಚಿವರಾದ ಶ್ರೀ ಅಶೋಕಾ ಮೆಹತಾ ಅವರು ಹೇಳಿದಂತೆ ದೃಢ ಮನಸ್ಸು ಮಾಡಿ, ತ್ಯಾಗ ಮನಸ್ಸು ಮಾಡಿ ಸರ್ಕಾರಕ್ಕೆ ಕರ ಕಂದಾಯಗಳನ್ನು ಸರಿಯಾಗಿ ಕೊಡಬೇಕು. ಕರವನ್ನು ವಸೂಲು ಮಾಡುವಾಗ ಎಲ್ಲ ಹೆಚ್ಚಿಗೆ ಉತ್ಪತ್ತಿ ಇದೆಯೋ ಅಲ್ಲಿಂದ ವಸೂಲು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಬಡವರಿಗೆ ತೊಂದರೆಯನ್ನುಂಟು ಮಾಡುವ ಯಾವ ಯೋಜನೆಯನ್ನೂ ಮಾಡಬಾರದು ಎಂದು ಹೇಳುತ್ತೇನೆ.

ಕೃಷಿ ವಿಚಾರವನ್ನು ಹೇಳುತ್ತ ಹೋಗುವಾಗ ಕೆಲವು ಜಿಲ್ಲೆಗಳಲ್ಲಿ ಅರಣ್ಯ ಬೆಳೆಯುತ್ತದೆ. ಅಂಥ ಜಿಲ್ಲೆಗಳಲ್ಲಿ ಕಾಡನ್ನು ಬೆಳೆಸುವ ಗೊಡವೆಗೆ ಹೋಗದಂತೆ ಕಾಡು ಇರುವ ಭೂಮಿಯನ್ನು ಕೃಷಿಗೆ ಕೊಟ್ಟರೆ ಭೂಮಿ ಬಹಳ ಫಲವತ್ತಾಗಿ ಇರುವುದರಿಂದ ಚೆನ್ನಾಗಿ ಕೃಷಿ ಮಾಡಬಹುದು. ಬೇಳು ಭೂಮಿ ಇರುವ ಜಿಲ್ಲೆಗಳಲ್ಲಿ ಎಂದರೆ ಬದರಿ ಅಂಥ ಜಿಲ್ಲೆಗಳಲ್ಲಿ ಕಾಡನ್ನು ಹೆಚ್ಚಾಗಿ ಬೆಳೆಸಲು ಪ್ರಯತ್ನ

(ಶ್ರೀ ಎಸ್. ನುಬ್ಬಯ್ಯನಾಯಕ್)

ಮಾಡಬೇಕು. ಮತೆನಾಡು ಭಾಗಗಳಲ್ಲಿ ಕಾಡು ಬೆಳೆದು ರೈತನ ಹೊಲಗಳಿಗೆ, ಗದ್ದೆಗಳಿಗೆ, ಅವರ ಆಸ್ತಿಪಾಸ್ತಿಗಳಿಗೆ ತುಂಬ ಅನಾನುಕೂಲವಾಗುತ್ತಿದೆ ಎಂದು ಬ್ಯಾನರ್ಜಿಯವರು ಹೇಳುತ್ತಾರೆ. ಸರ್ಕಾರ ಇತ್ತಕಡೆ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ವಿಚಾರವನ್ನು ಇವತ್ತು ಈ ಸಭೆಯಲ್ಲಿ ಚರ್ಚೆಗೆ ಇಟ್ಟುಕೊಂಡಿದ್ದಾರೆ. ಆದರೆ ಇದರ ರೂಪರೇಷೆ ಹೇಗಿರಬೇಕು ಎನ್ನುವ ವಿಚಾರದಲ್ಲಿ ಒಂದು ಸಾಹಿತ್ಯವನ್ನು ಸದಸ್ಯರಿಗೆ ಓದಿಗಿನದೆ ಇರುವುದು ವಿಷಾದಕರವಾಗಿದೆ. ಇದುವರೆಗೂ ಮೂರು ಪಂಚವಾರ್ಷಿಕ ಯೋಜನೆಗಳನ್ನು ನೋಡಿದ್ದೇವೆ. ನಾಲ್ಕನೆಯ ಯೋಜನೆಯಲ್ಲಿ ಕೈಕೊಳ್ಳುವ ಪ್ರಯತ್ನಗಳೇನು, ಈ ಮೂರು ಯೋಜನೆಗಳಲ್ಲಿ ನಡೆದಂಥ ರೀತಿನೀತಿಗಳೇನು ಎಂದು ಸ್ವಲ್ಪ ನೋಡುವುದಾದರೆ ಇದರ ಪ್ರಚಾರ ಹಳ್ಳಿಗಾಡಿನ ಜನರಿಗೆ ಬಹಳ ಮಟ್ಟಿಗೆ ಆಗಿಲ್ಲ ಎಂದರೆ ತಪ್ಪಾಗಲಾರದು. ಈಗಾಗಲೇ ಈ ಮಾನ್ಯ ಸಭೆಯ ನನ್ನ ಸ್ನೇಹಿತರನೇಕರು ನೀರಾವರಿ ವಿಚಾರದಲ್ಲಿ ಬಹಳ ಮಟ್ಟಿಗೆ ಹೇಳಿದ್ದಾರೆ. ಆದುದರಿಂದ ಮತ್ತೆ ಅದನ್ನು ನಾನು ಹೇಳುವುದಕ್ಕೆ ಇಷ್ಟಪಡದೆ ನೀರಾವರಿ ಯೋಜನೆಗಳಲ್ಲದೆ ಬಹಳ ಪ್ರಾಮುಖ್ಯವಾದ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿಯ ಈ ಎರಡು ವಿಚಾರಗಳಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

10-30 A.M.

ಕೈಗಾರಿಕೆ ಮೈಸೂರು ರಾಜ್ಯದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮೈಸೂರುದೇಶ ಮಾದರಿ ದೇಶವಾಗಿತ್ತು. ಬಹಳ ಹಿಂದೆಯೇ, ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿಯೇ ಕೈಗಾರಿಕೀಕರಣ ಈ ದೇಶದಲ್ಲಿ ಆಗಬೇಕೆಂದು ಭಾರತ ರತ್ನ ಮೋಕ್ಷಗುಂಡುಂ ವಿಶ್ವೇಶ್ವರಯ್ಯನವರು ಈ ಯೋಜನೆಯ ಮೊದಲ ಕನಸು ಕಂಡರು. ಅವರು ಮತ್ತು ಅವರ ನಂತರ ಬಂದಂಥ ರಾಜರು ಮತ್ತು ಇಲ್ಲಿಯ ಪ್ರಧಾನ ಮಂತ್ರಿಗಳು ಬಹಳಮಟ್ಟಿಗೆ ಕೆಲಸ ಮಾಡಿ ಭದ್ರಾವತಿ ಕಬ್ಬಿಣದ ಕಾರ್ಖಾನೆ, ಸರ್ಕಾರಿ ಸಾಬೂನು ಕಾರ್ಖಾನೆ, ಎರೆಕ್ಟ್ರಿಕರ್ ಫ್ಯಾಕ್ಟರಿ, ಇಂಥ ಬೆಲೆಬಾಳುವ ಬಹಳ ಅಮೂಲ್ಯವಾದ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರು. ಈ ಕಾರ್ಯಗಳನ್ನು ಅವರು ಪ್ರಯತ್ನ ಮಾಡಿದರೂ ಕೂಡ ಸರ್ಕಾರವೇ ಇದರ ಮೇಲ್ವಿಚಾರಣೆಯನ್ನು ವಹಿಸಿಕೊಂಡರು ಕೂಡ ಎಷ್ಟು ಬಂಡವಾಳವನ್ನು ಅವರು ಹಾಕಿದ್ದರೂ ಕೂಡ ಅದಕ್ಕೆ ತಕ್ಕ ಪ್ರತಿಫಲ ಇದರಿಂದ ಬರುತ್ತಾ ಇಲ್ಲವೆಂದು ನಾನು ಹೇಳುತ್ತೇನೆ, ಏಕೆಂದರೆ, ಈ ಪ್ರೈವೇಟ್ ಸೆಕ್ಟರ್‌ನಲ್ಲಿ ಜನ ಬಂಡವಾಳಕ್ಕೆ ತಕ್ಕಂತೆ ಬಿಡ್ಡಿಯನ್ನು ಗಿಟ್ಟಿಸುವ ಜೊತೆಗೆ ಬಹಳವಾಗಿ ಹೆಚ್ಚು ಹೆಚ್ಚು ಉತ್ಪಾದನೆ ಮಾಡತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿದ್ದಾರೆ. ಆದರೆ ರಾಷ್ಟ್ರೀಕರಣ ಮಾಡತಕ್ಕ ಕೈಗಾರಿಕೆಗಳನ್ನು ನೋಡಿದರೆ ಬಹಳ ವಿಷಾದಪಡಬೇಕಾಗಿದೆ. ಸಿಬ್ಬಂದಿಯನ್ನು ಜಾಸ್ತಿ ಮಾಡಿ ಬರತಕ್ಕ ಉತ್ಪತ್ತಿಯನ್ನು ಸಿಬ್ಬಂದಿಯ ಸಂಬಳ ಸಾರಿಗೆ ಇವುಗಳಿಗೆ ಉಪಯೋಗಿಸುತ್ತಿದ್ದಾರೆಯೇ ವಿನ ಇವರು ಹಾಕತಕ್ಕ ಬಂಡವಾಳದಿಂದ ಅಷ್ಟಾಗಿ ಉತ್ಪತ್ತಿ ಸರಕಾರಕ್ಕೆ ಬರುತ್ತಾ ಇಲ್ಲ. ಅದರಿಂದಲೇ ಈ ದೇಶದಲ್ಲಿ ಕಾವೇರಿ ಮತ್ತು ಕೃಷ್ಣಾ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಲ್ಲಿ ಸಾಕಷ್ಟು ಹಣವಿಲ್ಲ. ಕೇಂದ್ರ ಸರ್ಕಾರದವರು ಕೊಡಬೇಕು, ಇಲ್ಲದಿದ್ದರೆ ಬಹಳ ಕಷ್ಟ. ನಿನ್ನೆ ಮೊನ್ನೆ ಮರಾರ್ಜಿ ಶಾಖಾ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆಯನ್ನು ನೋಡಿದರೆ ಇವರಿಗೆ ಸ್ವತಃ ಯಾವ ಕೆಲಸವನ್ನೂ ಮಾಡುವುದಕ್ಕೂ ಆಗುವುದಿಲ್ಲ, ಇವರ ಸಹಾಯಕ್ಕೆ ಮತ್ತೊಬ್ಬರು ಬರುವುದು ಬಹಳ ಅಗತ್ಯವೆಂದು ಆ ಹೇಳಿಕೆಗಳಿಂದ ನನಗೆ ಗೊತ್ತಾಗುತ್ತದೆ. ಇವತ್ತು ಪ್ರೈವೇಟ್ ಸೆಕ್ಟರಿನಲ್ಲಿ ನಮಗೆ ಎಷ್ಟೋ ಕೈಗಾರಿಕೆ ಇರಾಖೆಗಳು ಸ್ಥಾಪನೆಯಾಗಿದ್ದರೂ ಕೂಡ ಅಲ್ಲಿರುವವರಿಗೆ ನಿಜವಾಗಿ ಕೈಗಾರಿಕೆ ವಿಷಯ ಗೊತ್ತಿದೆಯೇ ಎಂಬ ಪರಿಸ್ಥಿತಿ ಎಂವಿದೆ. ಅಸ್ಸಿರತಕ್ಕ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಅವರಿಗೆ ಯಾವ ರೀತಿ ಕೈಗಾರಿಕೆಗಳನ್ನು ಸ್ಥಾಪಿಸಿದರೆ ಕೈಗಾರಿಕಾಭಿವೃದ್ಧಿಯಾಗಿ ಸರಿಹೋಗುತ್ತದೆ, ಎಲ್ಲೆಲ್ಲ ಕೈಗಾರಿಕೆಗಳನ್ನು ತೆರೆಯಬೇಕು ಎಂಬ ವಿಚಾರವೇ ಗೊತ್ತಿಲ್ಲ. ಸುಮ್ಮನೆ ಅವರಿಗೆ ಪ್ರೋಮೋಷ್ಗಳನ್ನು ದಾಕ್ಷಿಣ್ಯಕ್ಕೋಸ್ಕರ ಕೊಟ್ಟು ಬೇಕಾದಷ್ಟು ಅಂತಹ ಅಫೀಸುಗಳನ್ನು ಇವರು ತುಂಬಿಕೊಂಡಿದ್ದಾರೆ. ಇದರಿಂದಲೇ ಹಳ್ಳಿಗಾಡುಗಳಲ್ಲಿ ಏನೂ ಕೆಲಸಗಳಾಗುತ್ತಿಲ್ಲ. ಡೆವಲಪ್‌ಮೆಂಟ್ ಇರಾಖೆಗಳಲ್ಲಿ, ಇಂಡಸ್ಟ್ರಿಯಲ್ ಎಕ್ಸ್‌ಟೆಷನ್ ಆಫೀಸರುಗಳು, ಅಸಿಸ್ಟೆಂಟ್ ಡೈರೆಕ್ಟರ್‌ಗಳು ಪ್ರತಿಯೊಂದು ಜಿಲ್ಲೆಯಲ್ಲೂ ಇದ್ದಾರೆ. ಆದರೆ ಅವರ ಅಧಿಕಾರಾವಧಿಯಲ್ಲಿ ಅವರು ಜಿಲ್ಲೆಯರ್ನಾಗಲೀ ಅಥವಾ ತಾಲ್ಲೂಕ್‌ನರ್ನಾಗಲಿ ಎಷ್ಟು ಕಡೆ ಹೋಗಿದ್ದಾರೆ, ಏನೇನು ಕಚ್ಚಾಮಾಲುಗಳು ಎಲ್ಲೆಲ್ಲಿ ಸಿಗುತ್ತವೋ ಅವನ್ನು ಒಂದು ಕಡೆ ಕೂಡಿ ಹಾಕಿ ಇಂಥಿಂಥ ಕೈಗಾರಿಕೆಗಳನ್ನು ಸ್ಥಾಪನೆ

ಮಾಡುವುದಕ್ಕೆ ಇಂಥಿಂಥ ಅನುಕೂಲಗಳಿವೆ ಎಂಬುದಾಗಿ ಸರ್ಕಾರಕ್ಕೇನಾದರೂ ವರದಿ ಮಾಡಿದ್ದಾರೆಯೇ ಅಂದರೆ ಯಾರಾದರೂ ಆ ರೀತಿಯಲ್ಲಿ ವರದಿಗಳನ್ನು ಈಗಾಗಲೇ ಕಳುಹಿಸಿರುವರೇ ಎಂದು ಕೇಳಿದರೆ ಇಲ್ಲವೆಂದು ಹೇಳುವ ಪರಿಸ್ಥಿತಿ ಸರ್ಕಾರಕ್ಕೆ ಬಂದಿದೆ. ಆದ್ದರಿಂದ ಇಂತಹ ಇರಾಖೆಗಳು ಏತಕ್ಕೆ ಇರಬೇಕು ? ಈ ವರ್ಷ ಮಳೆ ಬೆಳೆಯಂತೂ ಆಗಲಿಲ್ಲ. ರೇವತಿ ಮಳೆ ಬೀಳಲೇ ಇಲ್ಲ. ಇದೇ ರೀತಿ ನಡೆದರೆ ಮುಂದಿನ ವರ್ಷವೂ ಕೂಡ ಮಳೆ ಕೈ ಕೊಡುತ್ತದೆ. ಅದರಿಂದ ಬಹಳ ತೊಂದರೆಯಾಗುತ್ತದೆಂದು ನನಗೆ ಭಾನವಾಗುತ್ತದೆ. ಹಿಂದೆ ಒಬ್ಬ ದೊಡ್ಡ ತತ್ವಜ್ಞಾನಿ ಒಂದು ಮಾತನ್ನು ಹೇಳಿದ್ದರು. 30-40 ವರ್ಷಗಳಿಗೊಂದು ಸಾರಿ ಒಂದು ವರ್ಷ ಮಳೆಯಾಗದೆ ಹಾಗೆಯೇ ಇದ್ದರೆ ಬರುವ ವರ್ಷವೂ ಹಾಗೆಯೇ ಇರುತ್ತದೆಂದು. ಹೋದ ಸಾರಿ ಮಳೆ ಪೂರ್ತಿಯಾಗಿ ಹೋಯಿತು. ಈ ಸಾರಿಯೂ ಮಳೆ ಹೋಗತಕ್ಕ ಸೂಚನೆ ಕಾಣುತ್ತಾ ಇರುವುದರಿಂದ ಈಗ ರೈತರು ವ್ಯವಸಾಯವನ್ನೇ ನಂಬಿ ಕುಳಿತುಕೊಳ್ಳುವುದಕ್ಕೆ ಬದಲಾಗಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಪ್ರತಿಯೊಂದು ಹಳ್ಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಸರ್ಕಾರದವರು ಸಣ್ಣಪುಟ್ಟ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಅಲ್ಲಿನ ಜನರಿಗೆಲ್ಲರಿಗೂ ಜೀವನವನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಅಲ್ಲಿನ ಜನರು ಬಹಳ ತೊಂದರೆಯಾದ ಪರಿಸ್ಥಿತಿ ಬರುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಹೆಂಚಿನ ಕಾರ್ಖಾನೆಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಕರ್ನಾರು ಹೊಳೇನರಸೀಪುರದಲ್ಲಿ ವಿಶೇಷವಾಗಿ ದೊರೆಯುವುದರಿಂದ ಅಲ್ಲಿ ಒಂದು ಕಾರ್ಖಾನೆಯನ್ನು ತೆರೆದಿದ್ದಾರೆ ಸುಮಾರು 100 ಜನರವರೆಗೆ ಕೆಲಸ ಸಿಗತಕ್ಕ ಕನುಬುಗಳನ್ನು ಬೇಕಾದಷ್ಟು ಮಾಡಬಹುದು. ತಿಪಟೂರು ವಗೈರೆ ಪ್ರಾಂತಗಳಲ್ಲಿ ಟಿಪ್ಪಿನಿಂದ ಮಾಡತಕ್ಕ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ ಇದನ್ನೆಲ್ಲಾ ಯೋಚಿಸಿ ನಾವೂ ಸರ್ಕಾರದವರೂ ಜೊತೆಗೂಡಿ ಎಲ್ಲವನ್ನೂ ರಾಷ್ಟ್ರೀಕರಣ ಮಾಡೋಣವೆಂದರೆ ಸರ್ಕಾರದಲ್ಲಿ ಸಾಕಷ್ಟು ಬಂಡವಾಳವಿಲ್ಲ. ಈ ಬಗ್ಗೆ ಸಾರ್ವಜನಿಕರಿಗೆ ಬೇಕಾದಷ್ಟು ಹುಮ್ಮಸ್ಸು, ಪ್ರೋತ್ಸಾಹ ಕೊಟ್ಟು ಅವರು ಹೆಚ್ಚು ಹೆಚ್ಚಿಗೆ ಕೈಗಾರಿಕೆಗಳನ್ನು ತೆರೆಯುವುದಕ್ಕೆ ಸರ್ಕಾರದವರು ಸಹಾಯ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಲೇಬರರ್ಸ್ ಮತ್ತು ಮ್ಯಾನೇಜ್‌ಮೆಂಟಿನವರು–ಇವರಿಬ್ಬರ ಸಂಬಂಧ ಸರಿಯಾಗಿಲ್ಲದೆ ಅನೇಕ ಸಾರಿ ಮುಷ್ಕರಗಳು ನಡೆದು ಅಲ್ಲಿ ಆಗತಕ್ಕ ಉತ್ಪತ್ತಿ ಸರಿಯಾಗಿ ಆಗುತ್ತಾ ಇಲ್ಲ ನನ್ನ ಸಲಹೆ ಈ ಬಗ್ಗೆ ಏನೆಂದರೆ ಕಾರ್ಮಿಕರು ಮತ್ತು ಬಂಡವಾಳಗಾರರು ಉತ್ಪತ್ತಿಗೆ ತಕ್ಕಂತೆ ಲೇಬರರ್ಸಿಗೆ ಸರಿಯಾದ ಕೂಲಿ ವಗೈರೆ ನಿಷ್ಕರ್ಷೆ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಬಂಡವಾಳಕ್ಕೆ ತಕ್ಕ ಬಡ್ಡಿ, ಅದಕ್ಕೆ ಖರ್ಚು, ಇದನ್ನು ತೆಗೆದರೆ ಈ ಸಂಸ್ಥಾನದಲ್ಲಿ ಉಳಿಯತಕ್ಕ ಹಣವನ್ನು ಕೈಗಾರಿಕೆಗೆ ಹಾಕುವುದರಿಂದ ಬಡವರ ಮೇಲೆ ಹೆಚ್ಚು ಹೆಚ್ಚು ತೆರಿಗೆ ಹಾಕುವುದಕ್ಕೆ ಬದಲಾಗಿ ಕೈಗಾರಿಕೆಗಳಿಂದ ಹೆಚ್ಚು ವರಮಾನ ಪಡೆಯಬಹುದು. ಈಗ ಅದನ್ನು ಒಂದು ಪರ್ಸಂಟೇಜ್‌ವರೆಗೆ ಮಾಡಿಕೊಂಡು ಬಾಕಿ ಉಳಿಕೆಯನ್ನು ಹೆಚ್ಚು ಕೂಲಿ ವಗೈರೆಗಾಗಿ ಕೂಲಿಗಾರರಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಲೇಬರರ್ಸ್ ಮತ್ತು ಮ್ಯಾನೇಜ್‌ಮೆಂಟಿನವರು ಹೀಗೆ ಇವರಿಬ್ಬರೂ ಸೇರಿರುವಂತೆ ಒಂದು ಆಡಳಿತ ಮಂಡಲಯನ್ನು ಮಾಡಬೇಕೆಂದು ಹೇಳುತ್ತೇನೆ.

ಮತ್ತೆ ಇವೆಲ್ಲಕ್ಕಿಂತ ಮುಖ್ಯವಾಗಿ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು. ವಿದ್ಯಾಭ್ಯಾಸ ಬಹಳ ಮುಖ್ಯವಾದ ವಿಚಾರ. ಇವತ್ತು ವಿದ್ಯಾಭ್ಯಾಸದ ರೀತಿನೀತಿಗಳು ಹಿಂದೆ ಇದ್ದಂತಿಲ್ಲ. ದಿನದಿನಕ್ಕೂ ಮಾರ್ಪಾಟು ಆಗುತ್ತಲೇ ಇದೆ. ಇವತ್ತು ಕರಿಕ್ಯುಲಂ ಮಾಡಿಕೊಳ್ಳತಕ್ಕದ್ದು, ಪಾಠಪ್ರವಚನಗಳನ್ನು ಮಾಡುವ ರೀತಿ. ಇವನ್ನು ನಾವು ನೋಡಿದರೆ ನಾವು ಎಲ್ಲಿಗೆ ಹೋಗುತ್ತೇವೋ ಎಂಬುದಾಗಿ ಅನುಮಾನವಾಗುತ್ತದೆ. ಇನ್ನು ಮಕ್ಕಳು ಬಾಯಿಪಾಠ ಮಾಡಬಾರದು ಎಂದು ಹೇಳುತ್ತಾರೆ. ಇದರಿಂದ ಮಕ್ಕಳಿಗೆ ಪಾಠಗಳು ಕ್ರಮೇಣ ಸರಿಯಾಗಿ ಬರುವುದಿಲ್ಲ. ಇವರು ಕೊಡತಕ್ಕ ವಿದ್ಯಾಭ್ಯಾಸ ಕ್ರಮವೇ ಸರಿಯಾಗಿಲ್ಲ. ನಮ್ಮ ಸಂಸ್ಕೃತಿಗೆ ಅಳವಡಿಸಿಕೊಂಡು ವಿದ್ಯಾಭ್ಯಾಸವನ್ನು ಕೊಡದೇಹೋದರೆ ವಿದ್ಯಾಭ್ಯಾಸದಲ್ಲಿ ನಮಗೆ ಒಳ್ಳೆಯದಾಗುವುದಿಲ್ಲ. ನಾಳೆ ಈ ದೇಶದ ಆಗುಹೋಗುಗಳ ಹೊರೆಯನ್ನು ಹೊರತಕ್ಕಂಥ ಮಕ್ಕಳು ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಪಡೆಯದೆ ಹೋದರೆ ಈ ದೇಶ ವಿನಾಶಕ್ಕೆ ಗುರಿಯಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

[MR. SPEAKER in the Chair]

ಸಾಮಾನ್ಯವಾಗಿ ಎಸ್.ಎಸ್.ಎಲ್.ಸಿ. ಆಗಿರುವವರು, ಗ್ರಾಜುಯೇಟ್ಸ್ ಆಗಿರುವವರು ಒಂದೆರಡು ವಾಕ್ಯಗಳನ್ನು ಸರಿಯಾದ ರೀತಿಯಲ್ಲಿ ವ್ಯಾಕರಣಬದ್ಧವಾಗಿ ಬರೆಯುವುದಕ್ಕೆ ಬಾರದೇ ಇದ್ದರೂ ಅಂತಹವರನ್ನು ಈಗ ಸೆಲೆಕ್ಟ್ ಮಾಡಿದ್ದಾರೆ. ನಾನು ಒಂದೆರಡು ಕಡೆ ಹೋಗಿ ನೋಡಿ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ದ್ದೇನೆ. ಒಂದುಕಡೆ ನಾನೇ ಇದ್ದು ಅಲ್ಲಿನ ಉಪಾಧ್ಯಾಯರಿಗೆ ಒಂದು ಪದವನ್ನು ಸೇರಿಸುವಾಗ ಬ್ಲಾಕ್‌ಬೋರ್ಡ್‌ನಲ್ಲಿ ಬರೆಯಿರಿ ಎಂದು ಹೇಳಿದೆ. ಇವತ್ತು ಟ್ರೈನಿಂಗ್‌ನಲ್ಲಿ ಪಾಸ್‌ಮಾಡಿಕೊಂಡು ಬಂದರೂ ಇಂಥಹ ಟ್ರೈನಿಂಗ್ ಆಗಿರುವವರು ಶಾಲಾ ಮುಖ್ಯೋಪಾಧ್ಯಾಯರಾದರೆ ಅಂತಹವರಿಂದ ನಮ್ಮ ಮಕ್ಕಳಿಗೆ ಸಿಕ್ಕುವ ವಿದ್ಯಾಭ್ಯಾಸ ಯಾವ ಮಟ್ಟದ್ದು ಆಗಿರುತ್ತೆ ಎಂಬುದನ್ನು ಮಾನ್ಯ ಸದಸ್ಯರು ಯೋಚಿಸಬೇಕಾಗಿದೆ. ಈಗ ಹೆಚ್ಚು ಹೆಚ್ಚು ಪ್ರಾಥಮಿಕ ಶಾಲೆಗಳನ್ನು ತೆರೆಯುತ್ತಿದ್ದಾರೆ. ಒಬ್ಬ ಉಪಾಧ್ಯಾಯನಿಗೆ ನುಮಾರು 50-60 ಮಕ್ಕಳ ಮೇಲ್ವಿಚಾರಣೆಯನ್ನು ಕೊಡಬೇಕು. ಅವರಿಗೆ ನಮ್ಮ ದೇಶದ ಸಂಸ್ಕೃತಿಗೆ ತಕ್ಕಂತೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ನಾವು ಈಗಿನಿಂದಲೇ ಪ್ರಯತ್ನ ಮಾಡಬೇಕು. ಒಳ್ಳೆಯ ತರಬೇತು ಆದವರನ್ನು ಯಾವ ದಾಕ್ಷಿಣ್ಯವಿಲ್ಲದೆ ಇಂತಹ ಕೆಲಸಗಳಿಗೆ ನೇಮಿಸಬೇಕು. ಏಕೆಂದರೆ, ಎಲ್ಲಾ ಬಾಬುಗಳಿಗಿಂತಲೂ ಈಗ ವಿದ್ಯಾಭ್ಯಾಸ ಬಾಬಿನಲ್ಲಿ ಜಾತೀಯತೆ ಹಾಗೂ ಪ್ರಾಂತೀಯತೆ ಎನ್ನುವ ವಿಚಾರ ಬರಕೂಡದು. ಆ ಒಂದು ಭಾವನೆ ಅವರಿಗೆ ಬಾರದೇ ಇದ್ದರೆ ಅದರಿಂದ ಮಕ್ಕಳಿಗೆ ಪ್ರಯೋಜನ ಜಾಸ್ತಿಯಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ನಮಗೆ ಗೊಬ್ಬರ ಸರಿಯಾಗಿ ಸಿಕ್ಕುತ್ತಿಲ್ಲ. ಹಳ್ಳಿಗಾಡುಗಳಲ್ಲಿ ಗೋಮಾಳಗಳು ಸಾಕಷ್ಟು ಇಲ್ಲ. ನಮ್ಮಲ್ಲಿ ಹಿಂದೆ ಇದ್ದಹಾಗೆ ದನ ಕುರಿಗಳನ್ನು ಸಾಕುವುದಕ್ಕೆ ಸಾಕಷ್ಟು ಸರಿಯಾದಂತಹ ಪ್ರೋತ್ಸಾಹ ಸಿಕ್ಕುತ್ತಿಲ್ಲ. ದನಕರುಗಳನ್ನು ಮೇಯಿಸುವುದಕ್ಕೆ ಹುಲ್ಲುಗಾವಲುಗಳು ಇಲ್ಲ. ಆದ್ದರಿಂದ ಹೆಚ್ಚುಹೆಚ್ಚಾಗಿ ಗೋಸಂಪತ್ತನ್ನು ಮತ್ತು ಕುರಿಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಆದ್ಯ ಗಮನಕೊಟ್ಟು ಅದಕ್ಕೆ ಬೇಕಾದ ಸೌಕರ್ಯವನ್ನು ರೈತರಿಗೆ ಒದಗಿಸಿಕೊಟ್ಟು ಅವರಿಗೆ ಸಹಾಯ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೈತರು ಬರೀ ವ್ಯವಸಾಯವನ್ನೇ ನಂಬಿಕೊಂಡು ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನಾರ್ಕಾರು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅದರಲ್ಲಿ ಸಾವಿರಾರು ಗಟ್ಟಲೆ ಜನರು ಕೆಲಸಗಳನ್ನು ಪಡೆಯುವುದಕ್ಕೆ ಅನುಕೂಲವಾಗುವಂತೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರ ಸಹಾಯ ಸಿಕ್ಕಲಿ ಅಥವಾ ಸಿಕ್ಕದೇ ಇರಲಿ ರಾಜ್ಯಸರ್ಕಾರದವರೇ ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಂಡು ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕು. ಹೊಸಪೇಟೆ ಮುಂತಾದ ಸ್ಥಳಗಳಲ್ಲಿ ಇಂಥಾ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಮಗೆ ವ್ಯವಸಾಯಕ್ಕೆ ಬೇಕಾದಂತಹ ಉಪಕರಗಳನ್ನು ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಅದರ ಅಗತ್ಯತೆ ಕೂಡ ನಮಗೆ ಇದೆ. ಈಗ ನಾವು ವ್ಯವಸಾಯದ ಹಾಗೂ ಇತರ ಉಪಕರಣಗಳಿಗೆ ಪರದೇಶದವರನ್ನೇ ಅವಲಂಬಿಸಿಕೊಂಡಿದ್ದೇವೆ. ಆ ಪರಾವಲಂಬನೆಯನ್ನು ತಪ್ಪಿಸುವುದಕ್ಕಾಗಿ ಸಣ್ಣ ಸಣ್ಣ ಮತ್ತು ಮಧ್ಯಮ ಪ್ರಮಾಣದ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಬೆಂಗಳೂರು ಒಂದೇ ಪಟ್ಟಣದ ಸುತ್ತಮುತ್ತಲೂ ಹಾಕುವುದಕ್ಕೆ ಬದಲಾಗಿ ಎಲ್ಲೆಲ್ಲಿ ರೈಲ್ವೆ ಸೌಕರ್ಯ ಇದೆಯೋ ಅಂಥಾ ಮುಖ್ಯ ಪಟ್ಟಣಗಳ ಸಮೀಪದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಮ್ಮ ದೇಶಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇದರಲ್ಲಿ ಸರ್ಕಾರದವರು ಹಾಕಿರುವಕ್ಕ ರೀತಿನೀತಿಗಳು ಏನಿವೆ ಅವು ಸಮಾಧಾನಕರವಾಗಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿಯಾದರೂ ನಮ್ಮ ದೇಶಕ್ಕೆ ಅನುಕೂಲವಾಗತಕ್ಕಂಥ ಸ್ಥಿತಿಗತಿಗಳನ್ನು ಸರ್ಕಾರದವರು ಆಳವಾಗಿ ಯೋಚನೆ ಮಾಡುತ್ತಾರೆಂದು ನಾವು ನಂಬಿದ್ದೇವೆ. ದೇಶದ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಸರ್ಕಾರದವರು ಒಂದು ಸರಿಯಾದ ಸನ್ಮಾರ್ಗದಲ್ಲಿ ಹೋದರೆ ಅದಕ್ಕೆ ನಮ್ಮೆಲ್ಲರ ಬೆಂಬಲವೂ ಇದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಧ್ಯಕ್ಷರು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ವಿ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳನ್ನು ಪೂರೈಸಿದ್ದೇವೆ. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಏರ್ಪಾಡ್ ಮಾಡಿ ತಂದು ಅದನ್ನು ಜಯಪ್ರದವಾಗಿ ಕಾರ್ಯಗತ ಮಾಡಲು ಈಗ ಚರ್ಚೆ ಮಾಡುತ್ತಿದ್ದೇವೆ. ಹಿಂದಿನ ಮೂರು ಯೋಜನೆಗಳಲ್ಲಿ ಕಂಡುಬಂದಂತಹ ದೋಷದೋಷಗಳನ್ನು ನರಿಪಡಿಸಿಕೊಂಡು ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಜಯಪ್ರದವಾಗಿ ನಡೆಸಿ ಅದರ ಫಲವನ್ನು ದೇಶದ ಎಲ್ಲಾ ಜನತೆಗೂ ಕೂಡ ದೊರೆಯುವಂತೆ ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಮೂರು ಯೋಜನೆಗಳಲ್ಲಿ ನಾವು ನಿರೀಕ್ಷಿದಷ್ಟು ಜಯವನ್ನು ಗಳಿಸಿದ್ದೇವೆಯೇ

ಎನ್ನುವುದಾದರೆ, ಅದರಿಂದ ಬಹಳಮಟ್ಟಿಗೆ ಫಲ ದೊರೆತಿದೆ ಎಂದು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ದೇಶದ ವರಮಾನ, ನ್ಯಾಷನಲ್ ಇನ್‌ಕಂ ನಾವು ನಿರೀಕ್ಷಿಸಿದಷ್ಟು ಏರದೇ ಇದ್ದರೂ ಕೂಡ ಸ್ವಲ್ಪಮಟ್ಟಿಗಾದರೂ ಜನಗಳ ಆದಾಯ, ಸಂಪಾದನೆ ಮಾಡತಕ್ಕ ಶಕ್ತಿ ಹೆಚ್ಚಾಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇದರಲ್ಲಿ ನ್ಯಾಷನಲ್ ಇನ್‌ಕಂ ಹೆಚ್ಚಾಗಿದೆ ಎಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದಾಯ ಎನ್ನತಕ್ಕಂಥಾದ್ದು ಸರಿಯಾದ ರೀತಿಯಲ್ಲಿ, equitable basis ಮೇಲೆ ಎಲ್ಲರಿಗೂ ಕೂಡ ಕಾಣುವ ರೀತಿಯಲ್ಲ ಎಲ್ಲಾ ಜನರಲ್ಲಿಯೂ ಕೂಡ ಹಂಚಿಕೆಯಾಗಿಲ್ಲ. ಇದಕ್ಕೆ ಕಾರಣ ಅನೇಕ ಪ್ರದೇಶಗಳಲ್ಲ ಗ್ರಾಮಾಂತರ ಪ್ರದೇಶಗಳಲ್ಲ ಜನಗಳಿಗೆ ಹಿಂದೆ ಬಡತನ ಏನಿತ್ತು, ಹಿಂದೆ ಅವರಿಗೆ ಕಷ್ಟಕಾರ್ಪಣ್ಯಗಳು ಏನಿದ್ದವು ಅವೆಲ್ಲವೂ ಮುಂದುವರಿಯುತ್ತಿವೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಹಿಂದೆ ಯಾವ ಒಂದು ವರ್ಗದ ಜನ ಸಂಪಾದನಾ ಶಕ್ತಿಯನ್ನು ಪಡೆದಿದ್ದರೋ, ಯಾರು ಮೂಲಧನವನ್ನು ಇಟ್ಟುಕೊಂಡಿದ್ದರೋ ಅಂಥವರಿಗೆ ಈ ಯೋಜನೆಗಳ ಫಲ ದೊರೆತಿದೆ. ಅವರು ಹೆಚ್ಚಿನ ಉತ್ಪತ್ತಿಯನ್ನು ಮಾಡಿದ್ದಾರೆ. ಅದಕ್ಕೆ ಕಾರಣ ಸರ್ಕಾರದಪ್ಪರು ಯೋಜನೆಗಳಲ್ಲಿ ಜನಗಳಿಗೆ ಏನೇನು ಸೌಲಭ್ಯಗಳನ್ನು ಕೊಟ್ಟರೋ ಅದೆಲ್ಲವೂ ಕೂಡ ಬಡವರಿಗೆ ನೇರವಾಗಿ ದೊರೆಯತಕ್ಕ ಸನ್ನಿವೇಶ ಇರಲಿಲ್ಲ. ಸರಕಾರದಿಂದ ಹಣದ ಒಂದು ಸಹಾಯ ದೊರೆಯಬೇಕಾಗಲೀ ಅಥವಾ ಇನ್ನು ಯಾವುದಾದರೂ ಒಂದು ಸಹಾಯ ದೊರೆಯಬೇಕಾದರೂ ಕೂಡ ಯಾರಿಗೆ ಸರಿಯಾಗಿ ಅಸ್ತಿಪಾಸ್ತಿಗಳು ಇವೆಯೋ ಯಾರಿಗೆ ಸೆಕ್ಯೂರಿಟಿಗಳು ಇವೆಯೋ ಅಂಥವರಿಗೆ ಸಹಾಯ ಸೌಲಭ್ಯಗಳು ದೊರೆತು ಅವರು ಇನ್ನೂ ಹೆಚ್ಚಿನ ಸಂಪಾದನೆ ಮಾಡುವುದಕ್ಕೆ, ಹೆಚ್ಚಿನ ಅನುಕೂಲತೆಯನ್ನು ಪಡೆಯುವುದಕ್ಕೆ ಹಿಂದಿನ ಯೋಜನೆಗಳು ಸಹಕಾರಿಯಾಗಿದ್ದು ಶ್ರೀಮಂತರು ಇನ್ನೂ ಹೆಚ್ಚಿನ ಶ್ರೀಮಂತರಾಗಿದ್ದಾರೆ. ಸಮಾಜದಲ್ಲಿ ಕೆಲವು ವರ್ಗದ ಜನರು, ಕಂಟ್ರಾಕ್ಟರುಗಳು ಹೆಚ್ಚಿನ ಐಶ್ವರ್ಯವನ್ನು ಗಳಿಸಿತತಕ್ಕಂಥಾದ್ದು ಅನೇಕರ ಗಮನಕ್ಕೆ ಬಂದಿದೆ. ಬೆಂಗಳೂರು, ಮೈಸೂರು ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲ ವರ್ಷೇ ವರ್ಷೇ ಸಿನಿಮಾ ಮಂದಿರಗಳು ಬೆಳೆಯುತ್ತಿವೆ ಮತ್ತು ದೊಡ್ಡ ದೊಡ್ಡ ಹೋಟಲುಗಳು ಬೆಳೆಯುತ್ತಿವೆ. ಜನ ಸಂದಣಿಯು ಜಾಸ್ತಿಯಾಗುತ್ತಿದೆ. ಆದ್ದರಿಂದ ಮುಂದಿನ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಾದ್ದಾದರೂ ಕೂಡ ಹಿಂದಿನ ಯೋಜನೆಯಲ್ಲಾದ ತಪ್ಪನ್ನು ಸರ್ಕಾರದವರು ಸರಿಪಡಿಸಿಕೊಂಡು ದೇಶದ ಐಶ್ವರ್ಯವನ್ನು ಎಲ್ಲರಿಗೂ ಸಮನಾದ ರೀತಿಯಲ್ಲ ಹಂಚಿಕೆಯಾಗುವ ರೀತಿಯಲ್ಲ ಮಾಡಲು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಸಫಲವಾಗಬೇಕಾದರೆ ಈಗಾಗಲೇ ನಮ್ಮ ಅನೇಕ ಸ್ನೇಹಿತರು ಹೇಳಿದ ಹಾಗೆ ಸಾಕಷ್ಟು ಹಣ ಬೇಕು, ಆ ಹಣವನ್ನು ದೊರಕಿಸಿಕೊಳ್ಳಬೇಕಾದರೆ ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆದುಕೊಳ್ಳಬೇಕು. ಮತ್ತು ನಮ್ಮ ರಾಜ್ಯದಲ್ಲೂ ಕೂಡ ಯಾರಿಗೆ ತೆರಿಗೆಯನ್ನು ಕೊಡುವುದಕ್ಕೆ ಶಕ್ತಿ ಇದೆ, ಯಾರು ಸರ್ಕಾರದ ಸಹಾಯವನ್ನು ಪಡೆದು ಲಾಭವನ್ನು ಪಡೆಯುತ್ತಿದ್ದಾರೆ, ಅಂಥಾ ವರ್ಗದ ಜನಗಳಿಂದ ಹೆಚ್ಚಿನ ತೆರಿಗೆಯನ್ನು ವಸೂಲು ಮಾಡಿ ಹಣವನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಅದೇ ರೀತಿ ಸರ್ಕಾರದವರು ಉಳಿತಾಯವನ್ನು ಕೂಡ ಕಟ್ಟುನಿಟ್ಟಾಗಿ ಮಾಡಬೇಕು. ಈ ರೀತಿ ಮಾಡಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಸಫಲಗೊಳಿಸುವುದಕ್ಕೆ ಅನೇಕ ಮಾರ್ಗಗಳಿವೆ, ಎಂದು ನಾನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಈ ಯೋಜನೆಯು ಸಫಲವಾಗಬೇಕಾದರೆ ಯೋಜನೆಯ ಮಹತ್ವದ ಅರಿವು ಜನಗಳಲ್ಲಿ ಉಂಟಾಗಬೇಕಾದರೆ, ಜನಗಳಲ್ಲಿ ಜಾಗೃತಿಯನ್ನುಂಟು ಮಾಡಬೇಕಾದರೆ ಯೋಜನೆಗಳ ಕೆಲಸ ಎಲ್ಲಾ ಕಡೆಗಳಲ್ಲೂ ಕೂಡ ಸಮಾನವಾದ ರೀತಿಯಲ್ಲ ನಡೆಯಬೇಕು. ಕೆಲವು ಕಡೆಗಳಲ್ಲಿ ಕೆಲವು ಜಿಲ್ಲೆಗಳಲ್ಲ ಯೋಜನೆಯ ಕೆಲಸಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎನ್ನುವ ಅರಿವು ಜನಗಳಿಗೆ ಉಂಟಾಗಿಲ್ಲ. ಇದನ್ನು ಒಂದು ನ್ಯಾಯವಾದ ರೀತಿಯಲ್ಲ ನಾವು ಮಾಡಬೇಕಾಗಿದೆ. ಮೈನರ್ ಇರಿಗೇಷನ್‌ನಿಂದ ಹೆಚ್ಚಿನ ಫಲ ಪಡೆಯಬೇಕಾಗಿದೆ. ಶ್ರೀಮಾನ್ ದೇವೇಗೌಡರು ಮೈನರ್ ಇರಿಗೇಷನ್ನು ಕೆಲಸಗಳಿಂದ ಅಷ್ಟು ಪ್ರಯೋಜನ ಹೆಚ್ಚು ಬರಲಿಲ್ಲವು, ಇದಕ್ಕಾಗಿ ಮೇಜರು ಇರಿಗೇಷನ್ ಬಾಬಿಗಾಗಿ ಹೆಚ್ಚು ಖರ್ಚು ಮಾಡುವುದರಿಂದ ನಮಗೆ ಈಗ ಇರುವ ಆಹಾರ ಅಭಾವವನ್ನು ನೀಗಲು ಅವಕಾಶವಾಗುತ್ತದೆ ಎಂದು ಹೇಳಿದರು. ಅದೇನೋ ಸರಿ. ಆದರೆ ಈಗಿರುವ ಆಹಾರದ ಅಭಾವವನ್ನು ನೀಗಬೇಕಾದರೆ ಮುಂದೆ ಬರತಕ್ಕ ಇನ್ನೊಂದರೆಡು ವರ್ಷಗಳಲ್ಲಿ ಮೈನರು ಇರಿಗೇಷನ್ನು ಕೆಲಸಗಳ ಕಡೆಗೆ ಹೆಚ್ಚಿಗೆ ಗಮನ ಕೊಡಬೇಕಾದುದು ಹೆಚ್ಚಿನ ಅದ್ಯತೆ ಕೊಡಬೇಕಾದುದು ಸರ್ಕಾರದ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಯೋಜನೆಗಳಲ್ಲಿರುವಂತೆ ಏನಾಗುತ್ತಿದೆ ಎಂದರೆ, ಹೆಚ್ಚಿನ ರಿಟರ್ನ್ಸ್ ಬರುವ ರೀತಿಯಲ್ಲ ಕಟ್ಟೆಗಳನ್ನು ಕಟ್ಟಲ್ಲ. ಅಲ್ಲದೆ ಕಟ್ಟಿರುವ ಕಟ್ಟೆಗಳಿಂದ ಬಂದಿರುವ ರಿಟರ್ನ್ಸ್ ನುಮಾರು ಶೇಕಡ ಅರ್ಧ ಅಥವಾ ಒಂದರಷ್ಟು ಇದೆ. ಹೊಸ ಕೆಲವು ಕಡೆ ಸ್ವಲ್ಪ ಹೆಚ್ಚಾಗಿ ಬರಬಹುದು. ಮಲೆನಾಡು ಭಾಗಗಳಾದ ಶಿವಮೊಗ್ಗಾ ಮುಕ್ತು ಹಾಸನದ ಕೆಲವು ಭಾಗಗಳಲ್ಲ ಮೈನರು ಇರಿಗೇಷನ್ನು ಕೆಲಸಗಳು ಬಹಳ ಇವೆ. ಇಲ್ಲ ಹೊಸ ಕೆಲಸ

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಗಳನ್ನು ಪಿಕ್ ಅಪ್‌ಗಳನ್ನು ಮಾಡಿ ಲಿಫ್ಟ್ ಇರಿಗೇಷನ್ನು ಕೆಲಸಗಳನ್ನು ತೆಗೆದುಕೊಂಡು ಅತಿ ಕಡಿಮೆ ದುಡ್ಡಿನಲ್ಲಿ ಹೆಚ್ಚು ಪ್ರಯೋಜನ ದೊರೆಯುವಂತಹ ಅವಕಾಶಗಳು ಇವೆ. ಇದನ್ನು ನಮಗ್ರವಾದ ರೀತಿಯಲ್ಲಿ ಒಂದು ಯೋಜನೆ ಮಾಡಿ ಯಾವ ಯಾವ ಕಾರ್ಯಗಳಿಗೆ ಮೊದಲನೆ ಪ್ರಯಾರಿಟಿ ಕೊಡಬೇಕು ಎಲ್ಲಿ ಮೈನರು ಇರಿಗೇಷನ್ನು ಕೆಲಸಗಳಿಗಾಗಿ ಖರ್ಚು ಮಾಡಬೇಕು ಎನ್ನುವುದನ್ನು ಸರಿಯಾಗಿ ಯೋಜನೆ ಮಾಡಿ ಆ ಯೋಜನೆಯನ್ನು ಅನುಸರಿಸಿಕೊಂಡು ಕೆಲಸ ಮಾಡಬೇಕಾಗಿದೆ. ದಇರಲ್ಲಿ ರಾಜಕೀಯ ಪ್ರಭಾವಗಳಿಗಾಗಲ ಬೇರೆ ಯಾವ ಒತ್ತಡಗಳಿಗಾಗಲ ಅವಕಾಶ ಕೊಡದೇ ಒಂದೆರಡು ವರ್ಷಗಳಲ್ಲೇ ಹೆಚ್ಚು ಆಹಾರದ ಅಭಾವವನ್ನು ನೀಗಲು ಅನುಕೂಲವಾಗುವಂತೆ ಬೆಳೆಯನ್ನು ಉತ್ಪಾದನೆ ಮಾಡಲು ನಮ್ಮ ಮಲೆನಾಡಿನ ಭಾಗದಲ್ಲಿ ಅವಕಾಶಗಳಿವೆ. ಉತ್ಪಾದನೆ ಹೆಚ್ಚಾದರೆ ವ್ಯಾಪಾರವೂ ಹೆಚ್ಚಾಗುತ್ತದೆ, ಹೆಚ್ಚು ರಿಟರ್ನ್ ಬರುತ್ತದೆ. ಇಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ನಾನು ಇಲ್ಲಿ ಕೇಳುತ್ತೇನೆ. ಈ ಸಂದರ್ಭದಲ್ಲಿ ಕಾವೇರಿ ನದಿ ಹರಿಯತಕ್ಕ ಪ್ರದೇಶಗಳಲ್ಲಿ ಹೇಮಾವತಿ ಹಾಗೂ ಎಗಚೆ ನದಿಗಳು ಹರಿಯುವ ಪ್ರದೇಶಗಳಲ್ಲಿ ಲಿಫ್ಟ್ ಇರಿಗೇಷನ್ನು ಕೆಲಸಗಳನ್ನು ಮಾಡಲು ಹೆಚ್ಚಿನ ಅವಕಾಶಗಳು ಇವೆ. ಹಾಸನದಲ್ಲೂ ಇಂತಹ ಅಭಿವೃದ್ಧಿಯಾಗಬೇಕಾದ ಕೆರೆಗಳೂ ಬರುತ್ತವೆ. ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಇಲ್ಲಿ ಖರ್ಚು ಮಾಡಿದರೆ ಇಲ್ಲಿ ಲಿಫ್ಟ್ ಇರಿಗೇಷನ್ನಿನ ಸ್ಕೀಮುಗಳನ್ನು ಮಾಡಬಹುದು ಮತ್ತು ಈ ಯೋಜನೆಯಿಂದ ಸುಮಾರು 300 ಸಾವಿರ ಎಕರೆ ಗಳಷ್ಟು ಪ್ರದೇಶ ನೀರಾವರಿಗೆ ಬರಲು ಅನುಕೂಲವಾಗುತ್ತದೆ. ಇದನ್ನು ಕೇವಲ ಸ್ವಲ್ಪ ಕಾಲದಲ್ಲಿಯೇ ಎಂದರೆ ನಾಲ್ಕೈದು ತಿಂಗಳಲ್ಲೇ ಪೂರೈಸಬಹುದು ಮತ್ತು ಇಲ್ಲಿ ಎರಡು ಬೆಳೆಯನ್ನು ತೆಗೆಯಲೂ ಅವಕಾಶವಿದೆ. ನಮ್ಮ ಹಾಸನ ಜಿಲ್ಲೆಯಲ್ಲಿರುವ ಹೇಮಾವತಿ, ಕಾವೇರಿ ಹಾಗೂ ಎಗಚೆ ನದಿಗಳ ಆಶ್ರಯದಲ್ಲಿ ಮಾಡಬೇಕಾದಂತಹ ಸುಮಾರು 70-75 ಯೋಜನೆಗಳು ಬಹಳ ಚಿಕ್ಕದಾಗಿರುವುದು ಇವೆ, ಇವನ್ನು ಒಂದೆರಡು ವರ್ಷಗಳಲ್ಲೇ ತೆಗೆದುಕೊಂಡು ಪೂರೈಸಬಹುದು ಮತ್ತು ಹಾಗೆ ಪೂರ್ತಿ ಮಾಡಿದರೆ ಅದರಿಂದ ಎರಡು ಬೆಳೆಗಳನ್ನು ಪಡೆದು ಉಪಯೋಗಮಾಡಿಕೊಳ್ಳಬಹುದು ಮತ್ತು ಇಲ್ಲಿ ಎಲೆಕ್ಟ್ರಿಸಿಟಿ ಸಿದ್ಧವಾಗಿಯೇ ಇದೆ. ಇಷ್ಟೆರ್ಲಾ ಅನುಕೂಲಗಳಿದ್ದರೂ ಕೂಡ ಇದರ ಬಗ್ಗೆ ಸರಕಾರ ಗಮನ ಕೊಡುತ್ತಿಲ್ಲ. ಬಹು ಜಾಗ್ರತೆಯಾಗಿ ಉತ್ತಮವಾಗಿರತಕ್ಕ ಭೂಮಿಗಳಿಂದ ಇಲ್ಲಿ ಎರಡು ಬೆಳೆಗಳನ್ನು ಮಾಡುವ ಅವಕಾಶಗಳಿದ್ದರೂ ಮತ್ತು ಸರಕಾರದ ಮುಂದೆ ಇದರ ಬಗ್ಗೆ ಸುಮಾರು ಎರಡು ವರ್ಷಗಳಿಂದಲೂ ಇದಕ್ಕೆ ಬೇಕಾಗುವ ಅಂದಾಜುಗಳೂ, ಸಿದ್ಧವಾಗಿರುವ ಯೋಜನೆಗಳೂ ಇವೆ. ಇಷ್ಟು ಇದ್ದರೂ ಸರಕಾರ ಇದರ ಕಡೆಗೆ ಗಮನಕೊಟ್ಟು ಒಂದನ್ನೂ ಇಲ್ಲಿಯವರೆಗೆ ತೆಗೆದುಕೊಂಡಿಲ್ಲ. ಇದೂ ಅಲ್ಲದೆ ಸೀ ಐರೆಂಡ್ ಹತ್ತಿಯನ್ನು ಅಮೆರೀಕಾ ಹಾಗೂ ಇತರ ಪರದೇಶಗಳಿಂದ ನಮ್ಮ ದೇಶದವರು ತರಿಸಿಕೊಳ್ಳುತ್ತಿದ್ದಾರೆ. ಇದನ್ನು ನಮ್ಮಲ್ಲೇ ಬೆಳೆಯುವ ಅವಕಾಶಗಳಿವೆ. ಇದರ ಕಡೆಗೆ ನಮ್ಮ ಸರಕಾರದವರು ಹೆಚ್ಚು ಗಮನ ಕೊಡಬೇಕಾಗಿದೆ. ಅಲ್ಲದೆ ನಾವು ಮಾಡಿರುವ ಯೋಜನೆಗಳು ಫಲ ಪ್ರದವಾಗಬೇಕಾದರೆ ಬೆಳೆಯುವವರಿಗೆ ನೀರಾವರಿಗಾಗಿ ಸಾಕಷ್ಟು ಅನುಕೂಲಗಳನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ನಾನು ಸರ್ಕಾರದವರನ್ನು ಇವೆಲ್ಲ ಕೆಲಸಗಳನ್ನೂ ಒಂದೇ ಜಿಲ್ಲೆಯವರಿಗಾಗಿಯೇ ಮಾಡಿಕೊಡಬೇಕೆಂದು ಹೇಳುತ್ತಿಲ್ಲ. ಎರ್ಲಾ ಜಿಲ್ಲೆಗಳಲ್ಲಿಯೂ ಉತ್ತಮವಾದ ಕೈಗಾರಿಕೆಗಳನ್ನು ಮಾಡಲು ನೀರಾವರಿ ಕೆಲಸಗಳನ್ನು ಮಾಡಲು ಅವಕಾಶಗಳಿವೆ. ಎರ್ಲಾ ಜಿಲ್ಲೆಗಳಲ್ಲಿಯೂ ನೋಡಿಕೊಂಡು ಅಲ್ಲ ಸಣ್ಣ ನೀರಾವರಿ ಕೆಲಸಗಳಿಗೆ ಹೆಚ್ಚು ಪ್ರಾಧ್ಯಾನತೆ ಕೊಟ್ಟು ಅದನ್ನು ಪೂರೈಸುವುದರ ಕಡೆ ಗಮನ ಕೊಡಬೇಕು. ನಮ್ಮ ನಾಲ್ಕನೇ ಯೋಜನೆಯಲ್ಲಿ ನಡೆಯಬೇಕಾಗಿರುವ ಕೆಲಸಗಳಲ್ಲಿ ಈ ಕ್ವಿಟಬರ್ ಡಿಸ್ಟ್ರಿಬೂಷನ್ ಮೇಲೆ ಒಂದು ನ್ಯಾಯವಾದ ದೃಷ್ಟಿಯಿಂದ ಯಾವ ಯಾವ ಕೆಲಸಗಳು ಯೋಗ್ಯವಾದವು ಅವನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಒಂದು ಸಮಗ್ರ ಯೋಜನೆಯನ್ನು ಹಾಕಿಕೊಂಡು ಕೆಲಸಗಳನ್ನು ಮಾಡುವುದರ ಲಕ್ಷ್ಯಕೊಡಬೇಕು. ಇದರಲ್ಲಿ ಸರಕಾರ ಯಾವ ರಾಜಕೀಯ ಪ್ರಭಾವಗಳಿಗೂ ಒಳಗಾಗಬಾರದು. ಹಾಗೆ ಮಾಡಿದರೆ ಎಲ್ಲ ಕೆಲಸ ಕಾರ್ಯಗಳೂ ನಡೆಯಲು ಅನುಕೂಲವಾಗುತ್ತದೆ ಮತ್ತು ಇದರಿಂದ ಒಂದು ಇಪ್ರೂವ್‌ಮೆಂಟ್ ಕೂಡ ಆಗುತ್ತದೆ. ಜೊತೆಗೆ ಕಾಲಾವಕಾಶವನ್ನು ಮೀರದ ರೀತಿಯಲ್ಲಿ ಪ್ರತಿಯೊಂದು ಯೋಜನೆಯನ್ನೂ ನಡೆಸಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಪ್ಯಾಟರ್ನ್‌ನಲ್ಲಿ ನಾವು ಹೋಗಬೇಕೆನ್ನುವ ಒಂದು ಆದರ್ಶವನ್ನು ಇಟ್ಟುಕೊಂಡಿದ್ದೇವೆ. ಇದನ್ನು ಜಾರಿಗೆ ತರಬೇಕಾದರೆ ನಾನಾಗಲೇ ಹೇಳಿದ ಹಾಗೆ ತೆರಿಗೆಗಳನ್ನು ಕೊಡತಕ್ಕ ಶ್ರೀಮಂತರುಗಳಿಂದ ಹೆಚ್ಚಿನ ತೆರಿಗೆಗಳನ್ನು ಹಾಕಿ ಬಡ

ಜನಗಳಿಗೆ ಅವರ ಮಟ್ಟಕ್ಕೆ ನಿಲುಕುವ ರೀತಿಯಲ್ಲಿ ನೆರವನ್ನು ಕೊಡಿ. ಇದಕ್ಕೆ ಅನುಕೂಲವಾಗು ವಂತೆ ಯೋಜನೆಗಳನ್ನು ಮಾಡಿದರೆ ಅವು ಯಶಸ್ವಿಯಾಗಿ ನಡೆಯಲು ಅವಕಾಶವಾಗುತ್ತದೆ. ಅನೇಕ ಶಾಖೆಗಳಲ್ಲಿ ನಾವು ಈಗ ನೋಡಿದರೆ ಮೇಲಿನ ದರ್ಜೆಯ ಅಧಿಕಾರಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ. ಉದಾಹರಣೆಯಾಗಿ ಈಗ ಕೋ-ಆಪರೇಟೀವ್ ಇಲಾಖೆಯನ್ನು ನೋಡಿದರೆ ಇಲ್ಲಿ ಸುಮಾರು 18 ಜನ ಜಾಯಿಂಟ್ ರಿಜಿಸ್ಟ್ರಾರುಗಳು ಎಂದಿದ್ದಾರೆ. ಇನ್ನೂ ಒಬ್ಬರನ್ನು ಹೆಚ್ಚು ಮಾಡುವುದರಲ್ಲಿ ದ್ದಾರೆ, ಎಂದರೆ 19 ಜನ ಜಾಯಿಂಟು ರಿಜಿಸ್ಟ್ರಾರ್‌ಗಳಾದರು. ಇದರಲ್ಲಿ ಒಂದೊಂದು ಭಾಗಕ್ಕೆ ಒಬ್ಬೊಬ್ಬರು ಬೇರೆಯಾಗಿರಬೇಕೆಂದು ಮಾಡಿದ್ದಾರೆ. ಕನ್‌ಸೂಮರ್ಸ್ ಕೋ ಆಪರೇಟೀವ್ಸ್ ಶಾಖೆಗೇ ಒಬ್ಬರು ಜಾಯಿಂಟು ರಿಜಿಸ್ಟ್ರಾರವರು ಎಂದ ಹೀಗೆ ಬೇರೆ ಬೇರೆ ಬಾಬಿಗೆ ಒಬ್ಬೊಬ್ಬರಂತೆ ನೇಮಿಸಿ ದ್ದಾರೆ. ನಮ್ಮ ಹಾಸನ ಜಿಲ್ಲೆಯಲ್ಲೂ ಕೂಡ ಮೊನ್ನೆ ಒಬ್ಬರನ್ನು ಇಲ್ಲಿ ಜಾಯಿಂಟು ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ ಸೊಸೈಟಿಗಾಗಿ ನೇಮಕ ಮಾಡಿದ್ದಾರೆ. ಇದನ್ನು ನೋಡಿದರೆ ಟಾಪ್ ಹೆವಿ ಎನ್ನುವಂತೆ ಈ ಇಲಾಖೆಯಲ್ಲಿ ಅಧಿಕಾರಿಗಳು ಹೆಚ್ಚಾಗಿದ್ದಾರೆ. ಹೀಗೆ ನಮ್ಮ ವಿದ್ಯಾ ಇಲಾಖೆ ಯಲ್ಲಿ ಕೂಡ ನೋಡಿದರೆ ಜಾಯಿಂಟು ಡೈರೆಕ್ಟರುಗಳ ಸಂಖ್ಯೆ ವಿಪರೀತವಾಗಿ ಏರಿದೆ. ಟಾಪ್ ಹೆವಿ ಆಗಿ ಇಷ್ಟು ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡಿರುವುದರಿಂದ ಸರಕಾರದ ಸಂಪತ್ತು ಇಂತಹ ಉನ್ನತ ದರ್ಜೆಯ ಅಧಿಕಾರಿಗಳಿಗಾಗಿ ದೊರೆಯುತ್ತಲಿದೆ ಮತ್ತು ಹೆಚ್ಚು ಹಣ ಇದಕ್ಕಾಗಿ ಇಲ್ಲಿ ಖರ್ಚಾಗುತ್ತಿದೆ. ಇಷ್ಟೊಂದು ಟಾಪ್ ಹೆವಿ ಎಕ್ಸ್‌ಪೆಂಡಿಚರ್ ಆಗಿ ಇಷ್ಟು ಅಧಿಕಾರಿಗಳನ್ನು ನೇಮಿಸಿರುವುದರಿಂದಾಗಿ ದೇಶದ ಆಡಳಿತದಲ್ಲಿ ದಕ್ಷತೆ ಹೆಚ್ಚಾಗಿದೆಯೇ ಎನ್ನುವುದನ್ನು ನೋಡಿದರೆ ಯಾವ ರೀತಿಯಿಂದಲೂ ಅನುಕೂಲವಾಗಿಲ್ಲ. ಇದೇ ರೀತಿ ನಮ್ಮ ವ್ಯವಸಾಯದ ಇಲಾಖೆಯನ್ನು ತೆಗೆದುಕೊಂಡರೆ ಇಲ್ಲೂ ಕೂಡ ಮೇಲಿನ ದರ್ಜೆಯ ಅಧಿಕಾರಿಗಳೇ ಬಹಳ ಹೆಚ್ಚಾಗಿದ್ದಾರೆ. ಕಳೆದ ಆರು ವರ್ಷಗಳಿಂದಲೂ ನಮ್ಮ ವ್ಯವಸಾಯದ ಇಲಾಖೆಯವರಿಂದ ಬೆಳೆಯುವವರಿಗೆ ಹೆಚ್ಚು ಬೆಳೆ ಮಾಡಲು ಏನಾದರೂ ಸೌಕರ್ಯಗಳನ್ನು ಮಾಡಿಕೊಟ್ಟಿದ್ದಾರೆಯೇ ಎಂದರೆ ಏನೂ ಮಾಡಿಲ್ಲ. ಈ ಇಲಾಖೆಯಿಂದ ಜನಗಳಿಗೆ ಸ್ಫೂರ್ತಿ ಬರುವ ರೀತಿಯಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲ. ಈ ಇಲಾಖೆಯವರು ಜನಗಳಲ್ಲಿ ಸಂಪರ್ಕ ಹೊಂದಿ ಒಂದು ರೀತಿಯ ಸ್ಫೂರ್ತಿ ಪಡೆದು ಸೇವಾ ಮನೋ ಭಾವದಿಂದ, ದೇಶ ಪ್ರೇಮದಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಎಂದು ನೋಡಿದರೆ ಇಲ್ಲಿ ಏನೂ ಆಗಿಲ್ಲ ಎನ್ನುವುದು ಎಲ್ಲರಿಗೂ ಕಂಡುಬರುತ್ತದೆ. ವ್ಯವಸಾಯದ ಇಲಾಖೆಯಲ್ಲಿ ನಾವು ಮೂರು ನಾಲ್ಕು ವರ್ಷಗಳಿಂದ ಏನು ನೋಡುತ್ತಿದ್ದೇವೆಂದರೆ, ಇಲ್ಲರುವ ಅಧಿಕಾರಿಗಳ ಸೀನಿಯಾರಿಟಿ ಲಿಸ್ಟುಗಳು ಸರಿಯಾಗಿಲ್ಲ ಇಂಟರ್‌ಸ್ಟೇಟು ಲಿಸ್ಟು ಸರಿಯಾಗಿಲ್ಲ ಎಂದು ಒಬ್ಬರ ಮೇಲೆ ಒಬ್ಬರು ಅಧಿಕಾರಿಗಳಲ್ಲಿ ಅತೃಪ್ತಿ ಜಾಸ್ತಿಯಾಗಿದೆ ಮತ್ತು ಒಂದು ರೀತಿಯಾಗಿ, ಫ್ರಸ್ಟ್ರೇಟ್ ಆಗಿದ್ದಾರೆ ಮತ್ತು ಇಲ್ಲರುವ ಅಧಿಕಾರಿಗಳಲ್ಲಿ ಒಂದು ರೀತಿಯಾದ ಅತೃಪ್ತಿ ಹಾಗೂ ನಿರಾಶೆ ಜಾಸ್ತಿಯಾಗಿರುವುದನ್ನು ಕಾಣುತಿದ್ದೇವೆ. ಇಂತಹ ಅಧಿಕಾರಿಗಳಿಂದ ಇಲ್ಲಿ ತೃಪ್ತಿಕರವಾದ ಕೆಲಸಗಳು ನಡೆಯಲು ಸಾಧ್ಯವೇ ? ವ್ಯವಸಾಯದಂತಹ ಒಂದು ಮುಖ್ಯ ಇಲಾಖೆಯಲ್ಲಿ ಹೆಚ್ಚಿನ ಉತ್ಪತ್ತಿ ಬರಬೇಕು ಇಲ್ಲರುವ ಅಧಿಕಾರಿಗಳು ಜನಕ್ಕೆ ಸರಿಯಾದ ಮಾರ್ಗದರ್ಶನ ನೀಡುವ ರೀತಿಯಲ್ಲಿ ಇರಬೇಕು. ಅಧಿಕಾರಿಗಳಲ್ಲಿ ಇಂತಹ ಮನೋಭಾವ ಹೆಚ್ಚಿದರೆ ಜನಗಳಿಗೂ ಇದರಿಂದ ಅನು ಕೂಲವಾಗುತ್ತದೆ. ಮತ್ತು ಹೆಚ್ಚು ಉತ್ಪಾದನೆ ಮಾಡಲು ಸಹಾಯವಾಗುತ್ತದೆ. ಒಟ್ಟಿನಲ್ಲಿ ಆಡಳಿತದಲ್ಲಿ ದಕ್ಷತೆ ಹೆಚ್ಚಬೇಕಾದರೆ ಇಲಾಖೆಗಳಲ್ಲಿ ಆಗಾಗ್ಗೆ ಮೇಲಿನ ಅಧಿಕಾರಿಗಳು ಸೂಪರ್‌ವೈಸ್ ಮಾಡುವ ವರು ಸರಿಯಾಗಿ ತನಿಖೆ ಮಾಡಿ ಯೋಜನೆಗಳನ್ನು ಮಾಡಿರುವುದನ್ನು ಸರಿಯಾಗಿ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದನ್ನು ಆಗಾಗ್ಗೆ ಎಮರ್ಶೆ ಮಾಡಬೇಕು ಮತ್ತು ಅದಕ್ಕೆ ಸಾಕಷ್ಟು ಹಣ ಒದಗಿಸಬೇಕು. ಅಲ್ಲದೆ ತಾವು ಈಗ ಒದಗಿಸಿರುವ ಹಣಕ್ಕೆ ಎಸ್ಟಿಮೇಟುಗಳು ತಯಾರಾದ ಮೇಲೆ ಕೆಲಸಗಳನ್ನು ಆರಂಭ ಮಾಡಿ, ಅರ್ಧಕ್ಕೆ ಬಿಡದೇ ಪೂರ್ತಿಯಾಗುವ ಹಾಗೆ ಒಂದು ನಿರ್ದಿಷ್ಟಕಾಲದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಯೋಜನೆಗಳನ್ನು ಒಂದು ಕಾಲದೊಳಗೇ ಮಾಡಬೇಕೆಂದು ಆರಂಭಿಸಿದ ಮೇಲೆ ಶತಾಯ ಗತಾಯ ಅದನ್ನು ಆ ಕಾಲದೊಳಗೆ ಪೂರ್ಣಗೊಳಿಸುವಂತೆ ಏರ್ಪಾಡು ಮಾಡಬೇಕು. ನಾನು ನಮ್ಮ ತಾಲ್ಲೂಕಿನಲ್ಲಿ ಸುಮಾರು ಐದು ವರ್ಷಗಳಿಂದಲೂ ಒಂದು ಕೆಲಸವಾಗಬೇಕೆಂದು ಸರಕಾರಕ್ಕೆ ಹೇಳುತ್ತ ಬರುತ್ತಿದ್ದೆ. ಈಚೆಗೆ ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿ ಗಳು ನಮ್ಮ ಭಾಗದಲ್ಲಿ ಪ್ರವಾಸ ಬಂದಾಗ ಇದರ ಬಗ್ಗೆ ಹೇಳಿ ತೋರಿಸಿದಾಗ ಅವರು ಅಲ್ಲಿದ್ದ ಅಧಿ ಕಾರಿಗಳನ್ನು ಕೂಡಲೇ ಕರೆಸಿ ಇಲ್ಲಿ ಕಂಟ್ರಾಕ್ಟರುಗಳು ಮೋಸ ಮಾಡುತ್ತಿದ್ದಾರೆಂಬುದನ್ನು ಪರಿಶೀ ಲನೆ ಮಾಡಿ ಅವರಿಗೆ ಸರಿಯಾದ ನಿರ್ದೇಶನ ಕೊಟ್ಟು ಆರು ತಿಂಗಳಲ್ಲಿ ಇಲ್ಲಿನ ಕೆಲಸ ಮುಗಿಸ ಬೇಕೆಂದು ಹೇಳಿಬಂದರು. ಆ ಕೆಲಸ ಐದು ವರ್ಷಗಳಿಂದಲೂ ಆಗದೇ ಇದ್ದುದು ಆರುತಿಂಗಳಲ್ಲಿ ಮುಗಿಯಲು ನಮ್ಮ ಮಾನ್ಯ ಮಂತ್ರಿಗಳು ಸಹಾಯ ಮಾಡಿದರು. ಹಿಂದೆ ನಮ್ಮಲ್ಲಿ ಅಂತಹ ಅಧಿಕಾ ರಿಗಳು ಪ್ರವಾಸ ಬಂದಾಗ ಆ ರೀತಿಯಾಗಿ ಇನ್ಸ್‌ಪೆಕ್ಷನ್ನು ಮಾಡಿ ಅಧಿಕಾರಿಗಳಿಗೆ ಸೂಕ್ತವಾಗಿ

(ಶ್ರೀಜಿ. ಎ. ತಿಮ್ಮಪ್ಪ ಗೌಡ)

ನಿರ್ದೇಶನ ಕೊಡುತ್ತಿದ್ದರು. ಈಗಲೂ ಕೂಡ ಮಂತ್ರಿಗಳು ಆಗಾಗ್ಗೆ ಅಲ್ಲಲ್ಲಿ ಪ್ರವಾಸ ಹೋದಾಗ ಭರಿಗೇಡಿನ್ನು ಪ್ರಾಜೆಕ್ಟುಗಳನ್ನು ತನಿಖೆ ಮಾಡಿ ಅದಕ್ಕೆ ಕೊಟ್ಟಿರುವ ಟೈಂ ಎಷ್ಟು, ಅದನ್ನು ಪೂರೈಸಿದ್ದಾರೆಯೇ ಎಂದು ನೋಡಿ.

" Take six months or one year more ; What are the facilities that you require ; Take all those facilities but I must see that this project is completed within such and such a period ; Otherwise I will dismiss you". ಎಂದು ಅವರಿಗೆ ಹೇಳಿ ಹಿಂದೆ ಅಧಿಕಾರಿಗಳು ಕೆಲಸಗಳನ್ನು ಮಾಡಿಸುತ್ತಿದ್ದರು. ಈಗಲೂ ನಮ್ಮ ಸರಕಾರದವರು ಆ ರೀತಿಯಾದ ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಯೋಜನೆಯನ್ನು ತೆಗೆದುಕೊಂಡ ಮೇರೆ ಅದನ್ನು ನಿರ್ದಿಷ್ಟಕಾಲದಲ್ಲೇ ಮುಗಿಸುವಂತೆ ಮಾಡಬೇಕು. ಒಂದು ಕೆಲಸಕ್ಕೆ ಆರು ತಿಂಗಳಿಗೆ ಹೆಚ್ಚು ಕಾಲವನ್ನು ತೆಗೆದುಕೊಳ್ಳಕೂಡದು ಎಂದು ನಿಗದಿ ಮಾಡಿದ್ದಾರೆ ಆ ನಿಗದಿಯಾದ ಕಾಲದಲ್ಲೇ ಆ ಕೆಲಸಗಳನ್ನು ಪೂರೈಸಬೇಕು. ಹಾಗೆ ಮಾಡಿದರೆ ಅದರಿಂದ ನಮಗೆ ಬರತಕ್ಕ ರಿಟರ್ನ್ ಕೂಡ ಸರಿಯಾಗಿ ಬರುತ್ತದೆ. ಈಗ ಫೈನಾನ್ಷಿಯರ್ ಟಾರ್ಜೆಟ್ 50 ಸಾವಿರ ರೂಪಾಯಿ ಎಂದು ತೋರಿಸುತ್ತೀರಿ. ಫಿಸಿಕರ್ ಟಾರ್ಜೆಟ್ ಇರುವುದಿಲ್ಲ, ಅದಕ್ಕೇ ಮೂರನೇ ಪಾಂಚವಾರ್ಷಿಕ ಯೋಜನೆ ವಿಫಲವಾಗಿದೆ. ಆದುದರಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆ ಜಯಪ್ರದವಾಗಿ ಅದರ ವಿಫಲ ಜನಗಳಿಗೆ ಸಂಪೂರ್ಣವಾಗಿ ದೊರೆಯುವಂತೆ ಮಾಡಲು ಸರಕಾರದವರು ಮತ್ತು ಸಾರ್ವಜನಿಕರು ಕೂಡ ಸಹಕರಿಸಿ ಕೆಲಸ ಮಾಡೋಣ. ನಾಲ್ಕನೇ ಯೋಜನೆ ಜಯಪ್ರದವಾಗಿ ದೇಶ ಸಂಪತ್‌ಭರಿತವಾಗಿ ಸುಖದಿಂದ ಇರುವಂತೆ ನಾವೆಲ್ಲರೂ ಶ್ರಮಿಸೋಣ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

11-00 A.M.

†Sri ANNARAO GANAMUKHI (Afzalpur).—Speaker Sir, the Fourth Plan figures, which have been given to us I think, are in keeping with the indication of the Planning Commission and we are called upon to discuss this Fourth Plan allocation, provisions, etc., because the Government is going to discuss the plan with the Planning Commission or with the Government of India or with the National Development Council. I should say Sir, there are two considerations with regard to the plans. One is that this Fourth Plan or Fith Plan whatever the plan, it should not coincide with the election year because the promises which cannot be fulfilled, achievements which cannot be achieved and all these are held out for the people. Such promises are held out before the people so that the party in power may catch votes. This is an unrealistic approach and therefore I should say the planning instead of restricting to 5 years it must be extended to 6 years so that it may not coincide with the election year.

Another thing which I should like to say Sir, is that planning should not be too much centralised. Here one thing becomes very clear *i.e*,, the Central Government or the Planning Commission Members and the Chief Ministers of all the States and the National Development Council put together arrive at tentative conclusions after due deliberations and place them before the Parliament. Here the constitutional postion is very clear that is to say as far as Central subjects are concerned, let it be made clear, that it is the Central Government and the Parliament which can take a final decision. But so far as the State subjects are concerned the Planning Commission and Central

ಅವನ್ನು ನಿಷ್ಕರ್ಷೆ ಮಾಡತಕ್ಕ ರೀತಿ ನೀತಿಗಳನ್ನು ನೋಡಿದರೆ ಬಹಳ ವಿಚಿತ್ರವಾಗಿದೆ. ಎಲ್ಲಿ ಪ್ರಾಜೆಕ್ಟುಗಳನ್ನು ಕಟ್ಟಬೇಕೆಂದು ಯೋಜನೆಗಳನ್ನು ಹಾಕಿರುತ್ತಾರೋ ಅಲ್ಲಿ ಕಟ್ಟದೆ ಸುಮ್ಮನೆ ಸ್ಥಳ ಬದಲಾವಣೆಗಳನ್ನು ಮಾಡುತ್ತಿರುತ್ತಾರೆ. ಅಲ್ಲಿನ ರಾಜಕೀಯ ಪ್ರಭಾವಕ್ಕೊಳಗಾಗಿ ಪ್ರಾಜೆಕ್ಟುಗಳನ್ನು ಕಟ್ಟತಕ್ಕ ರೀತಿನೀತಿ ಬಹಳ ಹಣವನ್ನು ಪೋಲು ಮಾಡುವುದಕ್ಕೆ ಮತ್ತು ಮಧ್ಯಮವರ್ತಿ ಜನ ಹಾವಳಿ ಮಾಡುವುದಕ್ಕೆ ಅವಕಾಶವನ್ನು ಇವರು ಮಾಡಿಕೊಟ್ಟಿದ್ದಾರೆ. 16 ಕೋಟಿ ರೂಪಾಯಿಗಳನ್ನು ಮೈನರ್ ಇರ್ರಿಗೇಷನ್ ಸ್ಕೀಮುಗಳಿಗೆ ಹಾಕಿದ್ದಾರೆ. ಆದರೆ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ಪ್ರಮಾಣದ ನೀರಾವರಿ ಫಲವನ್ನು ನೀಡಬೇಕಾದರೆ ಮತ್ತು ಆ ಪ್ರಾಜೆಕ್ಟ್ ಪೂರ್ತಿಯಾಗ ಬೇಕಾದರೆ 26 ಕೋಟಿ ರೂಪಾಯಿಗಳು ಬೇಕು. ಆದ್ದರಿಂದ ಈ 26 ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಇವರು ಅರ್ಥ ಮಾಡಿಕೊಳ್ಳದೆ ಯಾವ ರೀತಿ ಹಾಕಿದ್ದಾರೆ! ಈಗ 16 ಕೋಟಿ ರೂಪಾಯಿಗಳ ಫಲ 3-4 ವರ್ಷಗಳವರೆಗೂ ಸಿಕ್ಕದೆ ಹೋದಾಗ ಆ ಯೋಜನೆಗಳಿಗಾಗಿ ನಾವು ಹಾಕಿದಷ್ಟು ಹಣ ನಮ್ಮ ಯೋಜನೆಯ ಅಂತ್ಯದಲ್ಲಿ ಯಾವರೀತಿ ಸಿಗುತ್ತದೆಂಬುದನ್ನು ಮಾನ್ಯ ಸದಸ್ಯರೇ ಯೋಚನೆ ಮಾಡಬೇಕು. ಆದ್ದರಿಂದ ನಮಗೆ ಫಲ ಕೊಡತಕ್ಕ ಯೋಜನೆಗಳನ್ನು ಆರಿಸಿದರೆ ಬಹಳ ಒಳ್ಳೆಯದು. ಆಡಳಿತದಲ್ಲಿ ಲೋಪದೋಷಗಳು ಇಲ್ಲದೇ ಇರುವ ರೀತಿಯಲ್ಲಿ ಪ್ರಾಜೆಕ್ಟುಗಳ ಕೆಲಸಗಳನ್ನು ಕೈಗೊಂಡರೆ ನಮ್ಮ ದೇಶಕ್ಕೆ ಬಹಳ ಪ್ರಯೋಜನವಾಗುತ್ತಿತ್ತು. ಈ ರೀತಿಯಾದ ವಿಮರ್ಶೆಗಳನ್ನು ನೀರಾವರಿ ಒಂದು ಖಾತೆ ಬಗ್ಗೆ ಯೋಚನೆ ಮಾಡುವುದಾದರೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ದುರುಪಯೋಗ ಮಾಡಿದ್ದಾರೆ. ಇದರಿಂದ ಯೋಜನೆಗಳು ಯಶಸ್ವಿಯಾಗಿ ಆಗದೆ ಸಾಕಷ್ಟು ಫಲವನ್ನು ಕೊಡದೆ ಬಹಳವಾಗಿ ಹಾಳಾಗುವ ಪರಿಸ್ಥಿತಿ ಮೈಸೂರಿನಲ್ಲಿ ಬಂದಿದೆ. 16 ಕೋಟಿ ರೂಪಾಯಿಗಳನ್ನು ಸ್ಪಿರ್ಲೊವರ್ ವರ್ಕ್ಸ್‌ಗೆ ಎಂದು ಹಾಕಿದ್ದಾರೆ. ಇವರು ಸಣ್ಣ ಕೆರೆಗಳು, ಸಣ್ಣ ಪಿಕಪ್ಪುಗಳು, ಸಣ್ಣ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೇನೂ ಗಮನ ಕೊಟ್ಟಿಲ್ಲ. ಇಂಜನಿಯರುಗಳು ಏನು ಕೆಲಸ ಮಾಡುತ್ತಿದ್ದರು! ಮೈಸೂರು ದೇಶವಲ್ಲಿ ಆಡಳಿತವನ್ನು ಯಾವ ರೀತಿ ಇಟ್ಟುಕೊಂಡಿದ್ದರೆಂಬುದಾಗಿ ನಾನ್ನು ಪ್ರಶ್ನೆ ಮಾಡಬೇಕಾಗಿದೆ. ಇವಕ್ಕೆಲ್ಲಾ ಖರ್ಚುಗಳನ್ನು ಮಾಡತಕ್ಕ ಕಾಲದಲ್ಲಿ, ಅಂದಾಜುಗಳನ್ನು ಅವರು ತಯಾರು ಮಾಡುವ ಕಾಲದಲ್ಲಿ, ಸ್ಥಳಗಳನ್ನು ಪರಿಶೀಲನೆ ಮಾಡುವ ಕಾಲದಲ್ಲಿ ಡಿಸ್‌ಪ್ಯೂಟ್ ಇರುವ ವಿಚಾರಗಳನ್ನು ಪೂರ್ವಭಾವಿಯಾಗಿ ಸರಿಯಾದ ರೀತಿಯಲ್ಲಿ ನ್ಯಾಯವಾಗಿ ಯೋಚನೆಮಾಡದೆ ಆ ಕೆಲಸಗಳನ್ನು ಪ್ರಾರಂಭಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಒಂದು ಸಾರಿ ಆ ಕೆಲಸಗಳನ್ನು ಪ್ರಾರಂಭಮಾಡಿದಮೇಲೆ ಅದರಲ್ಲೂ ಸ್ಪಿರ್ಲೊವರ್ ವರ್ಕ್ಸ್‌ಗಳನ್ನು ನಿಲ್ಲಿಸುವುದಕ್ಕೆ ಕಾರಣಗಳೇನು, ಇದುವರೆಗೂ ಅವೆಲ್ಲವನ್ನೂ ಸರಿಯಾಗಿ ಇವರು ಯೋಚನೆ ಮಾಡದೆ ಮಾಡುತ್ತಿರುವುದರಿಂದ, ಈ ಮೂರು ಪಂಚವಾರ್ಷಿಕ ಯೋಜನೆಗಳು ನಮಗೆ ಸಾಕಷ್ಟು ಫಲ ಕೊಡದೆ ಇವತ್ತು ದೇಶದಲ್ಲಿ ಅನೇಕ ಜನರಿಗೆ ಅನ್ನಕ್ಕೋಸ್ಕರವಾಗಿ ಸಾಯುವ ಪರಿಸ್ಥಿತಿ ಬಂದಿದೆ.

ಇದೇರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಪ್ಲಾನುಗಳಿಗೆ ಕೇಂದ್ರದಿಂದ ಬಂದ ನೆರವನ್ನು ಉಪಯೋಗಿಸುವ ರೀತಿನೀತಿ ನೋಡುವುದಾದರೆ ಬಹುಶಃ ಯಾವ ಪ್ಲಾನುಗಳೂ ಕೂಡ ಈ ದೇಶದಲ್ಲಿ ಯಶಸ್ವಿಯಾಗುವುದಕ್ಕೆ ಅವಕಾಶವಿಲ್ಲ, ಮೈಸೂರು ರಾಜ್ಯದಲ್ಲಿ ಆಡಳಿತ ದೋಷದಿಂದ ಅನೇಕ ಕೆಲಸಗಳು ಸರಿಯಾಗಿ ಆಗದೆ ಅದರಿಂದ ತಕ್ಕ ಪ್ರತಿಫಲ ಬರುತ್ತಿಲ್ಲ, ಇದಕ್ಕೆ ಬೇಕಾದರೆ ನಿದರ್ಶನ ಕೊಡ ಬಹುದು. ಉದಾಹರಣೆಗೆ, 1966ನೆಯ ಇಸವಿಯ ಆಡಿಟ್ ವರದಿಯನ್ನು ನೋಡಬಹುದು. ಇದಲ್ಲದೆ ಸರಕಾರದ ಗಮನಕ್ಕೆ ಬಾರದಿರುವ ಎಷ್ಟೋ ನಿದರ್ಶನಗಳಿವೆ. ಆಡಿಟ್ ವರದಿ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಟೀಕೆಗಳನ್ನು ಗಮನಿಸಿ ಎಲ್ಲ ಲೋಪದೋಷವಿದೆಯೆಂದು ನೋಡಿ ಅದಕ್ಕೆ ಅವಕಾಶವಿಲ್ಲದಂತೆ ಮೊದಲೇ ಕ್ರಮ ಕೈಕೊಂಡಿದ್ದರೆ ಬಹುಶಃ ಮಾಡಿದ ಯೋಜನೆಗಳು ಫಲ ನೀಡುತ್ತಿದ್ದವು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನಾದರೂ ಫಲಪ್ರದವಾಗಿ ಮಾಡಬೇಕು, ಅದಕ್ಕೆ ಕೇಂದ್ರ ಸರಕಾರದ ನೆರವು ಸಾಕಷ್ಟು ಪಡೆಯಬೇಕು, ಈ ದೇಶದಲ್ಲಿ ಸಂಪತ್ತೇನಿದೆ ಅದನ್ನು ಕಂಡುಹಿಡಿದು ಅದರಿಂದ ರಾಭ ಪಡೆಯಬೇಕು. ಇದೆಲ್ಲಾ ಮಾಡಿದಮೇಲೆ ಕೇಂದ್ರ ಸರಕಾರ ತೆರಿಗೆ ಹಾಕಬೇಕೆಂದು ನೂಚನೆ ಕೊಡಬಹುದು. ವಿರೋಧಪಕ್ಷದವರಾದ ನಾವಾದರೂ ಕೂಡ ತೆರಿಗೆ ಹಾಕದೆ ಸರಕಾರ ನಡೆಸಬೇಕೆಂದು ಹೇಳುವುದಿಲ್ಲ. ಆದರೆ ಯಾವ ತೆರಿಗೆಯನ್ನು ಯಾರು ಕೊಡಲು ಶಕ್ತರೋ ಅವರಮೇಲೆ ಹಾಕಬೇಕು. ತೆರಿಗೆಯಿಲ್ಲದೆ ಸರಕಾರ ನಡೆಸಲು ಸಾಧ್ಯವಿಲ್ಲ ಕೋಟ್ಯಾಂತರ ರೂಪಾಯಿಗಳನ್ನು ಪ್ರಯೋಜನವಿಲ್ಲದ ಯೋಜನೆಗಳಿಗೆ ಖರ್ಚುಮಾಡಿ ದುರುಪಯೋಗಮಾಡಿ ಸರಿಯಾಗಿ ಆಡಳಿತ ನಡೆಸದೆ ಈಗ ತೆರಿಗೆ ಹಾಕುವುದು ಸರಿಯೇ? ಮಿತವ್ಯಯ ಸಾಧಿಸಬೇಕು ಎಂದು ನಾಲ್ಕು ವರ್ಷಗಳಿಂದ ಹೇಳುತ್ತಿದ್ದರೂ ಕೂಡ ಏನೂ ಮಾಡಿಲ್ಲ. ನಾವು ಸರಕಾರಕ್ಕೆ ಕೋಟ್ಯಾಂತರ

ರೂಪಾಯಿಗಳನ್ನು ಖರ್ಚು ಮಾಡುವ ಯೋಜನೆಗಳನ್ನು ಮತ್ತು ಸೂಚನೆಗಳನ್ನು ಆಗಾಗ್ಗೆ ಕೊಟ್ಟಿದ್ದೇವೆ. ಆ ಸೂಚನೆಗಳನ್ನು ಸರಕಾರ ಗಮನಿಸಿಲ್ಲ. ಬಹುಶಃ ಸರಕಾರ ಅಧಿಕಾರವನ್ನು ಪಡೆಯಬೇಕು, ಅಧಿಕಾರ ತನ್ನಲ್ಲೇ ಉಳಿಯಬೇಕು ಎಲ್ಲವೂ ತನ್ನಲ್ಲೇ ಕೇಂದ್ರೀಕೃತವಾಗಬೇಕು ಎಂಬ ಅಭಿಪ್ರಾಯ ಹೊಂದಿರುವುದರಿಂದ ದೇಶಾಭಿವೃದ್ಧಿ ಸರಿಯಾಗಿ ಆಗುತ್ತಿಲ್ಲ. ಕೇಂದ್ರ ಸರಕಾರದಿಂದ ನೆರವು ಬಂದರೂ ಕೂಡ ಯಾವ ಸ್ಥಳದಲ್ಲೇನು ಕೆಲಸವಾಗಬೇಕು, ಹೆರ್ತ್ ಯೂನಿಟ್ ಎಲ್ಲಿ ತೆರೆಯಬೇಕು, ಸಣ್ಣಸಣ್ಣ ಮಾಡಿಯಂ ಪ್ರಾಜೆಕ್ಟ್ ಎಲ್ಲಿ ಮಾಡಬೇಕು, ಮೆಡಿಕಲ್ ಕಾಲೇಜನ್ನು ಎಲ್ಲಿ ತೆರೆಯುವುದು ಅವಶ್ಯಕ, ಎಲ್ಲಿ ಇದಕ್ಕೆಲ್ಲಾ ಸನ್ನಿವೇಶ, ವಾತಾವರಣ ಚೆನ್ನಾಗಿದೆ, ಎಂಬುದನ್ನೆಲ್ಲಾ ನೋಡಿ ಅದಕ್ಕೆ ತಕ್ಕಂತೆ ಮಾಡುತ್ತಿಲ್ಲ. ಎಲ್ಲಾದರೂ ಹೆಚ್ಚು ಖರ್ಚಿಲ್ಲದೆ ಒಂದು ಮಾಡಿಯಂ ಪ್ರಾಜೆಕ್ಟನ್ನು ಮಾಡಲು ಅವಕಾಶವಿದೆ ಎಂದು ಹೇಳಿದರೆ ಅಲ್ಲಿ ರಾಜಕೀಯದ ಒಡ್ಡಿಯಿಂದ ಅಥವಾ ಮುಳುಗಡೆಯಾಗುವ ಪ್ರದೇಶದ ಮಾಲೀಕರ ಪ್ರಭಾವದಿಂದ ಅಲ್ಲಿ ಆ ಕೆಲಸಮಾಡದೆ ನಿಲ್ಲಿಸುವುದು ಸರಿಯಲ್ಲ. ಯೋಗ್ಯವಾದ ಜಾಗ ಎಲ್ಲಿದೆ, ಎಲ್ಲಿ ಕೆಲಸ ಜಾಗ್ರತೆಮಾಡಲು ಅವಕಾಶವಿದೆ ಅಂಥ ಕಡೆ ತೆಗೆದುಕೊಂಡಿಲ್ಲ. ಉದಾಹರಣೆಗೆ, ಮಂಗಳ ಪ್ರಾಜೆಕ್ಟ್, ಮಂಚನಬೆಲೆ ಪ್ರಾಜೆಕ್ಟ್, ತಿರುಕನಪಾಳ್ಯದ ಪ್ರಾಜೆಕ್ಟ್ ಮುಂತಾದುವುಗಳ ಕಡೆ ಗಮನ ಕೊಡದಿರುವುದನ್ನು ನೋಡಬಹುದು. ಆಡಿಟ್ ವರದಿಯ ಪ್ರಕಾರ ಬರೀ ಫೌಂಡೇಷನ್ ಸ್ಕೋರ್ ಹಾಕುವುದಕ್ಕೇ 2—3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ, ಕಂಟ್ರಾಕ್ಟರುಗಳಿಗೆ ಹಣ ಕೊಟ್ಟು ವಸೂಲುಮಾಡದಿರುವ ಸಂದರ್ಭಗಳು ಬೇಕಾದಷ್ಟಿವೆ. ಹೀಗೆ ಮಾಡುವುದಾದರೆ ಏಕೆ ತೆರಿಗೆ ಕೊಡಬೇಕು? ತೆರಿಗೆ ಸರಿಯಾದ ರೀತಿಯಲ್ಲಿ ಉಪಯೋಗಿಸದಿದ್ದರೆ ಆಡಳಿತ ಸರಿಯಾಗಿ ನಡೆಸದಿದ್ದರೆ ಅದು ಯಾರ ತಪ್ಪು ಎಂದು ಯೋಚನೆಮಾಡಬೇಕು. ಗ್ರಾಮಾಂತರದ ಯೋಜನೆ ತೆಗೆದುಕೊಳ್ಳಿ, ಅಥವಾ ನೀರಾವರಿ ವಿಚಾರ ತೆಗೆದುಕೊಳ್ಳಿ, ಅಥವಾ ವ್ಯವಸಾಯದ ಇರಾಖೆಯಲ್ಲಿ ನಡೆಯಬೇಕಾದ ಕೆಲಸ ತೆಗೆದುಕೊಳ್ಳಿ, ಯಾವುದೂ ಕೂಡ ಸಮರ್ಪಕವಾಗಿ ಆಗಿಲ್ಲ, ನಮ್ಮ ರಾಜ್ಯದಲ್ಲಿ ಎಲ್ಲಿ ನೋಡಿದರೂ ಕೂಡ ಆಹಾರದ ಬೆಳವಣಿಗೆ ಕಡಮೆಯಾಗುತ್ತಿದೆ, ಆಹಾರದ ಇರಾಖೆಯಲ್ಲಿ ಯಾವ ಕೆಲಸವೂ ಸರಿಯಾಗಿ ನಡೆಯುತ್ತಿಲ್ಲವೆಂಬ ಟೀಕೆಯಿದೆ. ಇದನ್ನು 4 ವರ್ಷಗಳಾದರೂ ಯೋಗ್ಯ ರೀತಿಯಲ್ಲಿ ಸರಿಪಡಿಸಿಲ್ಲ. ಕೇಂದ್ರದಿಂದ ಬಂದ ಪ್ಯಾಕೇಜ್ ಸ್ಕೀಂ ಯಾವ ಸ್ಥಳಕ್ಕೆ ಕೊಡಬೇಕೆಂದು ಯಾವ ಆಧಾರದಮೇಲೆ ಆಯ್ಕೆಮಾಡಿದಿರಿ? ಮಂಡ್ಯದಲ್ಲಿ ಅದನ್ನು ಕೊಡಲು ಅಲ್ಲಿ ಬೇಕಾದವರು ಯಾರಿದ್ದಾರೆ? ಯಾವುದಾದರೂ ಯೋಜನೆ ಕೈಕೊಳ್ಳಬೇಕಾದರೆ ರಾಜಕೀಯ ಪ್ರಬಾವಕ್ಕೊಳಗಾಗುತ್ತಾರೆ, ಶ್ರೀ ಎರೇಗೌಡ ಪಾಟೀಲರು ಪ್ರಬಲರಾಗಿದ್ದರೆ ಅವರ ಪ್ರದೇಶಕ್ಕೆ ಕೊಡುತ್ತಾರೆ, ಶ್ರೀ ದೇವರಾಜ ಅರಸರು ಪ್ರಬಲರಾಗಿದ್ದರೆ ಅವರಿಗೆ ಬೇಕಾದ ಕಡೆಗೆ ಕೊಡುತ್ತಾರೆ, ಮಂತ್ರಿಗಳಮೇಲೆ ಪ್ರಭಾವ ಬೀರುವ ವ್ಯಕ್ತಿಗಳಿದ್ದರೆ ಅವರಿಗೆ ಬೇಕಾದ ಸ್ಥಳಕ್ಕೆ ಯಾವುದಾದರೂ ಕೈಗಾರಿಕೆ ಕೊಡುವರು, ಹೆರ್ತ್ ಯೂನಿಟ್, ಮೆಡಿಕಲ್ ಕಾಲೇಜು ಮುಖ್ಯಮಂತ್ರಿಗಳಮೇಲೆ ಯಾರಾದರೂ ಪ್ರಭಾವ ಬೀರಿದರೆ ಅವರಿಗೆ ಬೇಕಾದ ಕಡೆ ಅವನ್ನು ಸ್ಥಾಪಿಸುತ್ತಾರೆ. ಅಲ್ಲಿ ವಾತಾವರಣ ಸರಿಯಾಗಿಲ್ಲದಿದ್ದರೂ ಪರವಾಗಿಲ್ಲ, ಕೆಲಸ ಚೆನ್ನಾಗಿ ಆಗದಿದ್ದರೂ ಪರವಾಗಿಲ್ಲ, ಒಟ್ಟಿನಲ್ಲಿ ಮಂತ್ರಿಗಳಿಗೆ ಕೀರ್ತಿ ಬರಬೇಕು, ಒಳ್ಳೆಯ ಹೆಸರು ಬರಬೇಕು, ಅವರ ಅಧಿಕಾರ ಶಾಶ್ವತವಾಗಿರಬೇಕು. ಆದರೆ ಆ ರೀತಿ ಮಾಡಿದ್ದರಿಂದ ಜನರಿಗೆ ಸಹಾಯವಾಯಿತೆ ಎಂಬುದನ್ನು ಯೋಚನೆ ಮಾಡಬೇಕು. ಕಾಯಿರ್ ಇಂಡಸ್ಟ್ರಿಗೆ ಒಬ್ಬರಿಗೆ ಲೈಸೆನ್ಸ್ ಕೊಟ್ಟರು, ಅದರಿಂದ ಬೇಕಾದಷ್ಟು ಹಣ ಸಿಕ್ಕುತ್ತದೆ, ಕೈಗಾರಿಕೆ ಮಾಡದೆ ಬೇರೆಯವರಿಗೆ ಅದನ್ನು ಮಾರಿದರೆ ಹಣ ದೊರೆಯುತ್ತದೆ, ಲೈಸೆನ್ಸ್ ಪಡೆದು 3—4 ವರ್ಷಗಳಾದರೂ ಅದನ್ನು ಸ್ಥಾಪನೆ ಮಾಡಿಲ್ಲ. ಯಾವ ಪ್ರಭಾವದಿಂದ ಅಂಥವರಿಗೆ ಲೈಸೆನ್ಸ್ ಕೊಟ್ಟರೋ ಏನೋ. ಈ ರೀತಿ ಅನೇಕ ಯೋಜನೆಗಳು ಯಶಸ್ವಿಯಾಗಿಲ್ಲ. ಶ್ರೀ ಮಲ್ಲಪ್ಪನವರು ಇಲ್ಲವಿದ್ದಾಗ ಶ್ರೀ ಕೊಂಡಜ್ಜಿ ಬಸಪ್ಪನವರು ಒಂದು ಪ್ರಶ್ನೆಗೆ ಉತ್ತರ ಕೊಟ್ಟು ಯಾವುದಕ್ಕೂ ಲೈಸನ್ಸ್ ಕೊಟ್ಟಿಲ್ಲವೆಂದು ಹೇಳಿದರು, ಆದರೆ ಮಲ್ಲಪ್ಪನವರಿಗೆ ಅದು ಗೊತ್ತು, ಅವರು ಕಾಯಿರ್ ಇಂಡಸ್ಟ್ರಿಗೆ ಲೈಸೆನ್ಸ್ ಕೊಟ್ಟಿರುವುದು ನಿಜ ಎಂದು ಹೇಳುತ್ತಾರೆ. ಈ ರೀತಿಯಾಗಿ ಮಾಡುತ್ತಿರುವುದರಿಂದ ಯಾವ ಪ್ಲಾನುಗಳಿಂದಲೂ ಸಾಕಷ್ಟು ಸಹಾಯವಾಗುತ್ತಿಲ್ಲ. ಅವರು ರಾಜ್ಯ ಸಭೆಯ ಮೆಂಬರರು ಅವರು ಕಾಂಗ್ರೆಸ್ ಮನುಷ್ಯರು. ಇದು ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ.

Mr. SPEAKER.—It is not covered by the Plan. Even the Centre did not give any money. It is only intent of licence. The Member can only say that the intent of licence has not been put to use. He may suggest something more positive.

2-30 P. M.

ಶ್ರೀ ಕೆ. ಲಕ್ಕಪ್ಪ.—ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಿಗೆ ಅನುಕೂಲವಾಗುವ ಹಾಗೆ ಯೋಜನೆ ಯಶಸ್ವಿಯಾಗಬೇಕು. ಈ ರೀತಿಯಾಗಿ ಯೋಜನೆಗಳನ್ನು ಮಾಡದೇ ಇದ್ದರೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ನೀವು ಯೋಚನೆ ಮಾಡಬೇಕು. ಮೈಸೂರು ದೇಶದ ಪ್ರಗತಿ ಸಾಧನೆ ಬಗ್ಗೆ ಅಂಕಿಅಂಶಗಳು ತಮ್ಮ ಮುಂದೆ ಇವೆ. ಈಗಲಾದರೂ ಸರಕಾರ ಎಚ್ಚರ ವಹಿಸಿ ಈ ದೇಶದಲ್ಲಿ ಸಮಾಜವಾದ ನಡೆಯಬೇಕು. ಎರ್ಲಾ ಕ್ಷೇತ್ರಗಳಲ್ಲಿ ಸಮಾನತೆ ಬರಬೇಕು. ಅತಿ ಮುಖ್ಯವಾದ ಸಮಸ್ಯೆ ಅಂದರೆ ಅನ್ನ ಬಟ್ಟೆ ವಸತಿ ಇವು ಮೂರು ಇವೆ. ಈ ಮೂರು ಸಮಸ್ಯೆ ಬಗೆಹರಿಯಬೇಕಾದರೆ ಸಾಮಾಜಿಕ ಕ್ರಾಂತಿಯಾಗಬೇಕಾಗುವುದು. ಈ ನಾಲ್ಕನೇ ಪಂಚವಾರ್ಷಿಕ ಯೋಜನೆ ಯಶಸ್ವಿ ಮಾಡುವುದಕ್ಕೆ ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದುದು ಅಂದರೆ ಹಿಂದಿನ ಯೋಜನೆಗಳಲ್ಲಿ ಇರತಕ್ಕ ದೋಷದೋಷಗಳೇನು ಅದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ಬದಲಾವಣೆ ಮಾಡಿದರೆ ಯೋಜನೆ ಯಶಸ್ವಿಯಾಗುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಮೈಸೂರು ದೇಶದಲ್ಲಿ ಯಾವ ಯೋಜನೆಯೂ ಕೂಡ ಗ್ರಾಮಾಂತರ ಪ್ರದೇಶದಲ್ಲಿರುವ ಸಾಮಾನ್ಯ ಮನುಷ್ಯನಿಗೆ ತಲುಪಿಲ್ಲ. ಯೋಜನೆ ಫಲಪ್ರದವಾಗಬೇಕಾದರೆ ಗ್ರಾಮ ಪಂಚಾಯತಿ ಮಟ್ಟವಲ್ಲಿ ಯಶಸ್ವಿಯಾಗಿ ಮಾಡತಕ್ಕದ್ದು ಮುಖ್ಯ ಕಾರ್ಯ. ಮೊಟ್ಟಮೊದಲು ಇದಕ್ಕಾಗಿ ಪ್ರಯತ್ನ ಮಾಡಬೇಕು. ಅಧಿಕಾರ ವಿಕೇಂದ್ರೀಕರಣ ಮಾಡಿ ಹಳ್ಳಿಗಳಿಗೆ ಮೂಲ ಭೂತ ರಕ್ಷಣೆ ಕೊಡತಕ್ಕ ಹೊಸ ಯೋಜನೆ ಹಾಕಬೇಕು. ಗ್ರಾಮಾಂತರ ಪ್ರದೇಶದಲ್ಲಿ ಯೋಜನೆ ಯಶಸ್ವಿಯಾಗಬೇಕಾದರೆ ಸಾಮಾನ್ಯ ಮನುಷ್ಯ ವಿದ್ಯಾವಂತನಾಗಬೇಕು, ಒಳ್ಳೆ ಆರೋಗ್ಯ ಪಡೆಯಬೇಕು, ಅವನು ಬೆಳೆಯತಕ್ಕ ಬೆಳೆಗೆ ಪ್ರೋತ್ಸಾಹ ದೊರೆಯಬೇಕು ಹಾಗು ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕು. ಇಷ್ಟನ್ನು ತಾವು ಸಾಮಾನ್ಯವಾಗಿ ಏಕರೂಪತೆ ಕಾಣತಕ್ಕಂಥ ಯೋಜನೆ ತಯಾರ್ಮಾಡಬೇಕು. ಈ ತಳಹದಿಯ ಮೇಲೆ ಪ್ಲಾನ್ ಮಾಡಬೇಕು. ಭಾರಿ ಪ್ರಮಾಣದ ದೊಡ್ಡದೊಡ್ಡ ಪ್ರೊಜೆಕ್ಟುಗಳು ಹತ್ತಿಪ್ಪತ್ತು ವರ್ಷ ಯಶಸ್ವಿಯಾಗುವುದಿಲ್ಲ. ಯಶಸ್ವಿಯಾಗದೇ ಇರತಕ್ಕಂಥ ಯೋಜನೆಗೆ ಹೇರಳವಾಗಿ ಹಣ ಸುರಿಯುವುದು ಬೇಡ. ಯೋಜನೆಗಳಲ್ಲಿ ಸ್ಥಳ ಬದಲಾವಣೆ ಮಾಡುವುದು ಕಂಟ್ರಾಕ್ಟರ್ ಬದಲಿಸುವುದು ಬೇಡ. 5 ವರ್ಷಗಳಲ್ಲಿ ಫಲಪ್ರದವಾಗತಕ್ಕ ಯೋಜನೆಗೆ ಹೇರಳವಾಗಿ ಹಣ ಖರ್ಚು ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಮೂಲಭೂತ ಸಮಸ್ಯೆ ಏನಿದೆ ತಿಳಿದುಕೊಳ್ಳಬೇಕು. ಪಂಚಾಯತಿ ಮಟ್ಟದಲ್ಲಿ ಪ್ಲಾನ್ ತಯಾರ್ಮಾಡಬೇಕು. ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು ಯೋಜನೆ ಮಾಡಿದರೆ ಕೊಡತಕ್ಕಂಥ ಹಣ ನೇರವಾಗಿ ಸಾಮಾನ್ಯ ಜನಕ್ಕೆ ತಲುಪುತ್ತದೆ. ಮತ್ತು ಅದರಿಂದ ಪ್ರಯೋಜನವಾಗುತ್ತದೆ. ಈ ಬಗ್ಗೆ ನಾಲ್ಕನೇ ಪ್ಲಾನಿನಲ್ಲಿ ಏನು ಇಟ್ಟಿದ್ದೀರಿ? ಕೇಂದ್ರ ಸರಕಾರದ ನೆರವು ಎಷ್ಟು ಸಿಕ್ಕುತ್ತದೆ ಯೋಚನೆ ಮಾಡಬೇಕು. ದೊಡ್ಡದೊಡ್ಡ ಕಟ್ಟಡ ಕಟ್ಟುವ ಯೋಜನೆ ಕೈ ಬಿಡಬೇಕು. ಮುಖ್ಯವಾಗಿ ವ್ಯವಸಾಯ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕಾಗುವುದು ಅಗತ್ಯ. ಇಲ್ಲವಿದ್ದರೆ ಯೋಜನೆ ಯಶಸ್ವಿಯಾಗುವುದಿಲ್ಲ. ಮೈನರ್ ಇರಿಗೇಷನ್ನಿಗೆ ನಾಲ್ಕನೇ ಯೋಜನೆಯಲ್ಲಿ 29 ಕೋಟಿ ರೂಪಾಯಿ ಹಣ ಕೊಡಲಾಗಿದೆ. 40 ಕೋಟಿ ರೂಪಾಯಿ ಮಾಸ್ಟರ್ ಪ್ಲಾನ್ ಮಾಡಿದ್ದೀರಿ. ಇವುಗಳನ್ನು ಅವಷ್ಟು ಜಾಗ್ರತೆ ಕಾರ್ಯಗತ ಮಾಡಬೇಕು. ಸಾಮಾನ್ಯವಾಗಿ ಇಂಥ ಕೆಲಸ ಕಾರ್ಯಗಳಲ್ಲಿ ಸ್ಥಳ ಬದಲಾವಣೆ ಮಾಡುವುದು ಆಬ್ಜೆಕ್ಷನ್ ಪ್ರೊಸೀಡಿಂಗ್ಸ್‌ನಲ್ಲಿ ವ್ಯಾಜ್ಯ ನಡೆಯುವುದು ಮುಂತಾದ ನಿದರ್ಶನಗಳಿವೆ. ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್, ಕಾಸ್ಟ್ ಆಫ್ ಬಿಲ್ಡಿಂಗ್, ಕಾಸ್ಟ್ ಆಫ್ ಸೈಟ್ ಏರುಪೇರು ಆಗತಕ್ಕಂಥ ಉದಾಹರಣೆ ಇವೆ. ಮೊದಲು ಚೀಫ್ ಎಂಜಿನಿಯರ್ ಅವರು ಎಗ್ಸಿಕ್ಯೂಟಿವ್ ಎಂಜಿನಿಯರ್ ಅವರು ಪ್ಲಾನ್ ಮಾಡಿರುತ್ತಾರೆ. ಆದರೆ ಸ್ಯುಪರಿಟಿನ ಮಾಡಿದಾಗ್ಲೆ ಫೀಜಿಬಲ್ ಇಲ್ಲ, ಸೈಟ್ ಬದಲಿಸಬೇಕು ಎಂದು ಹೇಳುತ್ತಾರೆ. ಮಾಸ್ಟರ್ ಪ್ಲಾನ್ ಮಾಡಿದ್ದರೂ ಕೂಡ ನಿರ್ದಿಷ್ಟವಾದ ಯೋಜನೆ ಮಾಡಿಲ್ಲ. ಮುಖ್ಯವಾಗಿ ನೀರಾವರಿ ಬಾವಿಗಳ ಯೋಜನೆ ಹಾಕಿಕೊಂಡಿರುವುದು ಅತ್ಯಗತ್ಯವಾಗಿದೆ. ಹಳ್ಳಿಗಳಲ್ಲಿ ನೀರಾವರಿ ಬಾವಿಗಳಿಗಾಗಿ ಜನ ಅನಕ್ಕಿ ವಹಿಸಿದ್ದಾರೆ. ನೀರಾವರಿ ಬಾವಿಗಳ ಯೋಜನೆ ಪ್ರಯೋಜನಕಾರಿಯಾಗಿದೆ. ಸರಕಾರದವರು ನೇರವಾಗಿ ಬಾವಿ ತೆಗೆಸುವ ವ್ಯವಸ್ಥೆ ಮಾಡಬೇಕು. ಯಾವ ರೈತನು ನೀರಾವರಿ ಬಾವಿಗೆ ಹಣ ಬೇಕೆಂದು ಅಪೇಕ್ಷೆ ಪಡುತ್ತಾನೋ ಅಂಥವನಿಗೆ ಅತಿ ಶೀಘ್ರವಾಗಿ ಹಣ ತಲುಪುವಂತೆ ಮಾಡಿ ಬಾವಿ ಕೆಲಸ ನೆರವೇರಿಸಿಕೊಡಬೇಕು. ಇದನ್ನು ಬಹಳ ಜಾಗ್ರತೆ ಮಾಡಬೇಕಾದುದು ಅಗತ್ಯ. ಇಲ್ಲವೇ ಹೋದರೆ ರೈತನಿಗೆ ಕಷ್ಟವಾಗುತ್ತದೆ. ಇದಕ್ಕಾಗಿ ನಾಲ್ಕನೇ ಯೋಜನೆಯಲ್ಲಿ ಹಣ ಬಹಳ ಕಡಿಮೆ ಇದೆ. ಇನ್ನೂ ಹೆಚ್ಚು ಹಣ ಒದಗಿಸುವುದು ಅಗತ್ಯ. ನೀರಾವರಿ ಬಾವಿ ವಿಚಾರದಲ್ಲಿ ಅಂಕಿಅಂಶಗಳನ್ನು ಸಂಗ್ರಹ ಮಾಡಿದ್ದೀರಿ. ಆದರೆ ಎಷ್ಟು ಬಾವಿ ತೆಗೆಸಬಹುದು,

ಎಷ್ಟು ಧೂಮಿ ಏರಾವರಿ ಯಾಗುಶ್ತಡೆ ಎಂಬುದನ್ನು ಮೆಮೋರ್ಯಾಂಡಂನಲ್ಲಿ ವಿವರ ತಯಾರು ಮಾಡಿದ್ದೀರಾ ಎಂದು ಪ್ರಶ್ನೆಮಾಡುತ್ತೇನೆ. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಜನರ ಜೀವನಮಟ್ಟ ಆರೋಗ್ಯ ಸುಧಾರಣೆಯಾಗಬೇಕು, ಆಹಾರ ಧಾನ್ಯ ಬೆಳೆಯತಕ್ಕಂಥಾದ್ದು ಸಫಲವಾಗಬೇಕು, ಅವರಿಗೆ ವಿದ್ಯಾಭ್ಯಾಸದ ಸೌಕರ್ಯ ಒದಗುವಂತೆ ಇವುಗಳನ್ನು ಮಾಡ ಬೇಕು. ಅದರ ಅಂಕಿ ಅಂಶಗಳು ಏನಾಗಿದೆ, ಅಲ್ಲರತಕ್ಕ ಬೇಡಿಕೆ ಏನು, ಉದ್ಯೋಗ ವನ್ನು ಉದ್ಯೋಗವಿಲ್ಲದೆ ಇರತಕ್ಕಂಥ ಸ್ಕಿರ್‌ಡ್ ಅಂಡ್ ಅನ್‌ಸ್ಕಿರ್‌ಡ್ ವರ್ಕರ್ಸ್ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಜನ ಇದ್ದಾರೆ, ಅವರಿಗೆ ಉದ್ಯೋಗ ಕೊಡಲು ಏನು ಪ್ರಯತ್ನ ಮಾಡಿತ್ತೀರಿ? ಈ ನಿರುದ್ಯೋಗ ಸಮಸ್ಯೆಯನ್ನು ಯಾವ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿ, ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಬಗೆಹರಿಸುತ್ತೀರಿ? ಎಷ್ಟು ವರ್ಷಗಳಲ್ಲಿ ಯಶಸ್ವಿಯಾಗಿ ಇದನ್ನು ಬಗೆಹರಿಸಬೇಕೆಂದು ಇದ್ದೀರಿ? ಎನ್ನುವ ಬಗ್ಗೆ ರೂಪರೇಖೆ ಏನಾದರೂ ಇದೆಯೇ? ನಾಲ್ಕನೆ ಯೋಜನೆಯಲ್ಲಿ ಕೇಂದ್ರಸರ್ಕಾರದ ನೆರವನ್ನು ತೆಗೆದುಕೊಳ್ಳತಕ್ಕಂಥ ವಿಚಾರವನ್ನು ಕೇಂದ್ರದ ಮುಂದೆ ಇಡಬೇಕಾದರೆ ಯಾವ ಅಂಕಿಅಂಶಗಳನ್ನು ಕಳಿಸಿದ್ದೀರಿ? ಈ ಯೋಜನೆಗಳನ್ನು ಸಿದ್ಧಮಾಡ ತಕ್ಕಂಥ ಕಾಲದಲ್ಲಿ ಬಹಳ ತಪ್ಪು ಅಂಶಗಳನ್ನು ಮಾಡಿದ್ದೀರಿ. ಅದೇ ರೀತಿ ಸಹಕಾರ ಸಂಘಗಳ ಬಗ್ಗೆ 4ನೇ ಯೋಜನೆಯಲ್ಲಿ ಮಾಡಿದ್ದೀರಿ. ಆ ಬಗ್ಗೆ ಒಂದು ಅಂಶವನ್ನು ಹೇಳಬಯಸುತ್ತೇನೆ. ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಹಾಕಿದ್ದೆ. ತುಮಕೂರು ಜಿಲ್ಲೆಯಲ್ಲಿ ಉದಾಹರಣೆಗೆ ಹೇಳ ಬೇಕಾದರೆ.....

Sri D. DEVARAJ URS.—As he himself could see this is a preliminary memorandum of the fourth plan. So many details which the hon'ble member is stating cannot be found here. This is only a preliminary memorandum.

ಶ್ರೀ ಕೆ. ಲಕ್ಕಪ್ಪ.—ನಾನು ಹೇಳುವುದು, ಪ್ರಿಲಿಮಿನರಿ ಮೆಮೊರ್ಯಾಂಡಮ್ ಬಗ್ಗೆ. ತಮ್ಮ ನಾಲ್ಕನೇ ಪ್ಲಾನಿನ ಯಾವ ಅಂಶವನ್ನೂ ನಮೂದಿಸಿಲ್ಲ. ಇದ್ದಿದ್ದರೆ ಇಲ್ಲಿ ನಮೂದಿಸಬೇಕಾಗಿತ್ತು. ಮತ್ತೊಂದು ವಿಷಯವೆಂದರೆ, ಸಹಕಾರ ಸಂಘಕ್ಕಾಗಿ 10 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಎಲ್ಲಾ ಕಡೆಯಲ್ಲೂ ಸಹಕಾರಸಂಘಗಳ ಮೂಲಕ ಆಹಾರವನ್ನು ವಿತರಣೆಮಾಡಿಸುತ್ತೀರಿ, ಮತ್ತು ರೈತರಿಗೆ ನೇರವಾಗಿ ಸಹಾಯವನ್ನು ಸಂಘಗಳ ಮೂಲಕ ಕೊಡಿಸುವ ಏರ್ಪಾಡು ಮಾಡಿದ್ದೀರಿ. ನಾನು ಕೇಳಿದ ಒಂದು ಪ್ರಶ್ನೆಗೆ ಈ ರೀತಿ ಸರ್ಕಾರದಿಂದ ಉತ್ತರ ಬಂದಿದೆ. ತುಮಕೂರಿನಲ್ಲಿ ಎಷ್ಟು ಸಹಕಾರ ಸಂಘಗಳು ಇವೆ ಎಂದು ಕೇಳಿದ್ದಕ್ಕೆ 711 ಎಂದು ಉತ್ತರ ಬಂದಿದೆ. ಅವುಗಳಲ್ಲಿ ಎಷ್ಟು ಸಹಕಾರ ಸಂಘಗಳು ನರಿಯಾಗಿ ನಡೆಯುತ್ತಿವೆ, ಎಷ್ಟು ನರಿಯಾಗಿ ನಡೆಯುತ್ತಿಲ್ಲ ಎಂದು ಕೇಳಿದ್ದಕ್ಕೆ ಯಾವುದೂ ನರಿಯಾಗಿ ನಡೆಯುತ್ತಿಲ್ಲವೆಂದು ಉತ್ತರ ಬಂದಿದೆ. ಲಕ್ಷಾಂತರ ರೂಪಾಯಿಗಳನ್ನು ಈ ಸಹಕಾರ ಸಂಘಗಳಿಗೆ ಕೊಟ್ಟಿದ್ದೀರಿ. ಈ ಹಣವನ್ನು ಸಂಘಗಳವರು ನರಿಯಾದ ರೀತಿಯಲ್ಲಿ ಉಪ ಯೋಗಿಸುವ ವ್ಯವಸ್ಥೆ ಮಾಡದಿದ್ದರೆ ಯಾವ ಯೋಜನೆಗಳು ತಾನೆ ಯಶಸ್ವಿಯಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ! ಒಂದು ಜಿಲ್ಲೆಯಲ್ಲಿ ನಾನು ಕಂಡ ರೀತಿಯಲ್ಲಿ 10 ಸಹಕಾರಸಂಘಗಳಲ್ಲಿ 30 ಸಾವಿರ, 20 ಸಾವಿರ, 10 ಸಾವಿರ ಹಣ ದುರುಪಯೋಗವಾಗಿರುವುದು ನಿದರ್ಶನವಿದೆ. 48 ಸಹಕಾರ ಸೊಸೈಟಿಗಳು ಅಂಡರ್ ಲಿಕ್ವಿಡೇಷನ್ ಇವೆ. ತುಮಕೂರು ಜಿಲ್ಲೆಯಲ್ಲಿ ಡೀಫಂಕ್ಟ್ ಸೊಸೈಟಿಗಳು 138. ತಾವು ಯೋಚನೆ ಮಾಡಬೇಕು, ಒಂದೊಂದು ಸೊಸೈಟಿಯಲ್ಲಿ 10 ರೂಪಾಯಿ ನಂತೆ ದುರುಪಯೋಗವಾದರೆ 711 ಸೊಸೈಟಿಗಳಿಗೆ ಎಷ್ಟು ಆಯಿತು ಎಂದು. ಈ ರೀತಿ ಸೊಸೈಟಿ ಗಳು ನರಿಯಾಗಿ ಕೆಲಸಮಾಡದಿದ್ದರೆ ದೇಶದ ಅಭಿವೃದ್ಧಿ ಯಾವ ರೀತಿಯಾಗಬೇಕು? ದೇಶದ ಅಭಿವೃದ್ಧಿ ಗಾಗಿ ರೂಪುರೇಖೆಗಳನ್ನು ಹಾಕಿಕೊಂಡು, ಮೂಲಭೂತವಾದ ಅಂಶಗಳನ್ನು ಪ್ಲಾನ್‌ನಲ್ಲಿ ಅಳವಡಿಸಿ ಕೊಂಡು ಮುಂದೆಹೋಗಬೇಕು ಎಂದು ಹೇಳಿ, ಒಂದು ಅರ್ಧ ಘಂಟೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಎಂ. ದೇವ್ (ಗುಬ್ಬಿ).—ಸ್ವಾಮಿ, ಇದನ್ನು ನೋಡಿದಾಗ ನನಗನ್ನಿಸುತ್ತದೆ, ಪರಸ್ಥಿತಿಯ ಅಳತೆಯನ್ನು ತಿಳಿದು ಮಾಡಬೇಕಾದ ಕೆಲಸವನ್ನು ಸರಿಯಾದ ಮಾರ್ಗವನ್ನು ತಿಳಿದು ಕೊಂಡು ಸಾಧಿಸುವ ಮನಸ್ಸಾಗಲಿ, ಅತ್ಮ ವಿಶ್ವಾಸವಾಗಲಿ ಯಾರಿಗೂ ಇಲ್ಲ. ಎನ್ನುವುದು ಈ ಪ್ರಿಲಿಮಿನರಿ ಮೆಮೊರ್ಯಾಂಡಮ್‌ನಿಂದ ಗೊತ್ತಾಗುತ್ತದೆ. ಸಭಾ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ್ದಾರೆ:

"association of the people at the stage of formulation of plans stage and implementation"

(ಶ್ರೀ ಪಿ. ಎಂ. ಡೇವ್)

ಇದರಲ್ಲಿ ಸರಿಯಾಗಿ ಓಂದು ಕಡೆಯಿಂದ ಓದಿದರೆ ಐದನೇ ಪೇಜಿನಲ್ಲಿ ಹೇಳುತ್ತದೆ. ಗುರಿ ಸಾಧಿಸ ಬೇಕಾದ್ದು ಏನು ಎಂದರೆ; mere six per cent ಎಂದು ತಾವು ಇನ್ನೂ ಮಕ್ಕಳ ಹಾಗೆ ಇದ್ದು ಬೆಳವಣಿಗೆಗೆ ದಾರಿ ಇಲ್ಲವೋ ಎಂದು ಅನಿಸುತ್ತದೆ. ಯಾವ ಒಂದು ಸಮಾಜವಾದದ ರಾಷ್ಟ್ರವಾಗಲಿ ಹೊರಗಿನ ಒಂದು ಸಂಪರ್ಕ ಪಡೆಯದಿದ್ದರೆ, ಕೊನೆಯ ಪಕ್ಷ 10 ಪರ್‌ಸೆಂಟ್ economic growth ಇರಬೇಕೆನ್ನುವುದು ಪ್ರಪಂಚದಲ್ಲಿ ತಿಳಿದಿರುವ ಎಲ್ಲರಿಗೂ ಗೊತ್ತಿರುವ ವಿಚಾರ. ನಾಲ್ಕನೆ ಪ್ಲಾನ್‌ನಲ್ಲಿ ವಿಚಾರ ಮಾಡಿ ನೋಡಿದರೆ ಏನು ಗೊತ್ತಾಗುತ್ತದೆಯೆಂದರೆ, ಇವರು ಟಾರ್ಗೆಟ್ ಇಟ್ಟಿರುವುದು ಬಹಳ ಕಮ್ಮಿ ಎಂದು. ಅದರಲ್ಲೂ ಕೂಡ ಖೋತಾ ಬಂದಿರುವುದು ಮೇಲಿಂದ ಮೇಲೆ ಗೊತ್ತಾಗುತ್ತದೆ. ಈಗಿನ ವಾಸ್ತವಿಕ ಪರಿಸ್ಥಿತಿಯೆಂದರೆ, ಒಂದು ಕಡೆ ನಿರುದ್ಯೋಗ, ಇನ್ನೊಂದು ಕಡೆ ಜನರ ಪಾಡು ಬರಬರುತ್ತಾ ಹಸನಾಗುವುದಕ್ಕೆ ಬದಲು ಇನ್ನೂ ಹೊಲಸಾಗುತ್ತಿದೆ. ಈಗ ಮೈಸೂರು ರಾಜ್ಯದ ಪರಿಸ್ಥಿತಿಯೆನಾಗಿದೆಯೆಂದರೆ, ಪಬ್ಲಿಕ್ ಸೆಕ್ಟಾರ್ ಡೆವಲಪ್ ಆಗುತ್ತಿದೆ. ಪ್ರೈವೇಟ್ ಸೆಕ್ಟಾರ್ ಡೆವಲಪ್ ಆಗುವುದಕ್ಕೆ ಸಾಧ್ಯವಾಗುತ್ತಿಲ್ಲ. ದೊಡ್ಡ ಪ್ರಮಾಣದಲ್ಲಿ ಬಂಡವಾಳ ತೊಡಗಿ ಸಿರುವವರು ನಮ್ಮ ಮೈಸೂರು ದೇಶದಲ್ಲಿ ಹೆಚ್ಚಾಗಿಲ್ಲ. ಈ ದೃಷ್ಟಿಯಿಂದ ನಾವು ಯೋಚನೆ ಮಾಡಬೇಕು. ನಮ್ಮ ಮೈಸೂರು ದೇಶದಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಸೋಷಿಯಲಿಜಮ್ ಇರಲಿಲ್ಲ. ಅದರಲ್ಲೂ ವಿಶಾಲ ಜಗತ್ತಿನಲ್ಲಿ ಕೂಡ ಎಲ್ಲಾ ಕೆಲಸಗಳು ಎರೆಕ್ಷನ್ ಮುಂಖಾಂತರ ನಡೆಯುತ್ತಿತ್ತು. ದೊದಲು 8 ರಿಂದ 18 ಪರ್‌ಸೆಂಟ್ ಬಡ್ಜೆಟ್ ಅಮೌಂಟ್‌ನಲ್ಲಿ ಸ್ಟಾಫ್ ಮತ್ತು ಎಸ್ಟಾಬ್ಲಿಸ್‌ಮೆಂಟಿಗಾಗಿ ಖರ್ಚಾಗುತ್ತಿದ್ದು ಈಗ 100ಕ್ಕೆ 60 ಪರ್‌ಸೆಂಟ್ ಖರ್ಚಾಗುತ್ತಿದೆ. ಇದನ್ನು ಕಮ್ಮಿ ಮಾಡಲು ಸರ್ಕಾರ ಆಲೋಚನೆ ಮಾಡುತ್ತಿಲ್ಲ. ಆಮೇಲೆ ಮೂರನೆ ಯೋಜನೆಯಲ್ಲಿ ಇದುವರೆಗೆ ಆಗಿರುವ ಹಾಗೆ ಮುಂದೆಯೂ ಮುಂದುವರೆಯುತ್ತದೆ, ರಾಜ್ಯ ಭಾರ ಇನ್ನೂ ಬಿಗಿಯಾಗುತ್ತದೆಂದು ಹೇಳಿದ್ದಾರೆ. ಆದರೆ ಹೇಳಿದಂತೆ ಮಾಡುತ್ತಿಲ್ಲವೆಂದು ಹೇಳಬಹುದು. ಹಣಕಾಸಿನ ವಿಚಾರ ನೋಡಿದರೆ 100·99 ಕೋಟಿ ಸಾಲ ಕೊಡಬೇಕು. ಪಬ್ಲಿಕ್ ಸಾಲ 20 ಕೋಟಿ. ಕೇಂದ್ರ ಸರ್ಕಾರದಿಂದ 75 ಕೋಟಿ ಸಾಲ. ಈ ಸಾಲವನ್ನೆಲ್ಲಾ ಯಾವ ರೀತಿ ತೀರಿಸುತ್ತಾರೆ ಎಂದು ಹೇಳಿಲ್ಲ. ಈ ದೃಷ್ಟಿಯಿಂದ ನನಗನ್ನಿಸುತ್ತದೆ, ದೇಶದ ವಾಸ್ತವಿಕ ಪರಿಸ್ಥಿತಿಯ ಅರಿವು ಇವರಿಗೆ ಇಲ್ಲ ಮತ್ತು ಇವರ ಜೊತೆಗೆ ಇವರ ಗುರಿ ಏನಿದೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನೀವು 10ನೇ ಪೇಜಿನಲ್ಲಿ ಹೇಳುತ್ತೀರಿ, ನಮ್ಮ ಪರಿಸ್ಥಿತಿ ಹೀಗೆ ಇರುವುದರಿಂದ, ಎನಾದರೂ ನಮ್ಮ ಡೆವಲಪ್‌ಮೆಂಟ್ ಪ್ಲಾನ್ ಯಶಸ್ವಿಯಾಗಬೇಕಾದರೆ ಸೆಂಟ್ರಲ್ ಗೌರ್ನಮೆಂಟಿನವರು ಸಹಾಯ ಮಾಡಿದರೆ ಆಗುತ್ತದೆ ಇಲ್ಲವಿದ್ದರೆ ಇಲ್ಲ ಎಂದು. ಆದಳಿತ ರಂಗದಲ್ಲಿ ಯಾವ ರೀತಿ ಬದಲಾವಣೆಗಳು ಬರಬೇಕು, ಕಾರ್ಯಾಂಗದಲ್ಲಿ ಯಾವ ರೀತಿ ಬದಲಾವಣೆಗಳು ಬರಬೇಕು, ಯಾವ ಕೆಲಸ ಮಾಡಬೇಕಾದರೂ, ದೇಶ ಮುಂದುವರಿಯ ಬೇಕಾದರೂ, ಏನು ಮಾಡಬೇಕೆಂದು ಆಳವಾಗಿ ಯೋಚನೆ ಮಾಡಬೇಕು. ನಾವು ವ್ಯವಸಾಯದಲ್ಲಿ ಎಷ್ಟರಮಟ್ಟಿಗೆ ವಿಫಲರಾಗಿದೆವೆ ಎಂದು ಸಮಗ್ರವಾಗಿ ಯೋಚನೆ ಮಾಡುವ ಶಕ್ತಿ ಇದುವರೆಗೂ ಬಂದಿಲ್ಲ ಎಂದು ನನಗೆ ಅನಿಸುತ್ತದೆ. ಇವೊತ್ತು ರೇಟಸ್ಟ್ ಫಿಗರ್ಸ್ ನೋಡಿದರೆ, ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಬೆಳಕು 45 ಮಿಲಿಯನ್ ಕಿಲೋವಾಟ್ಸ್ ಪವರ್ ಇದೆ. ಇಂಡಸ್ಟ್ರೀಗೆ ಎಷ್ಟು ಎಂದರೆ, 960 ಮಿಲಿಯನ್ ಕಿಲೋವಾಟ್ಸ್ ಪವರ್ ಆಗುತ್ತದೆ. 45 ಮಿಲಿಯನ್ ಎಲ್ಲಿ? 960 ಮಿಲಿಯನ್ ಎಲ್ಲಿ? ಅಗ್ರಿಕಲ್ಚರ್ ಮುಂದುವರಿಯಲು ಬರೇ ನೀರಾವರಿ ಇದ್ದರೆ ಸಾಕು ಎಂದು ಹೇಳುತ್ತಾರೆ. ಅಗ್ರಿಕಲ್ಚರ್ ಮುಂದುವರಿಯಬೇಕಾದರೆ, ಅದಕ್ಕೆ ತಕ್ಕ ಹಾಗೆ ಕೆಮಿಕಲ್ ಇಂಡಸ್ಟ್ರಿಸ್ ಹೆಚ್ಚಾಗಿ ಆಗಬೇಕು. ಆಮೇಲೆ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಬೇಕು. ಯಾವ ರಾಷ್ಟ್ರ ವ್ಯವಸಾಯದಲ್ಲಿ ಮುಂದುವರಿಯುತ್ತದೆ ಎಂದು ತಿಳಿದುಕೊಳ್ಳಬೇಕಾದರೆ, ಪರ್ ಕ್ಯಾಪಿಟಾ ಪವರ್ ಕನ್‌ಸಂಷನ್ ಎಷ್ಟು ಇದೆ ಎಂದು ನೋಡಿದರೆ ಗೊತ್ತಾಗುತ್ತದೆ. ನಾನು ಏತಕ್ಕೆ ಇಷ್ಟು ಕಳಕಳಿಯಿಂದ ಹೇಳುತ್ತಿದ್ದೇನೆ ಎಂದರೆ, ಇಲ್ಲಿ ಒಂದು ಕೆಲಸ ಮಾಡುವವರಿಗೂ ಹಳ್ಳಿಯವರಿಗೂ ಸಂಪರ್ಕ ತಪ್ಪಿಹೋಗುತ್ತದೆ ನೀವು ಆಡಳಿತಕ್ಕೆ ಬಂದಮೇಲೆ ತಮಗೂ ಹಳ್ಳಿಗಳಿಗೂ ತಪ್ಪಿ ಹೋಗಿ ನಿಮಗೆ ಆಳವಾಗಿ ಯೋಚನೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಈ ದೃಷ್ಟಿಯಿಂದ ದೀವು ಆಲೋಚನೆ ಮಾಡಬೇಕು. 5,500 ಹಳ್ಳಿಗಳಿಗೆ ಎರೆಕ್ಟ್ರಿಫಿಕೇಷನ್ ಮಾಡುತ್ತೇವೆಂದು ಹೇಳಿದ್ದೀರಿ. ಎಷ್ಟಷ್ಟೂ ಸಾಲದು. ಇನ್ನು ಒಂದು ಕಡೆ ಫ್ರಾಗ್‌ಮೆಂಟೇಷನ್ ಆಗುತ್ತಿದೆ. ಅದನ್ನು ಕನ್‌ಸಾಲಿಡೇಟ್ ಮಾಡಿ ದೊಡ್ಡ ದೊಡ್ಡ ಮೆಷಿನರಿ ಉಪಯೋಗಿಸದೆ ಇದ್ದರೆ ಅಗ್ರಿಕರ್‌ಚರ್ ಮುಂದುವರಿಯುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಇದರಲ್ಲಿ ಮುಂದೆ ಏನು ಮಾಡುತ್ತೀರಿ ಎಂದು ಪೇಜು 24ರಲ್ಲಿ ಕೊಟ್ಟಿದ್ದೀರಿ. "converting scattered holdings of multiple holders into compact blocks of positive agriculture singificance" ಈ ತರಹ ಹೇಳಿ, ಪೇಜು 23ರಲ್ಲಿ ಹೀಗೆ ಹೇಳಿದಿರಿ, prevention of fragmention and consalidation of Holdings" ಯಾವುದರಲ್ಲಿ ನೋಡಲು

ಹೀಗೆ ಹೇಳಿದ್ದೀರಿ. ಹಿಂದೆ ಪಂಚಾಯತಿ ರಾಜ್ಯ ನಡೆದುಕೊಂಡು ಹೋಗುತ್ತಿತ್ತು ಅದಕ್ಕೆ ಬರುವ ಕಂದಾಯದಲ್ಲಿ 60 ರಿಂದ 70 ಪರ್ಸೆಂಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಇನ್ನು ಏನೂ ಮಾಡುವುದಕ್ಕೂ ಹೋಗುತ್ತಿರಲಿಲ್ಲ. ಅಗ್ರಿಕಲ್‌ಚರ್ ಮುಂದೆ ಹೋಗಬೇಕಾದರೆ ಇರ್ರಿಗೇಷನ್ ಜೊತೆಗೆ ಪವರ್ ಕೊಡುವುದು ಬಹಳ ಮುಖ್ಯವಾದುದು ಎಂದು ತಾವು ತಿಳಿದುಕೊಳ್ಳಬೇಕು. ಇದರ ಜೊತೆಗೆ ಫ್ರಾಗ್‌ಮೆಂಟೇಷನ್ಸ್ ಆಫ್ ಹೋಲ್ಡಿಂಗ್ಸ್ ಇರುವುದನ್ನು ಕನ್‌ಸಾಲಿಡೇಷನ್ ಮಾಡಿಬಿಟ್ಟರೆ ಅಷ್ಟೇ ಸಾಕು ಎಂದು ಹೇಳುತ್ತೇನೆ. ಅದಕ್ಕೆ ಸಂಬಂಧಪಟ್ಟ ಬದಲಾವಣೆಗಳು ಎಲ್ಲೆಲ್ಲಿ ಆಗಬೇಕು ಅದನ್ನು ಮಾಡಬೇಕು. ನೀವು ಪ್ರಾಮಾಣಿಕತೆಯಿಂದ ಇದನ್ನು ಹೇಳಲಿಲ್ಲ. ಈ ದೃಷ್ಟಿಯಿಂದ ಎರಡು ಪ್ರಶ್ನೆ ಉದ್ಭವಿಸುತ್ತದೆ. ಒಂದು ಕನ್‌ಸಾಲಿಡೇಷನ್ ಮಾಡುವುದಕ್ಕೆ ಸಾಧ್ಯವೇ ? ಅದು ಸಾಧ್ಯವಾದರೆ ಹೇಗೆ ಮಾಡಬೇಕು ? ನನ್ನ ಅಭಿಪ್ರಾಯದಲ್ಲಿ ಕನ್‌ಸಾಲಿಡೇಷನ್ ಮಾಡುವುದು ಸಾಧ್ಯ. ಅದಕ್ಕೆ ತಕ್ಕ ಪರಿಸ್ಥಿತಿ ಬಂದಿದೆ. ಉತ್ತರ ಇಂಡಿಯಾದಲ್ಲಿ ಸ್ಟೇಟ್ ಫಾರಂ ಮಾಡಿದ್ದಾರೆ. ಪ್ರಾರಂಭದಲ್ಲಿಯೇ ಆರು ಪರ್ಸೆಂಟು ರಿಟರ್ನ್ ಆಗಿದೆ. ಯಾವ ರಾಜ್ಯದಲ್ಲಿ ಸ್ಟೇಟ್ ಫಾರಂಸ್ ಮಾಡಿದ್ದಾರೆ, ಅಲ್ಲಿ ರೇಡೆಸ್ಟ್ ಟೆಕ್ನಿಕ್ಸ್ ತತ್‌ಕ್ಷಣ ಜಾರಿಗೆ ತರುವುದಕ್ಕೆ ದಾರಿ ಇರುತ್ತದೆ. ಆಹಾರದ ಉತ್ಪತ್ತಿ ಬಹಳ ಬೇಗ ಜಾಸ್ತಿಯಾಗುತ್ತದೆ. ಇದರ ಜೊತೆಗೆ ಇನ್ನೊಂದು ಅನುಕೂಲ ಆಗುತ್ತದೆ. ಸುತ್ತಮುತ್ತ ಹಳ್ಳಿಯವರು ಅಲ್ಲಿಗೆ ಬರುತ್ತಾರೆ, ನೋಡುತ್ತಾರೆ. ಕಣ್ಣಲ್ಲಿ ನೋಡಿ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಬಾಕಿಯವರಿಗೂ ಒಂದು ಅನುಕೂಲವಾಗುತ್ತದೆ. ನಮ್ಮ ದೇಶದ ಪರಿಸ್ಥಿತಿಯಲ್ಲಿ ಏನು ಆಗಿದೆ ಎಂದರೆ, ರೈತರಿಗೆ ಸಾಲ ಸಿಕ್ಕುತ್ತಾ ಇಲ್ಲ, ಸರ್ಕಾರದವರು ಅವರಿಗೆ ಕೊಡುವ ಪರಿಸ್ಥಿತಿಯಲ್ಲಿರುವುದಿಲ್ಲ. ಸಾಲ ಕೊಟ್ಟರೂ ಅದು ಹಿಂದಕ್ಕೆ ಬರುವುದಿಲ. ಈ ದೃಷ್ಟಿಯಿಂದ ಸ್ಟೇಟ್ ಗೌರ್ನಮೆಂಟ್ ಸಾಲ ಕೊಡುವುದಿಲ್ಲ ಎಂದು ಹೇಳುತ್ತೇನೆ. ಹಳ್ಳಿಗಳ ಕಡೆ ರೇವಾದೇಪಿ ಹೇಗೆ ಮಾಡುತ್ತಾರೆ ಎಂದರೆ, ಎಲ್ಲಾ ಭೋಗ್ಯ, ಕ್ರಯ ಮಾಡಿಸಿಕೊಳ್ಳುತ್ತಾರೆ. ಎನ್.ಇ.ಎಸ್. ಅಗ್ರಿಕಲ್‌ಚರ್ ಎಕ್ಸ್‌ಟೆನ್‌ಷನ್ ಆಫೀಸರು ಅವರಿಗೆ ಹೆಚ್ಚು ಬೆಳೆ ಬೆಳೆಯಲು ಹೆಚ್ಚಿಗೆ ಸಹಯ ಮಾಡುವುದಕ್ಕೆ ಆಗಿಲ್ಲ. ಕೊನೆಗೆ ರೈತರಿಗೆ ಭೋಗ್ಯ ಸಾಲ ತೀರಿಸುವುದಕ್ಕೆ ಆಗಿಲ್ಲ. ಆದ್ದರಿಂದ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮಾಡಿ ದೊಡ್ಡ ದೊಡ್ಡ ಅಗ್ರಿಕಲ್‌ಚರ್ ಮಿಷನರಿ, ಕೆಮಿಕಲ್ ಫರ್ಟಿಲೈನರ್ಸ್, ಹೆಸ್ಟಿಸೈಡ್ಸ್ ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತದೆ. ಆಗ ಜಮೀನು ಸರಿಯಾಗಿ ಅಬಾದು ಮಾಡಿ ಹೆಚ್ಚು ಬೆಳೆ ತೆಗೆದು ಲಾಭ ಪಡೆಯುವುದಕ್ಕೆ ಸಾಧ್ಯ, ಈಗ ಆಹಾರ ಉತ್ಪನ್ನ ಇತ್ಯಾದಿ ಕಡಿಮೆಯಾಗಿ ಜನಕ್ಕೆ ರೋಸಿ ಹೋಗಿದೆ. ಯಾರೇ ಆಗಲಿ ನಿಮ್ಮಷ್ಟು ಹೊಲ ಸಾಗಿ ರಾಜ್ಯಭಾರ ಮಾಡುವುಕ್ಕಾಗುವುದಿಲ್ಲ ಎಂದು ಖಚಿತವಾದ ಅಭಿಪ್ರಾಯವಾಗಿದೆ. ನಮ್ಮ ದೇಶಕ್ಕೆ ಉಳಿಗಾಲ ಬರಬೇಕಾದರೆ, ಖಂಡಿತವಾಗಿ ಒಂದು ಮಾತ್ರ ನಿಶ್ಚಳವಾಗಿ ಮಾಡಬೇಕೆಂದು ಎದ್ದು ಕಾಣುತ್ತದೆ. ರೈತ ಮತ್ತು ಕೆಲಸಗಾರ ಸರ್ಕಾರದ ಕೆಲಸ ಮಾಡಬೇಕು. ಶ್ರೀಮಂತರಿಗೂ ಬಡವರಿಗೂ ಅನಂತರ ಬಹಳವಾಗಿರುತ್ತದೆ. ಅದನ್ನು ಕಡಿಮೆ ಮಾಡಲು ಪ್ರಯತ್ನ ಮಾಡಿ ರೈತ, ಕೆಲಸಗಾರ ಸರ್ಕಾರದ ರಚನೆ ಮಾಡಬೇಕು. ಅಗ್ರಿಕಲ್‌ಚರ್ ಮತ್ತು ಇಂಡಸ್ಟ್ರಿ ಮುಂದುವರಿಯಬೇಕು. ಕಂಟ್ರಾಕ್ಟರ ಮುಖಾಂತರ ಕೆಲಸ ಮಾಡುವುದನ್ನು ಬಿಡಬೇಕು. ಅವರು ಒಂದಕ್ಕೆ 10 ರಷ್ಟು ದುಡ್ಡು ಹೊಡೆಯುತ್ತಾರೆ. ಕಂಟ್ರಾಕ್ಟರಿಂದ ದುರ್ವ್ಯಹಾರಕ್ಕೆ ಅವಕಾಶ ಇರುತ್ತದೆ. ಕೆಲಸ ಆಗುವುದಕ್ಕೆ ಬಹಳ ದಿವಸ ಆಗುತ್ತದೆ. ಯಾವ ಕೆಲಸ ಮಾಡಬೇಕಾದರೂ ಸರ್ಕಾರ ಡಿಪಾರ್ಟ್‌ಮೆಂಟ್ ಮೂಲಕ ಮಾಡಿಸಬೇಕು. ಹಳ್ಳಿಗಳಿಗೆ ಹೆಚ್ಚು ಹೆಚ್ಚು ಪವರ್ ಕೊಡಬೇಕು. ಈಗ ತಾಲ್ಲೂಕು ಬೋರ್ಡ್‌ನಲ್ಲಿ ಹಣ ಇಲ್ಲ. ಎನ್.ಇ.ಎಸ್. ಮತ್ತು ತಾಲ್ಲೂಕ್ ಬೋರ್ಡಿಗೆ ಕೊಟ್ಟಿರುವ ಸಿಬ್ಬಂದಿ ಜಾಸ್ತಿಯಾಗಿದೆ. ಅವರಿಗೆ ಕಂದಾಯ ವಸೂಲು ಮಾಡುವ ಕೆಲಸ ಕಡಿಮೆ ಇದೆ. ಹಿಂದಿನ ಕಾಲದಲ್ಲಿ ಮಾಡುವ ಕೆಲಸಕ್ಕಿಂತಲೂ ಕಡಿಮೆ ಇದೆ. ಇದನ್ನು ಪರಿಶೀಲನೆ ಮಾಡಬೇಕು. ಸಿಚ್ಚಂದಿ ಮಾತ್ರ ಮೂರರಷ್ಟು ಇದ್ದದ್ದು ನಾಲ್ಕರಷ್ಟಾಯಿತು. ಇದು ಏಕೆ ಎಂದು ನಾನು ಕೇಳುತ್ತೇನೆ ? ನನ್ನ ಮನಸ್ಸಿಗೆ ನೊಂದು ಕೇಳುತ್ತಿದ್ದೇನೆ. ಎಷ್ಟೋ ಸದಸ್ಯರು ಬಹಳ ಸಲಹೆಗಳನ್ನು ಕೊಡಬಲ್ಲರು. ಇದೆನ್ನೆರ್ನಾ ಅವರು ಬಹಳ ಆಳವಾಗಿ ಆಲೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ.

4-00 P.M.

ಇನ್ನು ಎಂಪ್ಲಾಯ್‌ಮೆಂಟ್ ವಿಚಾರ. ನಮ್ಮ ದೇಶದಲ್ಲಿ ಇಂದು ಬಡತನವು ತಾಂಡವವಾಡುತ್ತಿದೆ. ಸುಮ್ಮನೆ ಜನರಿಗೆ ಕೆಲಸದ ಅವಕಾಶವನ್ನು ಒಂದರಿಂದ ಎರಡರಷ್ಟು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವರ ರಾಜ್ಯಭಾರದಲ್ಲಿ ಬರೀ ಮಾತುಗಳನ್ನು ಹೇಳುತ್ತಾರೆಯೇ ಹೊರತು ಬೇರೇನೂ ಇಲ್ಲ. ಇವತ್ತಿನ ದಿವಸ ನೀವು ಮೆಜಾರಿಟಿ ಇದ್ದೀರಿ, ತಮಗೆ ಬೇಕಾದುವುಗಳನ್ನು ಮಾಡಿಕೊಂಡುಬಿಡುತ್ತೀರಿ. ಆದರೆ, ಅತ್ಯಕ್ಕೆ ಪಂಚನೆದೆ, ಪ್ರಾಮಾಣಿಕತನದಿಂದ ನೀವು ಏನನ್ನು ಬಡ

(ಶ್ರೀ ಎಂ. ದೇವ್)

ಜನರಿಗೋಸ್ಕರ ಅನುಕೂಲ ಮಾಡಿಕೊಟ್ಟಿದ್ದೀರಿ ? ನಿಮ್ಮ ಕೈಯಲ್ಲಿ ಸಾಧ್ಯವಾಗದೆ ಇದ್ದರೆ, ಪ್ರತಿಭಾವಂತರಿಗೆ, ಎದೆಗಾರಿಕೆ ಇದ್ದವರಿಗೆ ಬಿಟ್ಟು ಕೊಡಿ. ಈಗ ನಮ್ಮ ದೇಶದಲ್ಲಿ ಉದ್ಯೋಗ ಇಲ್ಲದೆ ಇಂಜಿನಿಯರ್ಸ್, ಡಾಕ್ಟರ್ಸ್ ಮೊದಲಾದವರು ಎಷ್ಟೋ ಜನರಿದ್ದಾರೆ. ನಮ್ಮ ದೇಶ ಮುಂದುವರಿಯಬೇಕಾದರೆ, ಇಂಥ ಒಂದು ಅನ್-ಎಂಪ್ಲಾಯ್‌ಮೆಂಟ್ ಎಂಬ ಪದವೇ ಇರಬಾರದು. ಆಗ ನಿಜವಾಗಿಯೂ ದೇಶ ಒಂದು ಮುನ್ನಡೆಯನ್ನು ಸಾಧಿಸಿದಂತಾಗುತ್ತದೆ

ಇನ್ನು ಕೋಆಪರೇಟಿವ್ ಇರಾಖೆಯ ವಿಚಾರ. ಇದರಲ್ಲಿ ಎಲ್ಲ ನೋಡಿದರೂ, ದುರ್‌ವ್ಯವಹಾರ ಜಾಸ್ತಿಯಾಗಿದೆ. ಒಂದೊಂದು ಸೊಸೈಟಿಯಲ್ಲಿ ಎಷ್ಟೋ ಹಣವನ್ನು ನುಂಗಿ ಹಾಕಿಬಿಟ್ಟಿದ್ದಾರೆ. ಇದಕ್ಕೆ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು, ಇಲ್ಲವೇ ಒಬ್ಬ ಸರ್ಕಾರಿ ಸೆಕ್ರೆಟರಿಯನ್ನು ಕೊಟ್ಟು ಬಿಡಿ. ಆಗ ಅವನನ್ನೇ ಜವಾಬ್ದಾರಿಯುತನನ್ನಾಗಿ ಮಾಡಬಹುದು. ಮತ್ತು ಇದಲ್ಲದೆ, ಅಲ್ಲ ಉಳಿದ ಹಣವು ಈ ಅಧಿಕಾರಿಗಳ ಸಂಬಳಕ್ಕಾಗಿ ಹೋಗುತ್ತದೆ. ಸಾಧಾರಣ ಮೂರನೆ ಒಂದು ಭಾಗವು ಸಂಬಳಕ್ಕೆ ಹೋಗುತ್ತದೆ. ಮತ್ತು ಅಲ್ಲಿ ಹಣ ಕೂಡ ಸರಿಯಾಗಿ ವಿತರಣೆಯಾಗುತ್ತಾ ಇಲ್ಲ. ಇದು ಹಾಗಾಗದೆ ಒಂದು ನ್ಯಾಯವಾದ ರೀತಿಯಲ್ಲಿ, ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಇದರಿಂದ ನಿಮಗೂ ಒಳ್ಳೆಯದಾಗುತ್ತದೆ, ಜನತೆಗೂ ಅನುಕೂಲವಾಗುತ್ತದೆ. ಇವತ್ತು ದೇಶದಲ್ಲಿ ಒಂದು ರೈತ ಜನಾಂಗಕ್ಕೆ ಅನುಕೂಲ ಮಾಡುವಂತೆ ಸರ್ಕಾರ ರಚನೆಯಾಗಬೇಕು. ಇಂದು ಅವನು ಅಭಿವೃದ್ಧಿಯಾದರೆ, ಇಡೀ ದೇಶವೇ ಅಭಿವೃದ್ಧಿಯಾಗುತ್ತದೆಂಬುದನ್ನು ಸರ್ಕಾರದವರು ಮನಗಂಡು, ಅಂಥ ಜನರಿಗೆ ಅನುಕೂಲವನ್ನು ಮಾಡಬೇಕು. ಆದರಿಂದ ನಮ್ಮ ದೇಶವೇ ಶೀಘ್ರವಾಗಿ ಮುಂದುವರಿಯುವುದಕ್ಕೆ ಅಡಿಗರ್ಲ್ಲಾಗುತ್ತದೆ. ಇವತ್ತಿನ ದಿವಸ ನಮ್ಮ ಸರ್ಕಾರದವರು ತೆರಿಗೆಯನ್ನೇ ಜಾಸ್ತಿಮಾಡುತ್ತಾರೆಯೇ ವಿನಾ ಯಾವ ಒಂದು ಜನತೆಯ ಸೌಕರ್ಯ ಸೌಲಭ್ಯವನ್ನೂ ಮನಗಾಣುತ್ತಾ ಇಲ್ಲ. ಪೋಟಾರ್ ಟ್ಯಾಕ್ಸ್, ಆ ಟ್ಯಾಕ್ಸ್ ಈ ಟ್ಯಾಕ್ಸ್ ಎಂದು ಹಲವಾರು ತರದ ಟ್ಯಾಕ್ಸನ್ನು ಹಾಕುತ್ತಿದ್ದಾರೆ. ಅದನ್ನೆಲ್ಲಾ ಕಡಿಮೆ ಮಾಡಿ ಅದಷ್ಟು ಮಟ್ಟಿಗೆ ಜನರಿಗೆ ಅನುಕೂಲ ಮಾಡುವ ದಾರಿಯನ್ನು ಸರ್ಕಾರ ನೋಡಬೇಕು. ಆಗ ಜನರ ಕಷ್ಟಗಳು ಏನಿವೆ, ಅವು ದೂರವಾಗಿ, ನಮ್ಮಿಂದಿಯ ರಾಜ್ಯವಾಗುವುದಕ್ಕೆ ದಾರಿಯಾಗುತ್ತದೆ. ಇಂದ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುವುದನ್ನು ತಡೆಗಟ್ಟಬೇಕು. ಬಡವರನ್ನು ಏ ಲಕ್ಷ್ಯ ತರುಷದನ್ನು ಸರ್ಕಾರ ಆಲೋಚನೆ ಮಾಡಬೇಕು. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳ ಮತ್ತು ಅಲ್ಲ ರೈತರಿಗೆ ಅನುಕೂಲವಾಗುವ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡು, ನಮ್ಮ ಈ ದೇಶದ ಒಂದು ಏಳಿಗೆ ಏನಿದೆ ಅದಕ್ಕೆ ಕಾರಣಭೂತರಾಗಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri M. SRINIVAS NAIK (Mangalore-I).—Mr. Speaker, Sir, we are just stepping into the Fourth Five Year Plan. Mysore has successfully implemented three Plans. While implementing the Plan, the M. L. A. of the district will have to be consulted as to what has been done in the respective area, because the tax we raise for the Fourth Plan is from the direct and indirect taxes from the people all over the State. So, everybody expects to get some benefit out of the Fourth Five Year Plan. I should say that the size of the Fourth Plan is so big that it is quite necessary that every person should get the benefit from the Plan.

Sir the Third Five Year Plan had focussed attention on the importance of agriculture. But we have not been very successful in meeting the dificit in food. This is the proper time to look back and see as to what were the forces that did not work well and why agricultural production did not come to our expectations. So, when we take up the Fourth Plan, we have to focus attention on four factors namely irrigation, power, fertiliser and improved seeds. We will have 977.3 mega watts of power in our own State. But whether we can guarantee electricity to every nook and cornor of the State should be considered. In South Kanara, sweet water is flowing down to the sea without being utilised by

the farmers. We are talking of the importance of agriculture, but we have not given the people of South Kanara the power that is necessary. They say that wire is not available, poles are not available to guarantee electricity to the farmers. In the Third Plan we have spent Rs. 20 crores for minor irrigation. I do not think South Kanara got the allotment that it ought to have got. In my district, there is no possibility of having any major projects; the only irrigation is minor irrigation. But so far, no apprecible money has been spent to husband the water resources in my district. If we have smaller bunds and if we arrest the flow of water to the sea we could give water required for stepping up agricultural production in South Kanara.

Then, Sir, fertilizer in appreciable quantity has not been given to the farmers of my district. Even the available fertilizer in Mysore State has not been equitably distributed on a planned basis. The formers of my district have not been able to get thier share of fertilizers.

Coming to improved seeds the Taichung variety evolved by the Syndicate has not yet been approved. It is said that gives a production of 5,000 to 6,000 lbs. per acre., but the local authority is silent about it and our farmers have not been able to experiment it.

A regards fisheries, in the Fourth Plan it was said that an allotment of Rs. 5½ crores should be made. Kerala State has allocated a very large sum of money for improving fisheries in Kerala. It was said that in the Third Plan we would improve our Malpe harbour into a fishing harbour. Government also said that they would improve Coondapur into a fishing harbour. Even though the Third Plan is coming to an end no action has been taken to implement this and no provision has been made even in the Fourth Plan for this. Fishery roads have not been completed and machanised boats have not been supplied to the fullest extent. The other requisities for improving fishing also have not been made availble. In the third plan actualy Rs. 5½ crores had been set apart for improvement of fisheries. This is very low and the provision has to be increased.

It is said that in the third plan under rural water supply scheme 60 schemes have been implemented. In South Kanara only one scheme has been included.

MR. SPEAKER.—It is not the fault of the Government.

SRI M. SRINIVAS NAYAK.—Out of 20 schemes sent to Government only one scheme has been implemented. The rate of progress has to be stepped up.

Coming to public health, the Central Government is going to allot 28 Medical Colleges for the whole country. Our Government should press that one such Medical College is given to Mysore State. Even though there is mention of ayurveda in the preliminary memorandum, there is no mention of homoeopathy which is also an equally efficacious medicine. It is necessary that Government should provide facilities for training homoeopathic medical men. I should suggest that after 5 years of allopathic

(SRI M. SRINIVAS NAIK)

training every doctor should have one year's homoeopathic training also so that in the rural parts they can take upto homoeopathic practice also.

Coming to P.W.D. in the third plan no appreciable work has been done in our district. Our district is surrounded by rivers and rivulets. Even though Rs. 14 crores are spent under the P.W.D., there are no bridges and culverts in the rural parts of our district. I request Government that at least in the Fourth Plan appreciable sums of money may be alloted for construction of bridges and culverts in the rural part.

Animal husbandry has not received any attention from Government. During the third plan a milk plant has been installed, but it is not working as yet. Building and equipment are ready. Milk is brought and distributed as raw milk and it is not being pasteurised.

As regards poultry and piggery, South Kanara is a place where this could be developed very much.

Coming to horticulture, the allocation is only Rs. 3.87 crores as against Rs. 34 crores for agriculture. Horticulture also must receive attention because fruits and vegetables are very vital which the people could supplement for cereals. So the allotment under horticulture should be raised.

Then the Government spent Rs. 26 crores under minor irrigation in the third plan. If we look back, what is the benefit that we have got from this. As far as I can see, we have not got any considerable benefit because all the works have not been taken up. They are in several stages and further some of the works that have been taken up are awaiting completion.

Coming to education, there is a mention of a provision of Rs. 50 lakhs for the Bangalore University, but there is no mention of a University for Malnad. That is very necessary for the improvement of education in this part of the State and so the Malnad should have a university of its own.

Then there is mention of 2 polytechnics for women out of which one has already been started. The other one should be located at a place where girls education is at the top and statistics reveal that the district of South Kanara is leading and so this new polytechnic for women should be located in South Kanara.

Coming to leprosy and T. B. the Government should bestow more attention on these. No provision has been made for physically handicapped and mentally handicapped people. In foreign countries greater attention is given for the physically and mentally handicapped people. It is necessary that Government should allot funds for these unfortunate people to get this relief for being rehabilitated.

Rupees fifty lakhs have been provided for tourism. It was also mentioned in the Third Plan that small cottages should be built for tourists. To attract tourists it was stated that they would provide all afcilities. The third plan has passed away, and the Government have

not taken appreciable pains to implement the idea. In the fourth plan Rs. 55 lakhs is provided for tourism. It is necessary that these bungalows and other facilities are provided in the fourth plan.

Small pox is a thing which has to be eradicated. Even though mass vaccination it resorted to there is no awakening in the people and they are not coming forward to get vaccinated. It should be made compulsory that every person who lives in the State should get vaccinated and then only it is possible to eradicate small pox. The Government should provide sheds for locating the smallpox cases in different towns. Otherwise the disease will spread. Isolation sheds should be built for smallpox cases in every district head quarter.

Every district should be provided with a general hostel for Harijans, Scheduled castes and tribes and for general students so that there will be an integrated feeling in the minds of students for taking up future responsibilities. In South Canara there is no general hostel though there is a proposal. I would request that this may also be considered when the fourth plan is finalised.

As far as local boards are concerned it is necessary that the Government provide proper share of revenues to the local bodies so that they may function effectively. If it is done at the lower level then alone the people in the village will be satisfied and can get the benefit of the fourth plan.

I thank you for the opportunity given to me.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ ಈಗ 4ನೇ ಪಂಚ ವಾರ್ಷಿಕ ಯೋಜನೆಯ ವಿಷಯವನ್ನು ಮಾತನಾಡಬೇಕಾದ ಸಂದರ್ಭ ಬಂದಿದೆ. ಇದು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಕಳುಹಿಸಿರುವ ಯೋಜನೆ. ಇದಕ್ಕೆ ಇಲ್ಲಿ ಮುಂಚಿತವಾಗಿ ಮಾತನಾಡಿದುದಕ್ಕೆ ಅವಕಾಶವನ್ನು ಕೊಟ್ಟು ಜನತಾ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಇದನ್ನು ಕಳುಹಿಸಿದ್ದರೆ ಬಹಳ ಉತ್ತಮವಾಗುತ್ತಿತ್ತು. ಇದನ್ನು ಮುಖ್ಯವಾಗಿ ಚರ್ಚಿಸಬೇಕಾದ ಸಂಧರ್ಭ ಸಾಕಷ್ಟು ಹಣವನ್ನು ಕೇಂದ್ರದಿಂದ ಒತ್ತಾಯಮಾಡಿ ಪಡೆಯಬೇಕೆಂಬ ಉದ್ದೇಶ ವೆಂದು ಕಾಣುತ್ತದೆ. ಈಗ ಇವರು ಹಾಕಿರತಕ್ಕಂಥ ಯೋಜನೆ ಯಶಸ್ವಿಯಾಗಬೇಕೆಂದು ಇರತಕ್ಕ ಲೋಪದೋಷಗಳನ್ನು ಇಲ್ಲಿ ಚರ್ಚೆಮಾಡಬೇಕೆಂಬುದಾಗಿ ತಂದಿರುವುದನ್ನು ನೋಡಿದರೆ ಇದರಲ್ಲಿ ಏನು ಕಾಣುತ್ತದೆಂದರೆ, ರೈಲು ಹೋದ ಮೇಲೆ ಸಿಗ್‌ನರ್ ಕೊಟ್ಟಹಾಗೆ ಇದೆ; ರೈಲು ಹೋಗಿದೆ, ಈಗ ಸಿಗ್‌ನರ್ ಕೊಡುತ್ತಿದ್ದಾರೆಂದು ಹೇಳುವ ರೀತಿ ಇವರು ಮಾಡುತ್ತಿದ್ದಾರೆ. ಹೀಗೆ ಮಾಡಬಾರದು. ಸಾಮಾನ್ಯವಾಗಿ- ನಾವು- ಗ್ರಾಮಾಂತರ ಪ್ರದೇಶಗಳಿಂದ ಪ್ರತಿನಿಧಿಸಿ ಬಂದಿದ್ದೇವೆ. ಇವರು ಮಾಡಿರತಕ್ಕ ಮೂರು ಯೋಜನೆಗಳಲ್ಲಿಯೂ ಸರ್ಕಾರದವರು ಸಾಧಿಸಿರುವ ಕಾರ್ಯ ಪ್ರಗತಿ ಜನಗಳಿಗೆ ಮುಟ್ಟದೇ ಇರುವುದರಿಂದ ಪ್ರತಿನಿಧಿಗಳ ಹಾಗೂ ಜನತಾ ಅಭಿಪ್ರಾಯವನ್ನು ಮೊದಲೇ ಈ ನಭೆಯುವರಿಂದ ಸರ್ಕಾರ ತೆಗೆದುಕೊಳ್ಳಬೇಕಾಗಿತ್ತು. ಆದ್ದರಿಂದ ಇವರ ಯೋಜನೆ ಯಶಸ್ವಿಯಾಗುವುದಕ್ಕೆ ಅದೂ ಒಂದು ಕಾರಣವಾಗಿದೆ. ಮಹಾತ್ಮ ಗಾಂಧಿಯವರು ಹಳ್ಳಿಯಿಂದ ಡೆಲ್ಲಿಗೆ ಎಂಬುದಾಗಿ ಸಾರಿಸಾರಿ ಹೇಳುತ್ತಿದ್ದರು. ಈಗ ಹಾಗೆ ಇಲ್ಲ. ಈಗ ಆ ಮಾತು ವ್ಯತಿರಿಕ್ತವಾಗಿ ಡೆಲ್ಲಿಯಿಂದ ಹಳ್ಳಿಗೆ ಎಂದು ಹೇಳುವಹಾಗೆ ಆಗಿದೆ. ಆ ರೀತಿ ಬರುತ್ತಿದೆ. ನಮಗೆ ಏನ್: ಇ. ಎಸ್. ಬೇಡವೆಂದು ಹೇಳಿದರೆ ಅದು ಸೆಂಟ್ರಲ್ ಸ್ಪಾಂನ್‌ಸರಡ್ ಸ್ಕೀಮು, ಅದನ್ನು ಬಲವಂತವಾಗಿ ಮಾಡುತ್ತೇವೆ; ಜನಗಳ ಅಭಿವೃದ್ಧಿಗೋಸ್ಕರ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಅದರಿಂದ ಜನಗಳಿಗೇನಾದರೂ ಪ್ರಯೋಜನವಾಗಿದೆಯೇ ಎಂದು ನಾನು ಕೇಳುತ್ತೇನೆ. ಅಲ್ಲಿ ಒಬ್ಬ ಇಂಡಸ್ಟ್ರಿಯರ್ ಎಕ್ಸ್‌ಟೆನ್‌ಷನ್ ಆಫೀಸರ್ ಎಂದು ಇರುತ್ತಾನೆ, ಅವನಿಗೇನೂ ಗೊತ್ತಿರುವುದಿಲ್ಲ. ಎಸ್. ಎಸ್. ಎಲ್. ಸಿ. ಅಥವಾ ಬಿ.ಎ. ಫೇಲ್ ಆಗಿರುತ್ತಾನೆ. ಆದರೂ ಎಂ. ಎಲ್. ಎ ಅಥವಾ ಮಂತ್ರಿಗಳ ಒಂದು ಶಿಫಾರಸಿನಿಂದ ಅವನಿಗೆ ಆ ಕೆಲಸ ಕೊಡುತ್ತಾರೆನ್ನೋಣ; ಅವನಲ್ಲಿ ಏನಾದರೂ ಕೇಳುವುದಕ್ಕೆ ಹೋದರೆ, ಸಾಹೇಬರು ಬರಲಿ, ಅವರನ್ನು ಕೇಳಿ ಹೇಳುತ್ತೇನೆ ಎಂದು ಹೇಳುತ್ತಾನೆ;

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ತಿಪಟೂರಿನಲ್ಲಿ ಹೆಚ್ಚಿಗೆ ತೆಂಗಿನ ಚಿಪ್ಪು ಸಿಗುತ್ತದೆ. ಅದರ ಬಗ್ಗೆ ಏನಾದರೂ ಕಾರ್ಖಾನೆಯನ್ನು ಮಾಡಬಹುದು. ತಾಲ್ಲೂಕುಬೋರ್ಡ್ ಎಸ್ಟಿಮೆಂಟಿನಲ್ಲಿ ಈ ವಿಚಾರಮಾಡಿದೆ. ಮಂತ್ರಿಗಳಲಯೂ ಈ ವಿಚಾರಮಾಡಬೇಕೆಂಬ ಆಶೆ ಇದೆ. ಅದನ್ನು ಮೂವ್ ಮಾಡುವುದಕ್ಕೆ ತುಂಬಾ ತೊಂದರೆ ಯಾಗಿದೆ ಅಲ್ಲಿ ಅಗ್ರಿಕರ್‌ಚರರ್ ,ಎಕ್ಸ್‌ಟೆನ್‌ಷನ್ ಆಫೀಸರ್ ಎಂದು ಒಬ್ಬರು ಇರುತ್ತಾರೆ. ಅವರ ಕೆಳಗೆ ಒಬ್ಬ ವಿಲೇಜ್ ರೆವರ್ ವರ್ಕರ್ ಎಂದು ಇರುತ್ತಾರೆ. ಪ್ರತಿವರ್ಷವು ಪೂರ್ತಿಯಾಗಿ ರೆವರ್ ವರ್ಕರ್ಸ್ ಹಳ್ಳಿಗಳಲ್ಲಿ ಏನು ರೆವರ್ ಮಾಡಿದರೂ ಕೆಲಸಗಳಂತೂ ಹೆಚ್ಚಾಗಿದೆಯೇ ವಿನಹ ಯಾವ ಕೆಲಸವು ಪೂರ್ಣವಾಗಿಲ್ಲ, ಯಶಸ್ವಿಯಾಗಿಲ್ಲ. ಹಣ ಏನೇನೂ ಉಳಿದಿಲ್ಲ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೆ ಕೊಟ್ಟಂಥ ದುಡ್ಡನ್ನು ಸಂಬಳಕ್ಕೆ ಮತ್ತು ಜೀಪು ಪೆಟ್ರೋಲ್‌ಗೆ ಖರ್ಚುಮಾಡುತ್ತಿದ್ದಾರೆ. ಇದರಿಂದಾಗಿ ಸಾಮಾನ್ಯ ಮನುಷ್ಯನಿಗೇನೂ ತಲುಪಿಲ್ಲ. ಇದು ತುಂಬಾ ಶೋಚನೀಯವಾದ ವಿಷಯವಾಗಿದೆಂಬುದಾಗಿ ಕೇಂದ್ರ ಸರ್ಕಾರ ದವರೇ ಹೇಳಿದ್ದಾರೆ. ಆದ್ದರಿಂದ ಇನ್ನುಮುಂದೆ ಆ ರೀತಿ ಮಾಡುವುದನ್ನು ಬಿಟ್ಟು ನಮ್ಮ ಸಂಸ್ಥಾನಕ್ಕೆ ಏನೇನು ಅನುಕೂಲಗಳು ಬೇಕೋ ಅದನ್ನು ಮಾಡಬೇಕು. ಅದಕ್ಕೋಸ್ಕರವೇ ಇವರು ಅವರನ್ನು ಹಣ ಕೊಡಿ ಎಂದು ಹೇಳಿದರೆ ಅಥವಾ ಕೇಳಿದರೆ ಈಗ ಕೇಂದ್ರ ಸರ್ಕಾರದವರು ಹಿಂದುಮುಂದೆ ನೋಡುತ್ತಿದ್ದಾರೆ. ಆದ್ದರಿಂದ ಇವರ ಯೋಜನೆಗಳು ಸರಿಯಾಗಿಲ್ಲವೆಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದವರು ಸುಮಾರು 18 ವರ್ಷಗಳಿಂದ ಪಾನನಿರೋಧದಿಂದ ಎಷ್ಟು ಹಣ ಲುಕ್ಸಾನು ಆಗಿದೆ ಮತ್ತು ಜನರ ನೈತಿಕಮಟ್ಟ ಉತ್ತಮವಾಗಿದೆಯೇ ಎಂದು ಕೇಳುವು ದಾದರೆ ಸುಮಾರು ಒಂದೂವರೆಯಷ್ಟು ಫೈಂಡ್ ಪಾಲಿಷ್ ಹೆಸರಿನಲ್ಲಿ ಮಾಡಿದ್ದು ಏನಾಯಿತು, ಲಕ್ಕರ್ ಸೇರಿಸಿ ಅದನ್ನು ಮಾರಬೇಕೆಂದು ಹೋಗಿದ್ದಾರೆ. ಎರಡು ಮೂರು ಸಾವಿರ ರೂಪಾಯಿ ಗಳಷ್ಟು ಇದನ್ನು ಇಲ್ಲಿನವರೇ ಮಾರುವುದಾದರೆ ಇವರ ಯೋಜನೆ ಏನು ಯಶಸ್ವಿಯಾಗಿದೆ ? ಹೆಸರಿಗೆ ಮಾತ್ರ ಯೋಜನೆ ಯಶಸ್ವಿಯಾಗಿದೆ ಎಂದು ಹೇಳುತ್ತಾರೆ. ಜನರು ಈಗ ಯಾರು ಕುಡಿಯುವುದಿಲ್ಲ, ಅವರ ಆರೋಗ್ಯ ಬಹಳ ಉತ್ತಮವಾಗಿದೆ ಎಂಬುದಾಗಿ ಹೇಳಿದರೆ ಬಹಳ ಸಂತೋಷಪಡೋಣ. ಅದನ್ನು ಬಿಟ್ಟು ಇವರು ಏನೇನೊ ಹೇಳುವುದಕ್ಕೆ ಹೋಗಿದ್ದಾರೆ. ದೇಶದ ಜನತೆಯ ಪ್ರತಿನಿಧಿಗಳಾದ ನಾವು ಇಲ್ಲಿ ಹೇಳುವುದಕ್ಕೆ ಇವರು ಏನು ಬೆಲೆ ಕೊಟ್ಟಿದ್ದಾರೆಂದು ನಾನು ಪ್ರಶ್ನೆಮಾಡುತ್ತೇನೆ. ನಾವೇನಾದರೂ ಪ್ರಶ್ನೆಗಳನ್ನು ಕಳುಹಿಸುತ್ತೇವೆನ್ನೋಣ. ಅವರು ಕೊಡತಕ್ಕ ಉತ್ತರದ ಬಗ್ಗೆ ಏನಾದರೂ ರೋಪದೋಷಗಳೆವೆಯೆಂದು ಹೇಳಿದರೆ ಅವುಗಳ ಮೇರೆ ಏನು ಪರಿಹಾರಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ಕೇಳುತ್ತೇನೆ. ಸಾಮಾನ್ಯವಾಗಿ ಪುಡ್ ಇಂಡಸ್ಟ್ರೀಸಿಗೋಸ್ಕರ ಚಿಕ್ಕಮಗಳೂರು ಹಾಸನ, ಶಿವಮೊಗ್ಗಾ—ಮುಂತಾದ ಕಡೆಗಳಲ್ಲಿ ವರವನ್ನು ಕೊಡುತ್ತಾರೆ. ಈಗ ಅದನ್ನು ಒಂದೂವರೆಯಷ್ಟು ಜಾಸ್ತಿ ಬೆರೆಗೆ ಬೇರೆಯವರಿಗೆ ಮಾರುತ್ತಾರೆ. ಆದರೆ ಬೊಂಬು ಗಳಿಗೆ ಹೆಚ್ಚಿಗೆ ಬೆರೆ ಇಲ್ಲದೇ ಇರುವುದರಿಂದ ದಂಡೇಲಿಗೆ ಕೊಟ್ಟಿದ್ದಾರೆ. ಸರ್ಕಾರದವರು ಆ ರೀತಿ ಮಾಡುವುದು ಸರಿಯಲ್ಲ. ಇವತ್ತು ಒಂದು ಪ್ರಶ್ನೆಯನ್ನು ಕೇಳಿದೆ. ಶಾನನ ಸಭಾಸದಸ್ಯರು ಮಾತನಾಡುವಾಗ ಈ ಸಭೆಯಲ್ಲ ಸತ್ಯಕ್ಕೆ ದೂರವಾದ ಉತ್ತರ ಸರ್ಕಾರದಿಂದ ಬಂದರೆ ನಾವೇನು ಮಾಡುವುದಕ್ಕಾಗುತ್ತದೆ ! ಸುಮ್ಮನೆ ಅದಕ್ಕೆ ದುಡ್ಡು ಕೊಡುತ್ತೇವೆ, ಇಲ್ಲವೇ ಸ್ಟಾಕ್ ಮಾಡಿ ದ್ದೇವೆಂದು ಉತ್ತರಗಳನ್ನು ಹೇಳಿಬಿಡುತ್ತಾರೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ರಸ್ತೆ ಗಳಿಗೆ ಬೇಕಾದಷ್ಟು ಹಣವನ್ನು ಇವರು ತೆಗೆದುಕೊಂಡಿದ್ದಾರೆ, ಬೇಕಾದಷ್ಟು ಆಶ್ವಾಸನೆಗಳನ್ನೂ ನಹ ಕೊಟ್ಟಿದ್ದಾರೆ, ರಸ್ತೆಗಳಿಗೆ ಹೆಚ್ಚಿಗೆ ಹಣವನ್ನು ಖರ್ಚುಮಾಡುವುದಕ್ಕೆ ಅಧಿಕಾರಿಗಳಿಗೆ ಅಧಿಕಾರ ವನ್ನೂ ನಹ ಕೊಟ್ಟಿದ್ದಾರೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಬೇಕಾದಷ್ಟು ರಸ್ತೆಗಳನ್ನು ಮಾಡಿದ್ದಾರೆ. ಇವತ್ತು ಆ ರಸ್ತೆಗಳು ಯಾವ ಒಂದು ಮಟ್ಟದಲ್ಲವೆಯೆಂಬುದನ್ನು ನೋಡಬೇಕು. ಈಗಾಗಲೇ ರಸ್ತೆಗಳು ಸುಳಿ ಬಿದ್ದು ರಸ್ತೆಗಳೇ ಕೆಟ್ಟುಹೋಗಿವೆ. ಇದಕ್ಕಾಗಿ ಸರ್ಕಾರದವರು ಎಷ್ಟೋ ಹಣವನ್ನು ಖರ್ಚುಮಾಡಿದ್ದಾರೆ. ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಖರ್ಚುಮಾಡುತ್ತಿದ್ದಾರೆ. ಇನ್ನೊಂದು ಕಡೆ 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, 36 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳುತ್ತಾರೆ. ಖರ್ಚು ಮಾಡಿರುವುದೇನೋ ನಿಜ. ನಮಗೆ ಉಳಿದಿದ್ದು ಏನು ? ಏನೂ ಇಲ್ಲ. ಇಂತಹ ಯೋಜನೆಗಳನ್ನು ಮಾಡುವುದರಿಂದ ಪ್ರಯೋಜನವೇನು ? ಒಂದು ಪಕ್ಷ ಈ ವರ್ಷ ರೂರರ್ ಕಮ್ಯೂನಿಕೇಷನ್ ಬಾಬಿಗೆ 2ನೇ ಮತ್ತು 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ಕೊಟ್ಟ ಹಣವನ್ನು ಪೂರ್ತಿ ಖರ್ಚು ಮಾಡಬೇಕೆಂದು ಹೇಳಿದರು. ಇವರ ಎಸ್ಟಿಮೇಟ್ ಪ್ರಕಾರ ನಮ್ಮಲ್ಲಿ ಒಂದು ಫರ್ಲಾಂಗ್ ರಸ್ತೆ ಏನಾದರೂ ಉಳಿದಿದೆಯೇ ! ಇವರು ಈಗ 10 ಮೈಲಿ, 5 ಮೈಲಿ, ಅಥವಾ 3 ಮೈಲಿ ರಸ್ತೆ ಲೆಲನ ಮಾಡಲಿ. ಆ ಕಾರ್ಯ ಏನಾದರೂ ತಾತ್ಪರ್ಯವಾಗಿ ಉಳಿದಿದೆಯೇ !

ಇನ್ನು ಆಹಾರದ ಸಮಸ್ಯೆಯ ಎಷ್ಟಾರವನ್ನು ಹೇಳುವುದಾದರೆ, ಸರ್ಕಾರದವರು ಒಂದು ಸರ್'ಕ್ಯುಲರ್' ಹೊರಡಿಸಿ ಬಾವಿಗಳಿಗೆ ಧುಡ್ಡು ಕೊಡುವುದಕ್ಕೆ, ಪಂಪುಸೆಟ್ಟುಗಳನ್ನು ಕೊಡುವುದಕ್ಕೆ ಬಹಳ ಸುಲಭ ಮಾಡಿದ್ದೇವೆ, ಎಲ್ಲರೂ ಪಡೆದುಕೊಳ್ಳಬಹುದು ಎಂದು ಹೇಳುತ್ತಾರೆ. ಆದರೆ ರೈತ ಬಾವಿ ತೆಗೆಯುವುದಕ್ಕೆ ಸಾಲವನ್ನು ತೆಗೆದುಕೊಳ್ಳಲು ಸರ್ಕಾರದ ಕಛೇರಿಯ ಹತ್ತಿರ ಹೋದರೆ ರೈತರಿಗೆ ಒಂದು ಸಾರಿ ದುಡ್ಡನ್ನು ಕೊಡುವುದಿಲ್ಲ. ಅವರು ಬಾವಿ ತೆಗೆಯುವುದಕ್ಕೆ ಸಾಲ ಕೊಡತಕ್ಕ 5 ಸಾವಿರ ರೂಪಾಯಿಗಳನ್ನು 3 ಕಂತು ಅಥವಾ 4 ಕಂತುಗಳಲ್ಲಿ ಕೊಡುತ್ತಾರೆ. ಪ್ರತಿಯೊಂದು ಸಾರಿಯೂ ಅದಕ್ಕೆ ಸಂಬಂಧಪಟ್ಟ ನೌಕರರುಗಳಿಗೆ 50 ರೂಪಾಯಿ, 25 ರೂಪಾಯಿ ಹೀಗೆ ಲಂಚವನ್ನು ಕೊಡಲೇಬೇಕು.

4-30 P.M.

ಈಗ ಸರ್ಕಾರದವರು ಜನಗಳಿಗೆ ಆಹಾರವನ್ನು ಹಂಚುವುದಕ್ಕಾಗಿ ಆಹಾರವನ್ನು ಸೊಸೈಟಿಗಳಿಗೆ ಕೊಡುತ್ತಾರೆ. ಆದರೆ ಅದರಲ್ಲಿ ಜನಗಳಿಗೆ ಎಷ್ಟೆಷ್ಟು ಹೋಗುತ್ತದೆಯೋ ಗೊತ್ತಿಲ್ಲ. ಕಾಗದ ಮೇಲೇನೋ ಇಂತಿಂಥವರಿಗೆ ಇಷ್ಟಿಷ್ಟು ಕೊಡಬೇಕೆಂದು ಬರೆದಿರುತ್ತದೆ. ಆದರೆ ಅದು ಸಂಬಂಧಪಟ್ಟವರಿಗೆ ತಲುಪುತ್ತದೆಯೋ ಇಲ್ಲವೋ ಗೊತ್ತಿಲ್ಲ. ಜನಗಳಿಗೆ ಮೊದಲು ತಮ್ಮ ಹೊಟ್ಟೆಯನ್ನು ತುಂಬಿಸಿಕೊಂಡು ಆಮೇಲೆ ಇನ್ನೊಬ್ಬರ ಹೊಟ್ಟೆಯನ್ನು ತುಂಬಿಸಬೇಕೆಂಬ ಮನೋಭಾವನೆ ಇರುತ್ತದೆ. ಆದ್ದರಿಂದ ಸೊಸೈಟಿಗಳಿಗೆ ಕೊಟ್ಟಂತಹ ಆಹಾರವನ್ನು ಅಲ್ಲಿರತಕ್ಕ ಕ್ಲಾರ್ಕ್‌ಗಳು ಮತ್ತು ಇತರ ಸಿಬ್ಬಂದಿವರ್ಗದವರು ಹಂಚಿಕೊಳ್ಳುತ್ತಾರೆ. ಈ ರೀತಿ ಆದರೆ ಸರ್ಕಾರದ ಯೋಜನೆಗಳು ಯಾವ ರೀತಿ ಯಶಸ್ವಿಯಾಗುತ್ತವೆ ?

ಆಮೇಲೆ ಶರಾವತಿ ಪ್ರಾಜೆಕ್ಟ್ ಕೆಲಸ ಮುಗಿದಮೇಲೆ ನಮಗೆ ಹೆಚ್ಚಿನ ವಿದ್ಯುಚ್ಛಕ್ತಿ ಬರುತ್ತದೆ ಎಂದು ಹೇಳಿದ್ದರು. ಅದರಂತೆ ವಿದ್ಯುಚ್ಛಕ್ತಿಯೇನೋ ಬಂತು. ಆದರೆ ಅದನ್ನು ಅಂಧ್ರ ಮತ್ತು ಮದ್ರಾಸು ರಾಜ್ಯಗಳಿಗೆ ಕೊಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಬಾವಿಗಳನ್ನು ತೆಗೆದಿದ್ದಾರೆ. ಆ ಬಾವಿಗಳಿಗೆ ವಿದ್ಯುಚ್ಛಕ್ತಿ ಲೈನುಗಳನ್ನು ಹಾಕಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ವ್ಯವಸಾಯವನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಮೆಟೀರಿಯಲ್ಸ್ ಇಲ್ಲ, ಕಂಬ ಇಲ್ಲ, ಎಂದು ಹೇಳುತ್ತಾರೆ. ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಗೆ ಮಾರುವುದರಿಂದ ನಮಗೆ ಹಣ ಬರುತ್ತದೆ. ಆ ಹಣವನ್ನು ನಮ್ಮ ಸರ್ಕಾರದವರು ಯಾವುದಕ್ಕೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಆದರೆ ನಮ್ಮ ರಾಜ್ಯದಲ್ಲಿಯೂ ಕೂಡ ವಿದ್ಯುಚ್ಛಕ್ತಿಯ ಅವಶ್ಯಕತೆ ಯಾರು ಯಾರಿಗೆ ಇದೆ ಅವರೆಲ್ಲರಿಗೂ ಕೂಡ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕು.

ಇನ್ನು ಸರ್ಕಾರದವರು ಪ್ರತಿಯೊಂದು ಯೋಜನೆಗೂ ಕೂಡ ಒಂದು ಲಕ್ಷ, ಎರಡು ಲಕ್ಷ, ಮೂರು ಲಕ್ಷ, ಮೂರುವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆದರೆ ಅವರು ಹಾಕಿರತಕ್ಕ ಹಣ ವಾಪಸ್ಸು ಬರುವುದಿಲ್ಲ. ಸ್ವಾಮಿ, ಸರ್ಕಾರದಲ್ಲಿ ಎಷ್ಟರಮಟ್ಟಿಗೆ ಕೆಲಸಕಾರ್ಯಗಳು ನಡೆಯುತ್ತವೆ ಎನ್ನುವ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ನಿಟ್ಟೂರು ಹತ್ತಿರ ರೋಡಿನಲ್ಲಿ ಒಂದು ಸೇತುವೆ ಆಗಬೇಕೆಂದು ಶ್ರೀಮಾನ್ ಕೆ. ಎಸ್. ಚನ್ನಪ್ಪನವರು ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದಾಗಿನಿಂದಲೂ ಶ್ರೀಮಾನ್ ಹುಚ್ಚೇಗೌಡರು ಪ್ರೆಸಿಡೆಂಟರಾಗಿದ್ದಾಗಿನಿಂದಲೂ ಹೇಳುತ್ತಿದ್ದೇವೆ; ಆದರೆ ಇವೊತ್ತಿನವರೆಗೂ ಆ ಸೇತುವೆಯನ್ನು ಕಟ್ಟಿಸಿಕೊಟ್ಟಿಲ್ಲ. ಈ ರೀತಿ ಆದರೆ ಯೋಜನೆಗಳು ಯಶಸ್ವಿ ಆಗಬೇಕೆಂದರೆ ಯಾವ ರೀತಿ ಯಶಸ್ವಿಯಾಗುತ್ತವೆ ?

ಆಮೇಲೆ ಸರ್ಕಾರದವರು ಮಾಡಿಸಿರತಕ್ಕ ಡೈರಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಿ; ಅದಕ್ಕೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಅಲ್ಲಿರತಕ್ಕ ಅಧಿಕಾರಿಗಳಿಗೆ 800-1,000 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದಾರೆ. ಆದರೆ ಸರ್ಕಾರದವರಿಗೆ ಆ ಡೈರಿ ಪ್ರಾಜೆಕ್ಟ್‌ಗೆ ಖರ್ಚು ಮಾಡಿರತಕ್ಕ ಹಣಕ್ಕೆ ಸರಿಯಾಗಿ ಅಲ್ಲ ಮಾರುವ ಹಾಲಿನಿಂದ ದುಡ್ಡು ಸಿಗುವುದಿಲ್ಲ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ಮಂತ್ರಿಗಳ ಮನೆಗಳಿಗೆ ಆ ಡೈರಿಯಿಂದ ಹಾಲು ಸಿಕ್ಕುತ್ತದೆಯೇ ಏನಾ ಬಡವರಿಗೆ ಆ ಡೈರಿಯಿಂದ ಹಾಲು ಸಿಕ್ಕುವುದಿಲ್ಲ. ಈಗ 18 ವರ್ಷಗಳಿಂದಲೂ ನಮ್ಮ ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತರುವ ಸಂಬಂಧದಲ್ಲಿ ನಮ್ಮ ಸರ್ಕಾರಕ್ಕೆ 180 ಕೋಟಿ ರೂಪಾಯಿಗಳು ಲುಕ್ಸಾನು ಆಗಿದೆ ಎಂದು ಹೇಳಬಹುದು. ಆದರೆ ಈಗ ಅದರಿಂದ ಆಗಿರತಕ್ಕ ಫಲತಾಂಶ ಏನು ? ಹೀಗೆ ಸರ್ಕಾರದವರು ಯಾವ ಒಂದು ಬಾಬಿಗೆ ಹಣವನ್ನು ಇನ್‌ವೆಸ್ಟ್ ಮಾಡಿದರೂ ಕೂಡ ಅದಕ್ಕೆ ಸರಿಯಾದಂತಹ ಪ್ರತಿಫಲ ಸಿಕ್ಕುತ್ತಿಲ್ಲ.

(ಶ್ರೀ ಕೆ. ಎ. ಥೇವರ್ ನಸಿದ್ದಪ್ಪ)

ಇನ್ನು ಮಿನರಲ್ ಡೆವಲಪ್‌ಮೆಂಟ್ ಏರಿಯ ಅದನ್ನು ಸರ್ಕಾರದವರೇ ನದುದ್ದೇಶದಿಂದ ಮಾಡಿದರೆ ತದು ಉತ್ತಮವಾಗಿ ಆಗಬಹುದು. ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಯಾವ ಯಾವ ಕಚ್ಚಾ ಪದಾರ್ಥಗಳು ಸಿಕ್ಕುತ್ತವೆಯೋ ಅವುಗಳನ್ನು ಉಪಯೋಗಿಸಿಕೊಂಡು ಆಯಾ ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಅಲ್ಲಿಯ ಜನಗಳಿಗೆ ಕೆಲಸ ಸಿಕ್ಕುವಂತೆ ಮಾಡಬೇಕು. ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಾಗ ಅದನ್ನು ಯಾವುದೋ ಒಂದು ಮಂಡಲಿಗೆ ವಹಿಸಿದರೆ ಅವರು ಅದನ್ನು ಸರಿಯಾದ ರೀತಿಯಲ್ಲಿ ಮಾಡುವುದಿಲ್ಲ. ಆಗ ಇಂಥಾ ಕಡೆ ಕೈಗಾರಿಕೆ ವಿಫಲ ಆಯಿತು ಎಂದು ಮೈನೂರಿನ ಚರಿತ್ರೆಯಲ್ಲಿ ಬರೆಯುತ್ತಾರೆ. ಈಗ ನಮ್ಮಲ್ಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಾಗ ಜಪಾನು ಮತ್ತು ಜರ್ಮನಿ ಮುಂತಾದ ಪಾಶ್ಚಾತ್ಯ ದೇಶಗಳ ಕೊಲ್ಯಾಬರೇಷನ್ ಮಾಡಿಕೊಂಡು ಹಣ ತೆಗೆದುಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಆ ದೇಶಗಳೊಡನೆ ಕೊಲ್ಯಾಬರೇಷನ್ ಮಾಡಿಕೊಂಡರೆ ಪ್ರಯೋಜನವಾಗುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನು ಜನತೆಯ ಪ್ರತಿನಿಧಿಗಳಾದ ನಮ್ಮನ್ನು ಕೇಳಿ ನಮ್ಮ ಸಲಹೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಆ ರೀತಿ ನಮ್ಮ ಸಲಹೆಯನ್ನು ಆ ಬಗ್ಗೆ ತೆಗೆದುಕೊಳ್ಳದೇ ಇರುವುದು ಸರ್ಕಾರದ ತಪ್ಪು ಎಂದು ನಾನು ಹೇಳುತ್ತೇನೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಯ ಅಭಿವೃದ್ಧಿಗಾಗಿ ಎಷ್ಟು ಪ್ರೋತ್ಸಾಹವನ್ನು ಕೊಡಬೇಕಾಗಿತ್ತೋ ಅಷ್ಟು ಪ್ರೋತ್ಸಾಹವನ್ನು ಕೊಟ್ಟಿಲ್ಲ. ಅಫೇರೆ ಹಾಗೆಯೇ ವ್ಯವಸಾಯಗಾರರಿಗೆ ಏನೇನು ತೊಂದರೆ ಇದೆ ಎಂಬುದನ್ನು ನೋಡಿ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವ ಕಡೆಗೆ ಗಮನ ಕೊಡಬೇಕು. ಈಗ ಸರ್ಕಾರದವರು ರೈತರಿಂದ ಬತ್ತವನ್ನು ಕೊಂಡು ಜನಗಳಿಗೆ ಅಕ್ಕಿಯನ್ನು ಒದಗಿಸಬೇಕಾದರೆ ಒಂದು ಮೂಟೆಗೆ ಸುಮಾರು 21 ರೂಪಾಯಿಗಳು ಖರ್ಚು ಬರುತ್ತದೆ. ಇದರಿಂದ ರೈತನಿಗೂ ಪ್ರಯೋಜನವಿಲ್ಲ. ಸುಮ್ಮನೆ ಮಧ್ಯವರ್ತಿ ಜನಗಳಿಗೆ ತಿನ್ನುವುದಕ್ಕೆ ಅವಕಾಶವಾಗುತ್ತಿದೆ. ಈ ವಿಚಾರವನ್ನು ಸರ್ಕಾರದವರು ಸ್ವಲ್ಪ ಗಮನಿಸಬೇಕು. ಮತ್ತು ರೈತನಿಗೆ ವ್ಯವಸಾಯ ಮಾಡುವುದಕ್ಕೆ ಏನೇನು ಸೌಲಭ್ಯಗಳು ಬೇಕೋ ಅವುಗಳನ್ನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಟ್ರ್ಯಾಕ್ಟರುಗಳು, ಬುಲ್ಡೋಜರುಗಳು ರೈತರಿಗೆ ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡುವುದಾದರೆ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಜನತಾ ಪ್ರತಿನಿಧಿಗಳನೇಕರು ಅನೇಕ ವಿಚಾರಗಳಬಗ್ಗೆ ವಿಧಾನಸೌಧದ ಬಳಿ ಉಪವಾಸ ಮಾಡಿದರು. ನಾವು ಸಹ ಒಂದು ದಿನ ಮಾಡಿದೆವು. ನೆನ್ನೆದಿನ ಯಾರೋ ಒಬ್ಬರು ನೇರವಾಗಿ ತಮ್ಮ ಕಷ್ಟವನ್ನು ಹೇಳಿಕೊಳ್ಳಲು ಅನಂಬ್ಲಿಯೊಳಗೆ ಬಂದಿದ್ದರು ಈಗಾಗಲೆ ಬಂಗಾಳದಲ್ಲಿ ಕ್ರಾಂತಿ ನಡೆದಿದೆ. ಮೈನೂರು ದೇಶದಲ್ಲೂ ಆಗುವುದಕ್ಕೆ ಅವಕಾಶ ಕೊಡಬೇಡಿ. ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಸರಿಯಾದ ರೀತಿಯಲ್ಲಿ ನಮ್ಮ ಪಾಲಿನ ಹಣವನ್ನು ಕೊಡದೆ ಹೋದರೆ ಈ ಮನೆಯ ನವಸ್ಯರೆಲ್ಲಾ ರಾಜೀನಾಮೆ ಕೊಡೋಣ. ಮಂತ್ರಿಗಳೆಲ್ಲ ನಮ್ಮ ಹಾಗೆ ದೆಹಲಿಗೆ ಹೋಗಿ ಉಪವಾಸ ಮಾಡಿ, ನಮಗೆ ಬರಬೇಕಾದ ಹಣವನ್ನು ವಸೂಲು ಮಾಡಿಕೊಂಡು ಬನ್ನಿ. ದೇಶದ ಪ್ರಗತಿಯನ್ನು ಕುಂಠಿತ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಕ್ರಾಂತಿಯಾಗುವುದಕ್ಕೆ ಅವಕಾಶ ಕೊಡಬೇಡಿ. ಕೇಂದ್ರ ಸರ್ಕಾರದವರ ಮುಂದೆ ಸಾಕಷ್ಟು ಒತ್ತಾಯ ತಂದು ನಮ್ಮ ದೇಶಕ್ಕೆ ಸಲ್ಲಬೇಕಾದ ಪ್ರತಿಯೊಂದು ನೀರಾವರಿ ಯೋಜನೆಗೆ ಬೇಕಾದ ಹಣವನ್ನು, ಕಾವೇರಿ ವಾಟರ್‌ನ್ನು ಬೆಂಗಳೂರಿಗೆ ತರಲು ಬೇಕಾದ ಹಣವನ್ನು, ವಸೂಲು ಮಾಡಿ. ಪ್ರತಿಯೊಂದು ಎರೆಕ್ಷನ್‌ನಲ್ಲೂ ಎಲ್ಲರೂ ಹೇಳಿಕೊಳ್ಳುತ್ತಾರೆ, ನಮ್ಮ ದೇಶದಲ್ಲಿ ಆಗಬೇಕಾದ ಪ್ರಾಜೆಕ್ಟ್‌ಗಳನ್ನು ಆದಷ್ಟು ಜಾಗ್ರತೆ ಕಟ್ಟಿಮುಗಿಸುತ್ತೇವೆ, ಇದಕ್ಕಾಗಿ ನಿರ್ದಿಷ್ಟವಾದ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು, ಆದರೆ ಕಾರ್ಯತಃ ಒಂದೂ ಸರಿಯಾಗಿಲ್ಲ.

ಕೈಗಾರಿಕೆ ವಿಷಯವಾಗಿ ಒಂದು ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಹೊಸ ಪೇಟೆಗೆ ಬರಬೇಕಾಗಿದ್ದ ಉಕ್ಕಿನ ಕಾರ್ಖಾನೆ ತಪ್ಪಿ ಹೋಗುವುದಕ್ಕೆ ಆಂಧ್ರದ ಶ್ರೀ ಸಂಜೀವರೆಡ್ಡಿಯವರು, ಮದ್ರಾಸಿನ ಶ್ರೀ ಕಾಮರಾಜರೇ ಕಾರಣ. ನಮ್ಮ ದೇಶಕ್ಕೆ ಬರಬೇಕಾದ ಕೈಗಾರಿಕೆಗಳನ್ನೆಲ್ಲಾ ಆಧ್ರ ಮತ್ತು ಮದ್ರಾಸಿನವರೇ ಹೊಡೆಯುತ್ತಿದ್ದಾರೆ. ನೀವು ರಾಜಕೀಯಕ್ಕೆ ಹೆದರಬೇಕಾದ್ದು ಇಲ್ಲ. ಕೇಂದ್ರಸರಕಾರದ ಮುಂದೆ ಧೈರ್ಯಸ್ಥೈರ್ಯದಿಂದ ಹೋರಾಡಿ ನಮ್ಮ ರಾಜ್ಯಕ್ಕೆ ಸಲ್ಲಬೇಕಾದ ನ್ಯಾಯವನ್ನು, ನಮ್ಮ ರಾಜ್ಯಕ್ಕೆ ಬರಬೇಕಾದ ಹಣವನ್ನು ವಸೂಲು ಮಾಡಲೇಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋರಾರ).—ಸ್ವಾಮಿ, ಇದು ವ್ಯವಸ್ಥಿತವಾಗಿ ರೀತಿಯಲ್ಲಿ, ಯೋಜನಾಬದ್ಧವಾದ ರೀತಿಯಲ್ಲಿ, ರಾಷ್ಟ್ರದ ಅಭಿವೃದ್ಧಿಗಾಗಿ ಹೊಸದಾಗಿ ಯೋಚನೆ ಮಾಡಿ ಮಾಡಿದ ಯೋಜನೆಯಲ್ಲ. ಇದು ಮೊದಲಿನಿಂದಲೂ ನಮ್ಮ ರಾಷ್ಟ್ರದ ಹೋರಾಟದ ಒಂದು ಮುಖ್ಯ ಗುರಿ ಆಗಿತ್ತು. ಈ ಒಂದು ಗುರಿ 1938ರಿಂದಲೂ ಆಗಿನ ನ್ಯಾಷನಲ್ ಪ್ಲಾನಿಂಗ್ ಕಮೀಷನರ್ ಅವರ ಆದೇಶದಮೇರೆ ಯೋಜನಾ ಬದ್ಧವಾಗಿ, ಯಶಸ್ವಿಯಾಗಿ ನಮ್ಮ ರಾಷ್ಟ್ರದ ಅಭಿವೃದ್ಧಿಯಾಗ ಬೇಕು ಎನ್ನುವ ಗುರಿ ಇದ್ದು ಅದು ಇನ್ನೂ ಸಾಗುತ್ತಿದೆ. ಈ ದಿನ ನಾವು ಮೂರು ಯೋಜನೆಗಳನ್ನು ಮುಗಿಸಿ ನಾಲ್ಕನೆಯೋಜನೆಯಲ್ಲ ಕಾಲಿಡುತ್ತಿದ್ದೇವೆ. ಈ ದಿನ ನಮ್ಮ ಮುಂದೆ ಸರ್ಕಾರದವರು ಈ ನಾಲ್ಕನೆಯೋಜನೆಯ ಬಗ್ಗೆ ಏನು ಅಂಕಅಂಶಗಳನ್ನು ಮತ್ತು ಕೆಲವು ವಿಷಯಗಳನ್ನು ಇಟ್ಟಿದ್ದಾರೆ, ಇದು ಸಾಲದು ಎಂದು ನನ್ನ ಅಭಿಪ್ರಾಯ. ಮತ್ತು ಇದರ ಬಗ್ಗೆ ಹೆಚ್ಚು ಅಭ್ಯಾಸ ಮಾಡಲು ಸಾಕಷ್ಟು ಕಾಲಾವಕಾಶವನ್ನು ಕೊಡದಿರುವುದರಿಂದ, ಸೂಕ್ತವಾದ ಸಲಹೆಗಳನ್ನು ಕೊಡುವುದಕ್ಕೆ ಆಗದಿರುವುದು ಒಂದು ವಿಷಾದವಾದ ಸಂಗತಿಯಾಗಿದೆ. ಈಗಿನ ನಾಲ್ಕನೆ ಪಂಚವಾರ್ಷಿಕಯೋಜನೆಗೆ ನಮ್ಮ ರಾಜ್ಯಕ್ಕೆ ಒಟ್ಟು ಇಟ್ಟಿರುವ ಹಣ 500 ಕೋಟಿ ರೂಪಾಯಿಗಳು ಎಂದು ತಿಳಿಸಿದ್ದಾರೆ. ನಮ್ಮ ದೇಶದ ಸದ್ಯದ ಪರಿಸ್ಥಿತಿಗೆ ಈ ಹಣ ಬಹಳ ಕಡಮೆಯೆಂದು ಹೇಳಬೇಕಾಗುತ್ತದೆ. ಅದರಲ್ಲೂ ವ್ಯವಸಾಯದ ಬಾಬಿಗೆ ಇಟ್ಟಿರುವ ಹಣ ತೀರ ಸಾಲದು ಎಂದು ನನ್ನ ಅಭಿಪ್ರಾಯ. ಏಕೆಂದರೆ, ಈ ಪ್ಲಾನಿಂಗ್ ಕಮೀಷನ್ ಅವರು, ಕೇಂದ್ರಿದ ಮಂತ್ರಿಗಳು ಮತ್ತು ಎಲ್ಲರೂ ಕೂಡ ವ್ಯವಸಾಯಕ್ಕೆ ಹೆಚ್ಚಿನ ಅದ್ಯತೆ ಕೊಡಬೇಕೆಂದು ಹೇಳುತ್ತಿದ್ದಾರೆ. ಗತಿಸಿದ ಪ್ರಾಧಾನಮಂತ್ರಿಗಳಾದ ಶ್ರೀ ಶಾಸ್ತ್ರಿಯವರು ಸಹ ಅವರ ಕಾಲದಲ್ಲಿ ಜೈರಿಸಾನ್ ಎಂದು ಹೊಸ ಘೋಷಣೆಯನ್ನು ಹೊರಡಿಸಿದರು. ಈ ಆಹಾರ ಸಮಸ್ಯೆ ನಮ್ಮ ದೇಶದಲ್ಲಿ ಹೆಚ್ಚು ಇರುವುದಕ್ಕೆ ಕಾರಣ, ನಿರುದ್ಯೋಗ, ಸಾಕಷ್ಟು ಆಹಾರ ಬೆಳೆಯದಿರುವುದು, ಮತ್ತು ಭ್ರಷ್ಟಾಚಾರ. ಈ ಆಹಾರ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳದಿದ್ದರೆ ನಮ್ಮ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಿಕ್ಕೆ ನಮ್ಮ ದೇಶದ ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಿಲ್ಲವೆಂದು ತಿಳಿದು ಈ ಘೋಷಣೆಯನ್ನು ಹೊರಡಿಸಿದರು. ಈ ದಿನ ಕೇಂದ್ರದ ಆಹಾರ ಮಂತ್ರಿಗಳು ಜಲಂಧರ್‌ನಲ್ಲಿ ಹೀಗೆ ತಿಳಿಸಿದ್ದಾರೆ: "Either produce or perish like flies. Otherwise men wolud like to prosper by revolution. Self-sufficiency must be achieved if we want to live like a respectable nation." ದಿವಂಗತ ಪ್ರಧಾನ ಮಂತ್ರಿಗಳಾದ ಜವಹರಲಾಲ್ ನೆಹರೂ ಅವರು ಸಹ ಆಹಾರದ ಬಗ್ಗೆ ಸಾಏರಾರು ಸಾರಿ ಹೇಳಿದ್ದಾರೆ. ಆದರೂ ಸಹ ನಮ್ಮ ರಾಜ್ಯ ಸರ್ಕಾರಗಳು ಮತ್ತು ಅಡಳಿತಾಧಿಕಾರಿಗಳು ಇದರ ಬಗ್ಗೆ ಸಾಕಷ್ಟು ಆಸಕ್ತಿ ವಹಿಸಿಲ್ಲ. ಮೂರನೇ ಯೋಜನೆಯಲ್ಲಿ ವ್ಯವಸಾಯದ ಬಾಬಿಗೆ ಎಷ್ಟು ಹಣ ಖರ್ಚು ಮಾಡಿದರೋ, ಅವರಿಂದ ಎಷ್ಟುಗುರಿಯನ್ನು ಸಾಧಿಸಬೇಕಾಗಿತ್ತೊ ಅಷ್ಟು ಸಾಧಿಸಿಲ್ಲವೆಂದು ಹೇಳಬಹುದು. ದೊಡ್ಡ ದೊಡ್ಡ ಯೋಜನೆಗಳನ್ನು ಭಾರಿ ಭಾರಿ ಜಲಾಶಯಗಳನ್ನು ನಿರ್ಮಿಸಿದರೂ ಸಹ ಹೆಚ್ಚಿನ ಆಹಾರ ಉತ್ಪತ್ತಿ ಆಗುತ್ತಿಲ್ಲ. ಏಕೆಂದರೆ, ಸರಿಯಾದ ಗುರಿಯನ್ನು ಇಟ್ಟುಕೊಂಡು ಇವುಗಳನ್ನು ಕಟ್ಟುತ್ತಿಲ್ಲ. ಎನ್. ಇ. ಎನ್. ಇರಾಖೆಗೆ ಹಣವನ್ನು ಕೊಟ್ಟು ಅನೇಕ ಅಭಿವೃದ್ಧಿಕಾರ್ಯಗಳನ್ನು ಕೈಗೊಳ್ಳುವಂತೆ ಏರ್ಪಾಡು ಮಾಡಿದ್ದೀರಿ. ಆದರೆ ಸಾಮಾನ್ಯ ಜನತೆಗೆ ಈ ಇರಾಖೆಯಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಇವತ್ತಿನದಿವಸ ನನಗಾದರೂ ಅನ್ನಿಸುತ್ತದೆ, ಈ ನಾಲ್ಕನೇ ಯೋಜನೆಯನ್ನು ನಾವು ಪರಿಶೀಲನೆ ಮಾಡುವಾಗ, ಹಿಂದಿನ ಯೋಜನೆಗಳಲ್ಲಿ ಏನೇನು ತಪ್ಪು ಗಳಾಗಿವೆ ಅದನ್ನು ತಿದ್ದಿಕೊಂಡು ಈ ಯೋಜನೆಯನ್ನು ತಯಾರು ಮಾಡಿಲ್ಲ. ಈ ಯೋಜನೆಗಳ ಬಗ್ಗೆ ಜನರಲ್ಲಿ ಏನು ಭಾವನೆ ಮೂಡಿವೆ ಎನ್ನುವ ಬಗ್ಗೆ ವಿಚಾರ ಮಾಡಬೇಕು. ಒಬ್ಬ ಮನುಷ್ಯ ಉತ್ತಮನಾಗಬೇಕಾದರೆ ಉದ್ಧಾರವಾಗಬೇಕಾದರೆ, ತಾನು ಮಾಡಿದ ತಪ್ಪನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದರಿಂದ, ತಿದ್ದಿಕೊಳ್ಳುವುದರಿಂದ ಮಾತ್ರ ಸಾಧ್ಯ. ಈ ಒಂದು ಸಂಸ್ಕೃತಿ ನಮ್ಮ ದೇಶದ ಜನರಲ್ಲಿ ಇಡೆ. ಆದರೆ ನನಗೆ ಗೊತ್ತಿರುವ ಹಾಗೆ, ಯಾವ ಮಂತ್ರಿಯೇ ಆಗಲಿ, ಯಾವ ಅಧಿಕಾರಿಯೇ ಆಗಲಿ, ಮೂರನೆ ಪಂಚವಾರ್ಷಿಕ ಯೋಜನೆಯಲ್ಲಾ ಏನೇನು ತಪ್ಪುಗಳಾಗಿವೆಯೋ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದಿಲ್ಲ. ಯೋಜನಾ ಮಂಡಲಿಯವರು ಒಂದು ವಿಷಯವನ್ನು ತಿಳಿಸಿದ್ದಾರೆ. ಈ ಭೂಸುದಾರಣೆಗಳು ಮಾರ್ಪಾಡಾಗುವುದು ಬಹಳ ಅವಶ್ಯಕ ಎಂದು. ಹಿಂದಿನ ಕಾಲದಲ್ಲಿ ರೈತರು ಗಳು ಪಾಳೇಗಾರರು ಹೇಳಿದ ರೀತಿ ಕೆಲಸ ಮಾಡಬೇಕಾಗಿತ್ತು. ರೈತರು ಕೈಯಿಂದ ಏನುಕ್ಕಿಯಾಗುವುದು, ತಮ್ಮ ಒಂದು ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳುವುದು ಒಂದು ಸ್ವಪ್ನದವಾತಾಗಿತ್ತು. ಆದರೆ ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರಗಳು ಏನು ಮಾಡಿವೆ ಎಂದು ಯೋಚನೆ ಮಾಡುತ್ತಾ ಹೋದರೆ, ಒಂದಲ್ಲ ಒಂದು ಕಾರಣದಿಂದ ಈ ಒಂದು ಭೂಸುಧಾರಣೆಯನ್ನು ನಿಧಾನ ಮಾಡಿರುವುದಲ್ಲದೆ 10 ವರ್ಷಗಳಿಂದಲೂ ಈ ಭೂಸುಧಾರಣೆಯನ್ನು ತರುತ್ತೇವೆ ಎಂದು ಡಂಗುರ ಹೊಡೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ದಿದ್ದರ ಪರಿಣಾಮವಾಗಿ ಜಮೀನು ನಿಜವಾಗಿ ಸಾಮಾನ್ಯ ರೈತನಿಗೆ ಸಿಕ್ಕದ ರೀತಿಯಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ರೈತರಿಂದ ಜಮೀನು ತೆಗೆದುಕೊಂಡು, ನುಳ್ಳು ವಿಭಾಗ ಪತ್ರಗಳನ್ನು ಮಾಡಿಕೊಂಡು, ಮೂಲಭೂತವಾಗಿ ಏನು ಆಗಬೇಕಾಗಿತ್ತೋ, ಅದು ಆಗದೆ ಲೋಪವಾಗಿದೆ ಎಂದು ತಿಳಿಸಬೇಕಾಗದೆ. ನೀವು ಕೈಕೊಂಡಿರುವ ಹುಬ್ಬಾರು ಯೋಜನೆಗಳ ಪರಿಣಾಮವನ್ನು ನೋಡುವುದಾದರೆ, ನಾವು ಯಾವುದಾದರೂ ಒಂದು ಹಳ್ಳಿಗೆ ಹೋದರೆ, ನೀವು ಏನೇನು ಸೌಕರ್ಯಗಳನ್ನು ಅಲ್ಲಿ ಕೊಟ್ಟಿದ್ದೀರೋ ಅವು 100ಕ್ಕೆ 50 ಭಾಗ ಮಧ್ಯಮ ವರ್ಗ ಮತ್ತು ಶ್ರೀಮಂತರ ಕೈಸೇರಿದೆ. ಬಡರೈತನಿಗೆ ಯಾವ ಸಹಾಯವೂ ದೊರೆತಿಲ್ಲ. ತಮಗೆ ಆಧಾರಸ್ತಂಭರಾದ ಹಳ್ಳಿಗಾಡಿನ ಕೆಲವು ಜನರಿಗೆ ರಿಯಾಯಿತಿ ಕೊಟ್ಟು ಅವರ ಮುಖಾಂತರ ರಾಜಕೀಯ ಬುನಾದಿಯನ್ನು ಭದ್ರಪಡಿಸುವುದಕ್ಕೆ ಯೋಜನೆ ಮಾಡುತ್ತಾ ಇದ್ದೀರಿ. ನನಗೆ ಅನಿಸುತ್ತದೆ, ಯೋಜನೆ ಯಶಸ್ವಿಯಾಗಿ ಕಾರ್ಯಗತ ಮಾಡಬೇಕಾದರೆ, ಅದಕ್ಕೆ ಸರ್ಕಾರ ಕೂಡ ಒಂದು ಖಚಿತವಾದ ನೀತಿ ನಿಲುವನ್ನು ಅವಲಂಬಿಸಬೇಕು. ಈ ದಿವಸ ಯಾವೊಂದೂ ನೀರಾವರಿ ಯೋಜನೆಗಳಿಗೆ ಹಣ ಕೊಡುವುದಕ್ಕೆ ಅವಕಾಶ ಇಲ್ಲದೇ ಇರತಕ್ಕ ಒಂದು ಡ್ರೈ ಏರಿಯಾ ನಮ್ಮ ರಾಜ್ಯದ ಕೋರಾರ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲಿ ಇದೆ. ಮಳೆಯನ್ನೇ ನಂಬಿ ಇರುವ ಆ ಜಿಲ್ಲೆಗಳ ಜನತೆಯ ಜೀವನದ ಮಟ್ಟ ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡಬೇಕು. ವ್ಯವಸಾಯದ ಬಗ್ಗೆ ಹೇಳುವುದಾದರೆ, 4 ಕೋಟಿ ರೂಪಾಯಿ ಮಾತ್ರ ನೀರಾವರಿ ಭಾವಿಗಳಿಗೆ ಒದಗಿಸಿದ್ದೀರಿ. ಅದು ಸಾಲದಾಗಿದೆ. ಬಯಲು ಸೀಮೆಯಾದ ಕೋರಾರ, ಬೆಂಗಳೂರು, ಚಿತ್ರದುರ್ಗ ಪ್ರದೇಶದಲ್ಲಿ ನೀರಾವರಿ ಬಾವಿಗಳಿಗೆ ಅವಶ್ಯಕತೆ ಇದೆ. ಇದು ಸಾಕಾಗುವುದಿಲ್ಲ. ಈ ದೃಷ್ಟಿಯಿಂದ ಎಲ್ಲಾ ಪ್ರದೇಶಕ್ಕೂ ಕೂಡ ಸರಿಯಾದ ರೀತಿಯಲ್ಲಿ ಯೋಜನೆ ರೂಪಿತವಾಗಿಲ್ಲ. ಆದ್ದರಿಂದ ಹೆಚ್ಚಿನ ನೀರಾವರಿ ಬಾವಿಗಳಿಗಾಗಿ ಒದಗಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಯಬಯಸುತ್ತೇನೆ. ಅಷ್ಟೇ ಅಲ್ಲದೆ ಕೈಗಾರಿಕಾರಂಗದಲ್ಲಿ ನಾನು ಮೊದಲಿನಿಂದಲೂ ಈ ನಭೆಯಲ್ಲಿ ಒತ್ತಾಯಪಡಿಸುತ್ತಾ ಇದ್ದೇನೆ. ಕೈಗಾರಿಕೆ ಸ್ಥಾಪನೆ ಮಾಡುವಾಗ ಕೈಗಾರಿಕೆಗಳನ್ನು ಒಂದು ದೊಡ್ಡ ಪಟ್ಟಣದಲ್ಲಿ ಒಂದೇ ಕಡೆ ಕೇಂದ್ರೀಕೃತ ಮಾಡದೆ ಬೇರೆ ಸ್ಥಳಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲಾ ಕೈಗಾರಿಕೆಗಳನ್ನೂ ಬೆಂಗಳೂರಿನಲ್ಲಿಯೇ ಕೇಂದ್ರೀಕೃತ ಮಾಡದೇ ಬೇರೆ ಪ್ರದೇಶಗಳಲ್ಲಿಯೂ ಕೂಡ, ಸಣ್ಣ ಪಟ್ಟಣಗಳಲ್ಲೂ ಕೂಡ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಎಲ್ಲ ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೋ ಅಲ್ಲಿಯೇ ಪೂರ್ಣಗೊಳಿಸಬೇಕು. ಕಳೆದ ಒಂದು ವರ್ಷದ ಹಿಂದೆ ಮುಳಬಾಗಿಲಿನಲ್ಲಿ ದೊಡ್ಡ ಪೋರ್ಸೆಲೈನ್ ಫ್ಯಾಕ್ಟರಿಯನ್ನು ತೆರೆಯುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳೂ, ರೆವಿನ್ಯೂ ಮಂತ್ರಿಗಳೂ ಪ್ರೆಸ್‌ರಿನಲ್ಲಿ ಹೇಳಿಕೆ ಕೊಟ್ಟರು. ಇದುವರೆಗೂ ಕೂಡ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ತರಹ ಆಧಾನ ಅದಂಥ ಕಾರ್ಯಕ್ರಮವನ್ನು ಏತಕ್ಕೆ ತೆಗೆದುಕೊಳ್ಳುತ್ತೀರಿ ! 4 ವರ್ಷದಲ್ಲಿ ಏನೇನು ಮಾಡುವುದಕ್ಕೆ ಸಾಧ್ಯವಿದೆ, ಯಾವುದಕ್ಕೆ ಆದ್ಯತೆ ಕೊಡಬೇಕು ಎಂದು ನೋಡಿಕೊಂಡು ಯಾವ ಒತ್ತಡಕ್ಕೂ ಒಳಗಾಗದೆ ಸರಿಯಾದ ವ್ಯವಸ್ಥೆಯಿಂದ ಕೆಲಸ ಮಾಡಬೇಕು. ಇವಲ್ಲದೆ ಹುಚ್ಚಾಪಟ್ಟೆ ಒಂದು ಕೈಗಾರಿಕೆ ಮಾಡುತ್ತೇವೆ ಎಂದು ಹೇಳಿ ಆಮೇಲೆ ಅದನ್ನು ಕೈಬಿಡುವುದು ಸರಿಯಲ್ಲ.

ವಿದ್ಯಾಭ್ಯಾಸ ವಿಷಯದಲ್ಲಿ ಶ್ರೀ ಅಣ್ಣಾರಾವ್ ಗಣಮುಖಯವರು ಚೆನ್ನಾಗಿ ಹೇಳಿದರು. ನಮಗೆ ವಿದ್ಯಾಭ್ಯಾಸಕ್ಕೆ ಇಷ್ಟು ಹಣ ಖರ್ಚಾಗುತ್ತಾ ಇದ್ದರೂ ಕೂಡ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಾಕಷ್ಟು ಕೊಟ್ಟಿಲ್ಲ. ಹಣಒದಗಿಸುವುದಕ್ಕೆ ನಮ್ಮ ಪ್ಲಾನಿಂಗ್ ಕಮೀಷನ್‌ನವರಾಗಲಿ, ತಜ್ಞರಿಗಾಗಲೀ ಸಾಧ್ಯವಾಗಿಲ್ಲ. ಪ್ರೈಮರಿ ಸ್ಕೂಲಿಗೆ ಹಣ ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಹೊಸದಾಗಿ ಬೆಂಗಳೂರು ಯೂನಿವರ್ಸಿಟಿ, ಅಗ್ರಿಕಲ್ಚರ್ ಯೂನಿವರ್ಸಿಟಿ ಮತ್ತು ಇತರ ಹೊಸ ಹೊಸ ವಿಶ್ವವಿದ್ಯಾನಿಲಯಗಳಿಗೆ ಕೋಟ್ಯಾಂತರ ಹಣ ಖರ್ಚಾಗುತ್ತಾ ಇದೆ. ಮನೆ ಕಟ್ಟಬೇಕಾದರೆ ಮೊದಲು ಗ್ರೌಂಡ್ ಫ್ಲೋರ್ ಭದ್ರವಾಗಿ ಕಟ್ಟಬೇಕು. ಆಮೇಲೆ ಅಂತಸ್ತು ಕಟ್ಟುವ ವಿಷಯ ಯೋಚಿಸೆ ಮಾಡುತ್ತಾರೆ. ಪ್ರೈಮರಿ ಸ್ಕೂಲ್ ಬಿಲ್ಡಿಂಗಿಗೆ ಹಣ ಇಲ್ಲದೆ ಇರುವ ಪರಿಸ್ಥಿತಿಯಲ್ಲಿ, ಹೊಸ ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಲು ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡುವುದು ಯೋಜನಾ ಬದ್ಧವಾದ ರೀತಿಯ ಬೆಳವಣಿಗೆ ಅಲ್ಲ, ನಮ್ಮ ರಾಷ್ಟ್ರದ ಬೆಳವಣಿಗೆ ಅಲ್ಲ ಎಂದು ನಾನು ಸ್ಪಷ್ಟಪಡಿಸಬೇಕಾಗಿದೆ. ಆದುದರಿಂದ ಮುಂದೆ ನಾಲ್ಕನೇ ಯೋಜನೆಯಲ್ಲಾದರೂ ಕೂಡ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಮತ್ತು ವ್ಯವಸಾಯಕ್ಕೆ ಹೆಚ್ಚಿನ ಒಂದು ಪ್ರಾಮುಖ್ಯತೆಯನ್ನು ಕೊಟ್ಟು ಅದಕ್ಕೆ ಹೆಚ್ಚು ಹಣ ಕೊಡಬೇಕು. ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಈಗ ಮುಂದಿನ ಐದು ವರ್ಷಗಳಲ್ಲಿ ಮೈಸೂರು ಸರ್ಕಾರ ಏನೇನು ಸಾಧನೆ ಮಾಡಬೇಕೆಂದು ಹೇಳಿ ಹೊರಟಿದ್ದಾರೆ, ಅಂಥ ಒಂದು ಯೋಜನೆಯ ರೂಪರೇಷೆಗಳನ್ನು ನಾವು ಬಹಳ ನಿರಾಶಾಭಾವದಿಂದ ಚರ್ಚೆ ಮಾಡುತ್ತಿದ್ದೇವೆ. ಅನೇಕ ಜನ ಸದಸ್ಯರು ಅನೇಕ ತರವಾಗಿ ಮಾತನಾಡಿದ್ದಾರೆ. ಆದರೆ ನಾನು ಸರ್ಕಾರವನ್ನೇನೂ ಟೀಕೆ ಮಾಡು ಮಾಡುವದಕ್ಕೆ ಹೋಗುವುದಿಲ್ಲ. ಇಲ್ಲಿ ನಾನಾದರೂ ಹೇಳುವುದಿಲ್ಲ, ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ, ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಪ್ರಾರಂಭವಾಗುವ ಹೊತ್ತಿಗೆ ಸರ್ಕಾರದವರು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ಕೆಲಸ ಕಾರ್ಯಗಳನ್ನು ಆಳವಡಿಸಬೇಗಿಂಬುದನ್ನೆರ್ಲಾ ಒಂದು ಪಟ್ಟಿ ಮಾಡಿಕೊಂಡು ಕಾರ್ಯರೂಪಕ್ಕೆ ತರಬೇಕು. ಇವತ್ತಿನ ದಿವಸ ಮೂರನೇ ಯೋಜನೆಯ ಫಲವನ್ನು ನೋಡುವುದಾದರೆ, ಈ ಸರ್ಕಾರ ದವರು ತಾತ್ಕಾಲಿಕವಾಗಿ ಆಲನ್ಯದಿಂದ ಮಾಡುವ ಕೆಲಸವೆಂಬುದನ್ನು ನಾವು ಮನಗಾಣಬಹುದು. ಇವತ್ತಿನ ದಿವಸ ಏನೇನು ಸಾಧಿಸಿದ್ದೇವೆ, ಏನೇನು ಸಾಧಿಸಿಲ್ಲ, ಎಷ್ಟು ಹಣ ಖರ್ಚು ಮಾಡಿದ್ದೇವೆ. ಇವೆಲ್ಲಾ ನೋಡಿಕೊಂಡು ಮುಂದಿನ ಒಂದು ಪ್ಲಾನನ್ನು ಆಳವಡಿಸಬೇಕಾದುದು ಸರ್ಕಾರದ ಕರ್ತವ್ಯ. ಮೈಸೂರು ರಾಜ್ಯದಲ್ಲಿ ಒಂದು, ಎರಡು, ಮೂರು ಯೋಜನೆಗಳು ಹೇಗೆ ಫಲಪ್ರದ ವಾಗಲಿಲ್ಲವೋ, ಹಾಗೆ ಮುಂದಿನ ನಾಲ್ಕನೆಯ ಯೋಜನೆಯು ಕೂಡ ಆಗುತ್ತದೋ ಎಂಬ ಭಯವು ನನ್ನ ಮನಸ್ಸಿನಲ್ಲಿ ಉದ್ಭವಿಸಿದೆ. ಇವತ್ತಿನ ದಿವಸ ಈ ಮೂರನೆ ಯೋಜನೆಯಲ್ಲಿ ಏನೇನು ಸಾಧನೆ ಮಾಡಿದ್ದಾರೆ, ಅದರ ಅನುಭವದ ಮೇಲೆ ಈ ನಾಲ್ಕನೆ ಯೋಜನೆಗೆ ಲೆಕ್ಕ ಹಾಕಿಕೊಂಡು, ಮೈಸೂರು ರಾಜ್ಯಕ್ಕೆ ತಾವು ಮಾಡಿರತಕ್ಕ 530 ಕೋಟಿ ರೂಪಾಯಿಯ ಯೋಜನೆಯು ಏನಿದೆ, ಅದು ತೀರಾ ಒಂದು ಸಣ್ಣ ಯೋಜನೆಯಾಗಿದೆ ಎಂದು ನಾನಾದರೂ ಹೇಳಬಯಸುತ್ತೇನೆ. ಇವತ್ತು ಇಲ್ಲಿ ಏನು ಮಾಡಿದ್ದೀರಿ ಎಂದರೆ, ಅನೇಕ ವಿಧವಾದ ಖಾತೆಗಳಿಗೆ ಹಣವನ್ನು ಹಂಚುವುದಕ್ಕೆ ಹೋಗುತ್ತಿದ್ದೀರಿ. ಪಬ್ಲಿಸಿಟಿ ಇಲಾಖೆಗೆ 50 ಲಕ್ಷ ಇಟ್ಟಿದ್ದೀರಿ. ನೀವು ಇದರಲ್ಲಿ ಏನನ್ನು ಸಾಧನೆ ಮಾಡಿದ್ದೀರಿ ! ಈ ಯೋಜನೆಗೆ ಇಟ್ಟಿರತಕ್ಕ ಹಣ ಸಮುದ್ರದಲ್ಲಿ ಒಂದೊಂದು ಗಸಗಸೆ ಕಾಳನ್ನು ಹಾಕಿದರೆ ಅದು ಅಲ್ಲಿ ಕಾಣದೆ ಹೋಗುತ್ತದೆ, ಅದೇ ರೀತಿ ನೀವು ಈ ಒಂದು ಯೋಜನೆಗೆ 530 ಕೋಟಿ ರೂಪಾಯಿಯನ್ನು ಒದಗಿಸಿದ್ದೀರಿ ಮತ್ತು ಎಲ್ಲಾ ಇಲಾಖೆಗಳಿಗೆ ಹಂಚಿದ್ದೀರಿ. ಆದರೆ ನಾನಾದರೂ ಹೇಳುತ್ತೇನೆ ನಿಮಗೆ ಇದರಿಂದ ಏನನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಯಾವುದಾದರೂ ಒಂದು ರಾಜ್ಯದಲ್ಲಿ ತನ್ನ ಆದಾಯದ, ತನ್ನ ರಾಜ್ಯದ ಉತ್ಪನ್ನದ ಮೇಲೆ ಹೊಂದಿಕೊಂಡು ಅಭಿವೃದ್ಧಿಕಾರ್ಯಗಳನ್ನು ಮಾಡಬೇಕೇ ಹೊರತು, ಯಾವಾಗಲೂ ತೆರಿಗೆ ಹಾಕಿ, ಜನರ ಮೇಲೆ ಏನಾದರೂ ಹೊರಲಾರದ ಹೊರೆ ಹೊರಿಸಿ, ಅದರಿಂದ ಬರತಕ್ಕ ಹಣದಿಂದ ನಾವು ಯೋಜನೆಯನ್ನು ಫಲಪ್ರದವಾಗಿ ಮಾಡುವಾಗುವುದಿಲ್ಲ ಎಂದು ನಾನಾದರೂ ಹೇಳುತ್ತೇನೆ. ಇದನ್ನೆಲ್ಲಾ ಮಾಡುವಾಗ, ಈ ಪ್ಲಾನರ್ಸ್ ಮನಸ್ಸಿನಲ್ಲಿ ಏನನ್ನು ಇಟ್ಟುಕೊಂಡು ಮಾಡಿದ್ದಾರೆಂದು ನನಗಾದರೂ ತಿಳಿಯದಾಗಿದೆ. ಇವತ್ತಿನ ದಿವಸ ನಮಗೆ ನಮ್ಮ ಕೈಗಾರಿಕೆಗಳಿಂದ ಹಣ ಬರಬೇಕು, ವ್ಯವಸಾಯದಿಂದ ಹಣ ಬರ ಬೇಕು, ಮತ್ತು ಇನ್ನೂ ಬೇರೆ ಉತ್ಪನ್ನಗಳಿಂದ ಹಣ ಬರಬೇಕು. ಇಲ್ಲದೆ ಹೋದರೆ, ಪ್ರತಿ ನಿಮಿಷಕ್ಕೂ ನಾವು ಕೇಂದ್ರ ಸರ್ಕಾರಕ್ಕೆ ಕೈಚಾಚಬೇಕಾಗುತ್ತದೆ, ಮತ್ತು ರಿಸರ್ವ್ ಬ್ಯಾಂಕಿನ ಓವರ್ ಡ್ರಾಫ್ಟನ್ನು ಅವಲಂಬಿಸಿ ನಮ್ಮ ನಾಲ್ಕನೆ ಯೋಜನೆಯನ್ನು ಮಾಡಬೇಕಾಗುತ್ತದೆ. ಇದು ಬಹಳ ಕೆಟ್ಟದ್ದು, ಅದಕ್ಕೋಸ್ಕರ ಸರ್ಕಾರ ಇದನ್ನೆಲ್ಲಾ ಯೋಚನೆ ಮಾಡಬೇಕಾಗಿತ್ತು. ಇವರಿಗೆ ಒಂದು, ಎರಡು, ಮೂರು ಯೋಜನೆಗಳಲ್ಲಿ ಬಂದಂತಹ ಅನುಭವದ ಮೇಲೆ ಇವರು ಇದನ್ನು ಸರಿಪಡಿಸ ಬೇಕಾಗಿತ್ತು. ಶ್ರೀಮಾನ್ ರೋಕನಾಥನ್‌ರವರು ಮೈಸೂರಿಗೆ ಎಂಥ ಪ್ಲಾನ್ ಇರ ಬೇಕು, ಎಷ್ಟು ಸಾಧಿಸಬೇಕು, ಎಂಬುದನ್ನೆರ್ಲಾ ವಿಶಾಲವಾಗಿ ತಮ್ಮ ವರದಿಯಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಿದ್ದರೆ ಒಳ್ಳೆಯದಾಗಿತ್ತು. ಅದನ್ನೆಲ್ಲಾ ಸರಿಯಾಗಿ, ರಾಜ್ಯದ ಕಲ್ಯಾಣವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುತ್ತಿದ್ದರೆ, 530 ಕೋಟಿ ರೂಪಾಯಿಯ ಯೋಜನೆಯ ಬದಲು 750 ಕೋಟಿ ರೂಪಾಯಿಯ ಯೋಜನೆಯನ್ನು ಬರಯಲಕ್ಕೆ ಸಾಧ್ಯವಿತ್ತು. ಹಾಗೆ ಮಾಡುತ್ತಿದ್ದರೆ, ನಮ್ಮ ಮೈಸೂರು ಸಂಸ್ಥಾನದಲ್ಲಿ 1975ರ ಹೊತ್ತಿಗೆ ಸ್ವಲ್ಪ ಮಟ್ಟಿಗೆ ನಮ್ಮ ಆಹಾರದ ಪರಿಸ್ಥಿತಿಯನ್ನು ನೀಗಿಸಬಹುದಿತ್ತು. ಮತ್ತು ನಾವು ಬೇರೆ ಯಾರನ್ನೂ ಕೇಳಬೇಕಾಗುವ ಪ್ರಸಂಗವು ಬರುತ್ತಿರಲಿಲ್ಲ. ಇಲ್ಲವಿದ್ದರೆ ನಾನಾದರೂ ಹೇಳುತ್ತೇನೆ, ಈ ನಮ್ಮ ವ್ಯವಸಾಯದ ಕ್ಷೇತ್ರದಲ್ಲಿ ನಮ್ಮ ಆಹಾರದ ಕ್ಷೇತ್ರದಲ್ಲಿ, ನಾವು ಒಂದು ಸ್ವಯಂ ಪೂರ್ಣತೆಯನ್ನು ಸಾಧಿಸಿ ಮಾಡಲಾರೆವು. ಸರ್ ಎಮ್ವೇಶ್ವರಯ್ಯನವರು ಕೈಗಾರಿಕೆಗಳನ್ನು ಮಾಡಿರಿ, ಇಲ್ಲದಿದ್ದರೆ ಸರ್ವನಾಶವೆಂದು ಹೇಳಿದ್ದಾರೆ. ಇಲ್ಲಿ ನಮ್ಮ ಕೈಗಾರಿಕೆಗಳಿಗೋಸ್ಕರ 15 ಕೋಟಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇಟ್ಟಿದ್ದಾರೆ. ವ್ಯವಸಾಯಕ್ಕೆ ಎಷ್ಟು ಕೋಟಿ ಇಟ್ಟಿದ್ದೀರಿ ? ಕೈಗಾರಿಕಾ ಸಚಿವರು ಏನನ್ನು ಸಾಧನೆ ಮಾಡಿದ್ದಾರೆ ? ಎಂದು ನಾನಾದರೂ ಕೇಳುತ್ತೇನೆ. ತಮ್ಮ ಕರಡು ಪ್ರತಿ ನೋಡಿದರೆ ಒಂದು ದೊಡ್ಡ ಐರನ್ ಫೌಂಡರಿ ಇದ್ದ ಹಾಗೆ, ಮೊದಲನೆ ವರ್ಷ 50 ಲಕ್ಷ, ಎರಡನೆ ವರ್ಷ 100 ಲಕ್ಷ, ಮೂರನೇ ವರ್ಷ 150,. ಹೀಗೆ ತಮ್ಮದು ನಾಲ್ಕನೇ ಯೋಜನೆ ಮುಗಿಯುವುದರೊಳಗೆ, 5 ಕೋಟಿ ಖರ್ಚಾಗುತ್ತದೆ ಎಂದು ಹೇಳಿದರೆ, ಐದು ವರ್ಷ ಮುಗಿಯುವುದರೊಳಗೆ ಈ ಐರನ್ ಫೌಂಡರಿಯ ರೂಪ ರೇಷೆಗಳು ಎಷ್ಟು ಮಟ್ಟಿಗೆ ಬೆಳೆಯುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ. ಈಗ ತಮಗೆ ಫಾರಿನ್ ಎಕ್ಸ್‌ಚೇಂಜ್ ಸಿಕ್ಕಬೇಕಾದರೆ, ಮೆಶಿನರಿ ಸಿಕ್ಕಬೇಕಾದರೆ, ನೀವು ಇದಕ್ಕೆಲ್ಲಾ ಹುದುಕಾಡಬೇಕಾಗುತ್ತದೆ. ನೀವು ಈ ರೀತಿ ನಾಲ್ಕನೆಯ ಯೋಜನೆಯಲ್ಲಿ 530 ಕೋಟಿ ಇಟ್ಟದ್ದು ನಮ್ಮನ್ನು ಮೆಚ್ಚಿಸುವುದಕ್ಕೋಸ್ಕರವೇ, ಅಥವಾ ಸಮಾಧಾನ ಮಾಡುವುದಕ್ಕಾಗಿಯೇ ಅಥವಾ ಇದನ್ನೆಲ್ಲಾ ದೇಶದ ಕಲ್ಯಾಣಕ್ಕಾಗಿ ವಿನಿಯೋಗ ಮಾಡುತ್ತಿದ್ದೀರಾ ? ಎಂದು ನಾನಾದರೂ ಕೇಳಬೇಕಾಗುತ್ತದೆ. ಇದರಿಂದ ನಿಮಗೆ ಏನನ್ನೂ ಸಾಧನೆ ಮಾಡಲಕ್ಕೆ ಸಾಧ್ಯವಿಲ್ಲ ಎಂದು ನಾನಾದರೂ ಹೇಳುತ್ತೇನೆ. ಶ್ರೀಮಾನ್ ಕೇಶವಮೂರ್ತಿಯವರು ಹೇಳುತ್ತಾರೆ, ಯು.ಎಸ್.ಎ.ನ್., ಆರ್. ಚೈನಾ ಮೊದಲಾದ ದೇಶಗಳು ಜನತಗೋಸ್ಕರ ಮಾಡುವ ರೀತಿಯಲ್ಲ, ಅವರು ಏನು ಹೇಳಿದ್ದಾರೆ ಅದನ್ನು ನಾನು ಸಹ ಓದಿದೆ. ಅವರು ಏನು ಹೇಳುತ್ತಾರೆಂದರೆ, 'Expansion of wholesale commidities to the population by 2/5 training of 7 million experts in higher secondary and special education, increase of industrial output by one and half, agricultural output by about 1/3.' ನೀವು ಈ ನಾಲ್ಕು ವಿಷಯಗಳಲ್ಲಿ ಏನನ್ನು ಸಾಧನೆ ಮಾಡಿದ್ದೀರಿ ಎಂದು ನಾನಾದರೂ ಕೇಳುತ್ತೇನೆ. ನೀವು ಅಗ್ರಿಕಲ್ಚರಲ್ ವಿಚಾರದಲ್ಲಿ ಏನೇನು ಸಾಧನೆ ಮಾಡಿದ್ದೀರಿ ! ಈಗ ಶ್ರೀ ಸೂರ್ಯನಾರಾಯಣರಾಯರು ಹೇಳಿದರು, ಒಂದ ಎಕರೆಯ ಮೇಲೆ ಇಬ್ಬರು ಅವಲಂಬಿಸಿರಬಹುದು. ಮೂವರು ಇರಲು ಅವಕಾಶವಿಲ್ಲ. ನಾನಾದರೂ ಹೇಳುತ್ತೇನೆ ಸರ್ಕಾರಕ್ಕೆ ಬುದ್ಧಿವಾದವನ್ನು ಕೊಟ್ಟವರು ನಿಜವಾಗಿ ವ್ಯವಸಾಯ ಕ್ಷೇತ್ರದಲ್ಲಿ ಜ್ಞಾನವಿಲ್ಲದವರು ಎಂದು ಹೇಳುತ್ತೇನೆ. ಒಬ್ಬನು ಕಷ್ಟಪಟ್ಟು ಒಂದು ಜೊತೆ ಎತ್ತುಗಳನ್ನು ಇಟ್ಟು ಮೂರು ಹೆಚ್.ಪಿ. ಪಂಪ್ ಸೆಟ್ಟು ಇಟ್ಟು ಕೆಲಸ ಮಾಡುವುದಾದರೆ ಒಬ್ಬ ಮನುಷ್ಯನಿಗೆ ಕೈತುಂಬಾ ಬರುತ್ತದೆ. ತಮ್ಮ ರಿಪೋರ್ಟಿನಲ್ಲಿ ಹೇಳುತ್ತೀರಿ, ನಾಲ್ಕು ಜನಕ್ಕೆ ಆಗಬಹುದು ಎಂದು. ಇದು ನಿಜವಾಗಿಯೂ ಕಣ್ಣಿಗೆ ಮಣ್ಣೆರಚುವುದು. ಇವರು ಹೇಳುವ ಪ್ರಕಾರವಾದರೆ, ನಮ್ಮ ಕಾಲುವೆಗಳನ್ನು ಏಕೆ ಮಾಡಬೇಕು, ಅಪ್ಪರ್‌ಕೃಷ್ಣಾ ಏಕೆ ಮಾಡಬೇಕು, ಇನ್ನೊಂದು ಏಕೆ ಮಾಡಬೇಕು. ಮತ್ತು ಇದರಿಂದ ನಾವು ಸ್ವಯಂ ಪೂರ್ಣತೆಯನ್ನು ಪಡೆಯಬಹುದು. ತಾವು ಹೇಳತಕ್ಕ ನಾಲ್ಕು ಜನ ಎಂಬುದು ಸತ್ಯಕ್ಕೆ ದೂರವಾದ ಮಾತು. ಇದನ್ನು ವ್ಯವಸಾಯದ ಕ್ಷೇತ್ರದಲ್ಲಿ ದುಡಿವಿರುವ ಅಧಿಕಾರಿಗಳಾಗಲೀ, ಅಡ್ವೈಸರುಗಳಾಗಲೀ ಕೊಟ್ಟಿಲ್ಲ ಎಂದು ನಾನಾದರೂ ಹೇಳುತ್ತೇನೆ.

ರೋಗನಾಥನ್ ಎನ್ನುವರು ಅವರ ರಿಪೋರ್ಟಿನಲ್ಲಿ ಹೇಳಿರುವಂತೆ 1960-61ರಲ್ಲಿ ಮೈಸೂರಿನಲ್ಲಿ 3೦.5 ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ಉತ್ಪತ್ತಿ ಮಾಡುತ್ತಿದ್ದರು. ಅವರು ಹೇಳಿರುವಂತೆ 18 ಔನ್ಸ್ ಪ್ರಕಾರ ನಾವು ಎಲ್ಲರಿಗೂ ಆಹಾರವನ್ನು ಹಂಚಬೇಕಾದರೆ, ನಮಗೆ ಸುಮಾರು 3 ಲಕ್ಷ ಟನ್ನುಗಳಷ್ಟು ಬೇಕಾಗುತ್ತದೆ. ಇದರ ಆವರೇಜಿನಂತೆ 1976ರಲ್ಲಿ ಮೈಸೂರಿನ ಪಾಪ್ಯುಲೇಷನ್ನು ಎಷ್ಟು ಬೆಳೆಯುತ್ತದೆ ಎಂದು ನೋಡಿದರೆ ಶೇಕಡಾ 38ರಷ್ಟು ಬೆಳೆಯುತ್ತದೆ. ಆಗ ಮೈಸೂರು ರಾಜ್ಯಕ್ಕೆ ಆಹಾರ ಸುಮಾರು 32.8ರಷ್ಟು ಕಡಿಮೆ ಬರುತ್ತದೆ ಎಂದರೆ ಇನ್ನೂ 35.5 ಮಿಲಿಯನ್ ಟನ್ನುಗಳಷ್ಟು ಆಹಾರ ಜಾಸ್ತಿ ಬೇಕಾಗುತ್ತದೆ. ಈ ಮಟ್ಟದಲ್ಲಿ ನಾವು ಕೊಡಬೇಕಾಗಿದ್ದರೆ ನಮಗೆ ಸುಮಾರು 51.1 ಲಕ್ಷ ಟನ್ನುಗಳಷ್ಟು ಆಹಾರ ಬೇಕಾಗುತ್ತದೆ. ಈಗಿರತಕ್ಕ ಆಹಾರ ಮುಂದೆ ನಮ್ಮಲ್ಲಿ ಜನಸಂಖ್ಯೆ ಹೆಚ್ಚಾಗಿ ಆಗುವುದರಿಂದ ಆದರಂತೆ ನೋಡಿದರೆ 1975-76ರಲ್ಲಿ ಸುಮಾರು 32.5 ಮಿಲಿಯನ್ನು ಟನ್ನುಗಳಷ್ಟು ಹೆಚ್ಚಾಗಬೇಕಾಗುತ್ತದೆ. ಎಂದರೆ ನೀವು ಐದನೆ ಯೋಜನೆಯಲ್ಲಿ ಕಾಲಿಡುವ ಹೊತ್ತಿಗೆ ನೀವು 51.1 ಲಕ್ಷ ಟನ್ನು ಆಹಾರ ಹೆಚ್ಚಿಗೆ ಉತ್ಪನ್ನ ಮಾಡಬೇಕಾಗುತ್ತದೆ. ಇಷ್ಟು ಹೆಚ್ಚು ಆಹಾರದ ಉತ್ಪತ್ತಿಯನ್ನು ಮಾಡಲು ಮೈಸೂರು ರಾಜ್ಯದಲ್ಲಿ ನೀವು ಏನೇನು ಮಾಡಿದ್ದೀರಿ ? ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳಾದ ಶ್ರೀಮಾನ್ ಅಳ್ವರವರು ದೇಶದಲ್ಲಿ ಫ್ಯಾಮಿಲಿ ಪ್ಲಾನಿಂಗನ್ನು ಹೆಚ್ಚಾಗಿ ಮಾಡಬೇಕು, ಒಂದು ನಂನಾರದಲ್ಲಿ ಒಂದು ಹೆಣ್ಣು ಹಾಗೂ ಒಂದು ಗಂಡು ಇದ್ದರೆ ಸಾಕು ಎಂದು ಜನಸಂಖ್ಯೆಯನ್ನು ನಿಯಂತ್ರಣ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರು ಹೇಳುವಂತೆ ಆದರೂ ಈಗಿರತಕ್ಕ ಎರಡು ಕೋಟಿ 35 ಲಕ್ಷ ಜನ ಎಂದು ಇರುವುದು 1975-76ರಲ್ಲಿ 38.2 ಲಕ್ಷದಷ್ಟು ಜಾಸ್ತಿಯಾಗುವುದಾದರೆ ಅವರಿಗೆಲ್ಲಾ ಆಹಾರ ಎಲ್ಲಿಂದ ತರುತ್ತೀರಿ ! ಈಗ ಆಹಾರದ ಕೊರತೆ ಸುಮಾರು

18-19 ಲಕ್ಷ ಟನ್ನುಗಳಷ್ಟು ಇದೆ. ಹೆಚ್ಚು ಆಹಾರ ಬೆಳೆಯಲು ಏನೇನು ಕಾರ್ಯಕ್ರಮ ತೆಗೆದು ಕೊಂಡಿದ್ದೀರಿ ? ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತಿದ್ದೇನೆ. ಇದಕ್ಕೋಸ್ಕರ ಯೋಜನೆಯನ್ನು ತಯಾರು ಮಾಡುವಾಗ ಮೈಸೂರು ಸರಕಾರ ಹೇಗೆ ಯೋಜನೆ ಮಾಡಿದೆ ಎಂದರೆ, ಹಸುವಿನ ಕೆಚ್ಚಲಿನಲ್ಲಿ ತುಂಬಾ ಹಾಲಿದೆ ಎಂದು ಅದರ ಕೆಚ್ಚಲನ್ನೇ ಕುಯ್ಯುವ ರೀತಿಯಲ್ಲಿ ಇಲ್ಲಿ ಏನೋ ಒಂದು ರೀತಿಯ ಅಂಕೆ ಅಂಶಗಳನ್ನು ಕೊಟ್ಟು ಮಾಡಿದರೆ ಇದರಿಂದ ನಿಮಗೆ ಅನುಕೂಲವಾಗುತ್ತದೆಯೇ ! ಇಲ್ಲಿ ನೀವು ಕೊಚ್ಚಿರುವ ಅಂಕೆ ಅಂಶಗಳೇ ಸರಿ ಎಂದು ಕೇಂದ್ರ ಸರಕಾರಕ್ಕೂ ದಾಖಲೆ ಕೊಟ್ಟು ನಮ್ಮನ್ನೂ ಒಪ್ಪಿಸಬೇಕೆಂದು ಮಾಡಿದರೆ ಇದರಿಂದ ನಿರೀಕ್ಷಿಸಿದಷ್ಟು ಫಲ ಬರುವುದಕ್ಕೆ ಸಾಧ್ಯವಿಲ್ಲ. ನಾನಾದರೂ ಹೇಳುತ್ತೇನೆ, ತಾವು 75-76ರಕ್ಕೆ ಇಲ್ಲಿ ಕೊಚ್ಚಿರುವ ಲೋಗನಾಥನ್ ರಿಪೋರ್ಟ್ ಪ್ರಕಾರ ನಮ್ಮ ಜನ ಜೀವನ ಮಾಡಬೇಕಾದರೆ ಎಷ್ಟು ಹಣ ಖರ್ಚು ಮಾಡಬೇಕಾಗುತ್ತದೆ ಎಂದರೆ ನುಮಾರು 510 ಕೋಟಿ 5 ಲಕ್ಷ ರೂಪಾಯಿಗಳಷ್ಟು ತಾವು ಖರ್ಚು ಮಾಡಬೇಕಾಗಿ ಬರುತ್ತದೆ. 510 ಕೋಟಿ 5 ಲಕ್ಷ ರೂಪಾಯಿಗಳಷ್ಟು ತಾವು ಖರ್ಚು ಮಾಡಬೇಕಾಗಿ ಬರುತ್ತದೆ. 510 ಕೋಟಿ 5 ಲಕ್ಷ ಖರ್ಚು ಮಾಡಿ ಇದರಲ್ಲಿ 188 ಕೋಟಿಯಷ್ಟನ್ನು ಮೇಜರು ಇರಿಗೇಷನ್ನು ಬಾಬಿಗಾಗಿ 60 ಕೋಟಿಯಷ್ಟು ಮೈನರು ಇರಿಗೇಷನ್ನು ಬಾಬಿಗಾಗಿ ಖರ್ಚು ಮಾಡಬೇಕಾಗಿ ಬರುತ್ತದೆ. ಡೆವಲಪ್‌ಮೆಂಟು ಲೋನು ಅನ್ ಮೇಜರ್ ಪ್ರಾಜೆಕ್ಟ್ಸಿಗಾಗಿ 25 ಕೋಟಿ ರೂಪಾಯಿಗಳು ರ್ಯಾಂಡು ರೆಕ್ಲಮೆಷನ್ನಿಗಾಗಿ 20 ಕೋಟಿ ರೂಪಾಯಿಗಳು, ಸಾಯಿಲ್ ಕನ್‌ಸರ್‌ವೇಷನ್‌ಗಾಗಿ 15 ಕೋಟಿ, ರ್ಯಾಂಡು ಫ್ಲಾಡ್ ಪ್ರೊಟೆಕ್ಷನ್ನಿಗಾಗಿ 10 ಕೋಟಿ, ಇಂಪ್ರೂವ್ಡ್ ಸೀಡ್ಸ್‌ಗಳಿಗಾಗಿ 1.5 ಕೋಟಿ ಡಿಸ್ಟ್ರಿಬ್ಯೂಷನ್ ಆಫ್ ಫರ್ಟಿಲೈಸರಿಗಾಗಿ 3 ಕೋಟಿ, ಅಗ್ರಿಕರ್ಚರಲ್ ರೀಸರ್ಚ್ ಎಜುಕೇಷನ್ ಹಾಗೂ ಎಕ್ಸ್‌ಟೆನ್‌ಷನ್ ಬಾಬಿಗಾಗಿ 8 ಕೋಟಿ ವೇರ್‌ಹೌಸಿಂಗ್‌ಗಾಗಿ ಮಾರ್ಕೆಟಿಂಗ್ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟಾಗಿ 20 ಕೋಟಿ ಹೀಗೆ ತಾವು ಖರ್ಚು ಮಾಡಿದರೆ 1975ರಲ್ಲಿ ಎಂದರೆ, ಐದನೇ ಯೋಜನೆಯಲ್ಲಿ ಕಾಲಿಡುವ ವೇಳೆಗೆ ಮೈಸೂರು ರಾಜ್ಯದಲ್ಲಿ ನೀವು ಯಾವ ರೀತಿಯಾದ ಪ್ಲಾನಿಂಗನ್ನು ಮಾಡಿದ ಸಾಧನೆಯಾಗುವುದಿಲ್ಲ. ಮತ್ತು ನೀವು ವ್ಯವಸಾಯ ಕ್ಷೇತ್ರದಲ್ಲಿ ಇರಿಗೇಷನ್ನಿನೊಳಗೆ, ರ್ಯಾಂಡು ರೆಕ್ಲಮೇಷನ್ನಿನೊಳಗೆ ಸಾಯಿಲ್ ಕನ್‌ಸರ್‌ವೇಷನ್‌ನೊಳಗೆ ಏನನ್ನು ಸಾಧನೆ ಮಾಡಿದಿರಿ ಮತ್ತು ಮೈಸೂರು ರಾಜ್ಯ ಇದರಿಂದ ಸ್ವಲ್ಪವಾದರೂ ಮುಂದುವರಿಯುವಂತೆ ಮಾಡಲು ಸಾಧ್ಯವಾಗುತ್ತದೆಯೇ ! ಈಗ ನೀವು ಇಲ್ಲಿ 530 ಕೋಟಿಯಷ್ಟು ಪ್ಲಾನು ಮಾಡಬೇಕೆಂದು ತಂದಿದ್ದೀರಿ. ಇದಕ್ಕೆಲ್ಲಾ ಹಣ ಎಲ್ಲಿಂದ ತರಬೇಕೆಂದು ಕೇಳಬಹುದು. ನನಗೆ ಅನಿಸುವುದು ಈಗ ನಮ್ಮ ರಾಜ್ಯಕ್ಕೆ ಬರಬೇಕಾದ ಹಣವನ್ನು ಸರಿಯಾಗಿ ವಸೂಲು ಮಾಡಿದ್ದರೆ ಇಲ್ಲಿ ನೀವು ನಿಮ್ಮ ಪ್ಲಾನನ್ನು 750 ಕೋಟಿಯವರೆಗೆ ಏರಿಸುವುದಕ್ಕೆ ಸಾಧ್ಯವಾಗಿತ್ತು. ಇವೊತ್ತಿನ ದಿವಸ ನೀವು ತೆರಿಗೆಗಳನ್ನು ಹೊರಿಸಿರತಕ್ಕ ಬಾಬುಗಳಿಂದ ಸರಕಾರಕ್ಕೆ ಸಾರ್ವಜನಿಕರಿಂದ ನುಮಾರು 25-30 ಕೋಟಿಯಷ್ಟು ಬಾಕಿ ಬರಬೇಕಾಗಿದೆ. ಇದನ್ನು ವಸೂಲು ಮಾಡಲು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ! ಈಗ ಎಕ್ಸ್‌ಪೆಂಡಿಚರು ಟ್ಯಾಕ್ಸ್ ಎಂದು ವಸೂಲು ಮಾಡಬೇಕೆಂದು ಹಾಕಿದ್ದುದರಲ್ಲಿ ಇವೊತ್ತು 40 ರಿಂದ 50 ಸಾವಿರ ರೂಪಾಯಿಗಳವರೆಗೆ ವಿನಾಯಿತಿ ತೋರಿಸಬೇಕೆಂದು ಮಾಡಿದ್ದೀರಿ. ಪೊಪಲಗೆ ಈ ಎಕ್ಸ್‌ಂಪ್ಷನ್ನು ಲಿಮಿಟ್ಟು ನುಮಾರು10-15 ಸಾವಿರದವರೆಗೆ ಮಾತ್ರ ಇತ್ತು. ಈಗ ವಿತಕ್ಕಾಗಿ ಇಂತಹ ದೊಡ್ಡ ಶ್ರೀಮಂತರ ಮೇಲೆ 50 ಸಾವಿರದವರೆಗೆ ಎಕ್ಸ್‌ಂಪ್ಷನ್ನು ಲಿಮಿಟ್ಟು ಎಕ್ಸ್‌ಪೆಂಡಿಚರ್ ಟ್ಯಾಕ್ಸ್‌ನಲ್ಲಿ ಇರಬೇಕೆಂದು ಮಾಡಿದ್ದೀರಿ ! ಹೀಗೆ ಮಾಡದೇ ಇದ್ದಿದ್ದರೆ ನಿಮ್ಮ ಇವೊತ್ತಿನ ಪ್ಲಾನ್‌ನನ್ನು ಇನ್ನೂ ನೂರು ಅಥವಾ 150 ಕೋಟಿಯವರೆಗೆ ಹೆಚ್ಚಿಸಿಕೊಳ್ಳಲು ಅವಕಾಶವಾಗುತ್ತಿತ್ತು. ತಮಗೆ ಇವರು ಇಷ್ಟಬಂದವರು, ಇವರು ಬಂಧುಗಳು, ಇವರು ಮಿತ್ರರು, ಎಂದು ಇಂತಹವರ ಮೇಲೆ ಟ್ಯಾಕ್ಸ್ ಹಾಕಬಾರದು ಇಂತಹವರಿಗೆ ವಿನಾಯಿತಿ ಕೊಡಬೇಕೆಂದು ಮಾಡಿದರೆ ನಿಮಗೆ ಯಾವ ಹಣವನ್ನೂ ವಸೂಲು ಮಾಡುವುದಕ್ಕೂ ಸಾಧ್ಯವಿಲ್ಲ. ಅದರಿಂದ ನಿಮ್ಮ ಪ್ಲಾನಿಂಗು ಮಾಡಿರುವ ಅಧಿಕಾರಿಗಳ ಪ್ಲಾನಿನಲ್ಲೇ ಡಿಫಕ್ಟ್ಸು ಇದೆ ಎಂದು ಹೇಳಬೇಕಾಗಿ ಬಂದಿದೆ. ನಾನಾದರೂ ಹೇಳುತ್ತೇನೆ, ಇದೇ ರೀತಿ ತಾವು ಪ್ಲಾನು ಮಾಡುತ್ತಾ ಮುಂದೆ ನೀವು ಐದನೇ ಪ್ಲಾನು ಮಾಡಿದರೂ ಕೂಡ ಈಗತಾನೇ ನಮ್ಮ ಮಾನ್ಯ ಸದಸ್ಯರಾದ ಅಣ್ಣಾರಾಯರು ಹೇಳಿದ ಹಾಗೆ ಇನ್ನು 15 ವರ್ಷಗಳಾದರೂ ಸ್ವಪರಿಪೂರ್ಣತೆಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ ಮತ್ತು ನೆರೆ ರಾಜ್ಯಕ್ಕೆ ಭಿಕ್ಷಕ್ಕೆ ಹೋಗುವುದು ತಪ್ಪುವ ಹಾಗಿಲ್ಲ. ಮೈಸೂರು ಸರಕಾರ ಇನ್ನು ಹೆಚ್ಚು ತೆರಿಗೆ ಹೊರೆಯನ್ನು ಜನರ ಮೇಲೆ ಹೊರಿಸುವುದಕ್ಕೆ ಆಗುವುದಿಲ್ಲ. ಕೇಂದ್ರ ಸರಕಾರದವರು ಎಕ್ಸ್‌ಪೆಂಡಿಚರು ಟ್ಯಾಕ್ಸ್‌ನ್ನು ಮೊದಲು ಹತ್ತು ಸಾವಿರದವರೆಗೆ ಮಾತ್ರ ಸೀಲಿಂಗೂ ಲಿಮಿಟ್ ಇದ್ದುದನ್ನು ಇಂದು 33,000 ದವರಗೆ ಟ್ಯಾಕ್ಸ್ ಲಿಮಿಟ್‌ಗೆ ವಿನಾಯಿತಿ ಕೊಡಬೇಕೆಂದು ಮಾಡದರೆ ಸರಕ್ಕಾರಕ್ಕೆ ಬರುವ ಹಣ ಸರಿಯಾಗಿ ಬರುವುದಕ್ಕೆ ಆಗುತ್ತದೆಯೇ ! ಯೋಜನೆಗಾಗಿ ಖರ್ಚು ಮಾಡಬೇಕೆಂದು ಹೊರಟಿರುವಾಗ ನೀವು ಯಾರಿಂದ ದುಡ್ಡನ್ನು ತೆಗೆದುಕೊಂಡುಬರುತ್ತೀರಿ ? ಒಂದು ಲಕ್ಷ,

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎರಡು ಲಕ್ಷ ರೂಪಾಯಿಗಳ ಆದಾಯವನ್ನು ಸಂವಾದನೆ ಮಾಡಿಕೊಂಡು ಸೊಗಸಾದ ಕಾರುಗಳಲ್ಲಿ ಓಡಾಡುತ್ತಿರುವ ಜನರನ್ನು ಹಾಗೂ ಮೋಜಿನಿಂದ ಜೀವನ ಮಾಡುತ್ತಿರುವ ಶ್ರೀಮಂತರನ್ನು ತೆರಿಗೆ ಕೊಡುವುದು ಬೇಡ ಎಂದು ಅವರಿಗೇಕೆ ಏನಾಯತಿ ತೋರಿನಲು ಹೋಗುತ್ತೀರಿ ? ಇಲ್ಲಯವರೆಗೂ ಸಾವಿರಾರು ಗುಟ್ಟಲೆ ಹಣವನ್ನು ಬಾಕಿ ಇಟ್ಟುಕೊಂಡಿರುವವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ ಅವರಿಂದ ಹಣವನ್ನು ಸರಿಯಾಗಿ ವಸೂಲು ಮಾಡುತ್ತಿಲ್ಲ. ಸಣ್ಣಪುಟ್ಟ ರಾಜ್ಯ ಸರಕಾರಗಳು ಬೇರೆ ತೆರಿಗೆಯನ್ನು ಈಗ ಹಾಕಲು ಆಗುತ್ತಿಲ್ಲ. ಕೇಂದ್ರದವರು ಈಗಿದ್ದ ಎಕ್ಸ್‌ಪೆಂಡಿಚರು ಟ್ಯಾಕ್ಸನ್ನು ವಸೂಲು ಮಾಡುವ ಸೀಲಿಂಗ್ ಲಿಮಿಟ್ಟನ್ನು ಹಿಂದೆ ಇದ್ದುದಕ್ಕಿಂತ ಈಗ ಪುನಃ ಹೆಚ್ಚು ಮಾಡಿದರೆ ಇದರಿಂದ ದೇಶದ ಪ್ರಗತಿ ಸಾಧಿಸುವುದಕ್ಕೆ ಆಗುವುದಿಲ್ಲ. ಮತ್ತು ಬೇರೆ ರೀತಿಯಿಂದ ಕೂಡ ಹಣವನ್ನು ಕೂಡಿಸುವುದಕ್ಕೆ ಸಾಧ್ಯವಿಲ್ಲ. ನಮಗೆ ಬೇಕಾದ ಹಣಕ್ಕೆ ಯಾವ ರೀತಿಯಾಗಿ ಟ್ಯಾಕ್ಸ್‌ನ್ನೂ ಹಾಕದೆ ಹೋದರೆ ನೀವು ನಿಮ್ಮ ಪ್ಲಾನನ್ನು ಕಾರ್ಯಗತ ಮಾಡುವುದಾದರೂ ಹೇಗೆ ? ಬಾಕಿ ಬರುವ ಹಣವನ್ನೂ ವಸೂಲ ಮಾಡದೇ ಹೋದರೆ ನಿಮಗೆ ಹಣ ತಾನೇ ಹೇಗೆ ಬರುತ್ತದೆ ! ನಾನು ಈ ಸಂದರ್ಭದಲ್ಲಿ ಪ್ರೊಹಿಬಿಷನ್ ವಿಚಾರ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೆಂಡವನ್ನು ಮಾರಿ ಆ ದುಡ್ಡನ್ನು ಹಂಚಬೇಕು ಎನ್ನುವ ಹವ್ಯಾಸಕ್ಕೆ ಹೋಗುವುದಿಲ್ಲ. ನಿಮ್ಮ ಊರಿನಲ್ಲಿ ಹೈಸ್ಕೂಲಿಗಾಗಿ ಕಟ್ಟಡ ಬೇಕು, ಮೆಡಿಕಲ್ ಕಾಲೇಜಿನ ಕಟ್ಟಡಕ್ಕಾಗಿ ದುಡ್ಡು ಬೇಕು ಎಂದು ಕೇಳುವ ಹವ್ಯಾಸಕ್ಕೆ ಹೋಗುವುದಿಲ್ಲ. ರಾಜ್ಯದ ಸರ್ವತೋಮುಖವಾದ ಅಭಿವೃದ್ಧಿ ನಿಮಗೆ ನಾಲ್ಕನೇ ಯೋಜನೆಯಲ್ಲಿ ಆಗಬೇಕಾದರೆ ಯಾವ ಯಾವ ರೀತಿಯಿಂದ ಯಾವ ಯಾವ ಬಾಬುಗಳಲ್ಲಿ ಹಣ ಪಡೆಯಲು ಪ್ರಯತ್ನ ಮಾಡುತ್ತೀರಿ ಎಂದು ನಾನು ತಮ್ಮಲ್ಲಿ ಕೇಳಬೇಕಾಗಿದೆ. ತಾವು ಈಗಿರುವ ಪ್ರಕಾರ ಆಹಾರ ಎಷ್ಟು ಬೇಕು ಎಂದು ರೆಕ್ಕ ಮಾಡಿದರೆ, ಭೂಮಿ ಎಷ್ಟು ಎಕರೆಗಳಷ್ಟು ರೆಕ್ಲಮೇಷನ್ನು ಮಾಡಬೇಕು ಎಂದು ರೆಕ್ಕ ಮಾಡಿದರೆ, ನಿಮಗೆ ಸುಮಾರು 35 ಲಕ್ಷ ಎಕರೆಗಳಷ್ಟು ಮಾಡಲು ಸುಮಾರು 25 ಕೋಟಿಯಷ್ಟು ಹಣ ಖರ್ಚು ಮಾಡಬೇಕಾಗಿ ಬರುತ್ತದೆ. ಹಾಗೆ ಮಾಡಿದರೆ ಐದು ಲಕ್ಷ ಎಕರೆಗಳಲ್ಲಿ ಆಹಾರಧಾನ್ಯ ಬೆಳೆಯಬಹುದು, ಐದು ಲಕ್ಷ ಎಕರೆಗಳಲ್ಲಿ ಪರ್‌ನನ್‌ಗಳನ್ನು ಬೆಳೆಯಬಹುದು, ಆರು ಲಕ್ಷ ಎಕರೆಗಳಲ್ಲಿ ಕಾಟನ್ ಬೆಳೆಯಬಹುದು, ಎಂಟು ಲಕ್ಷ ಎಕರೆಗಳಲ್ಲಿ ಒಳ್ಳೆಯ ಎಣ್ಣೆಯ ಬೀಜಗಳನ್ನು ಬೆಳೆಯಬಹುದು, ಇನ್ನು ಆರು ಲಕ್ಷ ಎಕರೆಗಳಲ್ಲಿ Spices, fruits and Vegetables ಮತ್ತು ಜೊಬ್ಯಾಕೋ ಬೆಳೆಯಬಹುದು, ಇದಕ್ಕೋಸ್ಕರ ಒದಗಿಸಿರತಕ್ಕ ಹಣದಲ್ಲಿ ಮೈಸೂರು ಸರಕಾರದವರು ಇವೊತ್ತು ಸುಮಾರು 30—33 ಲಕ್ಷ ಎಕರೆಗಳಷ್ಟು ಬೀಳು ಬಿದ್ದಿರುವ ಲ್ಯಾಂಡನ್ನು ರೆಕ್ಲಮೇಷನ್ನಿಗೆ ತರಬಹುದು. ಇಷ್ಟು ಹಣವನ್ನು ರೆಕ್ಲಮೇಷನ್ ಮಾಡಲು ಇವೊತ್ತು ಪ್ಲಾನಿನಲ್ಲಿ ಒದಗಿಸಿರುವಂತೆ ಹಣ ಬರಲು ಏನು ಮಾಡಬೇಕು ? ಇವೊತ್ತು ಮೈನರ್ ಇರಿಗೇಷನ್ನಿಗಾಗಿ 20 ಲಕ್ಷ ಬೇಕು ಮೇಜರ್ ಇರಿಗೇಷನ್ನಿಗಾಗಿ 88 ಲಕ್ಷ ಬೇಕು. ಇಷ್ಟು ಲಕ್ಷ ಇಷ್ಟು ರೂಪಾಯಿಗಳನ್ನು ಇನ್ನೈದು ವರ್ಷಗಳಲ್ಲಿ ಸಾಧನೆ ಮಾಡಲು ಏನೇನು ಪ್ರಯತ್ನಗಳನ್ನು ಮಾಡಿದ್ದೀರಿ ! ಅಲ್ಲದೆ ಆಗಲೇ ಹೇಳಿದ ಹಾಗೆ ನಮ್ಮಲ್ಲರುವ ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳ ಬೇಕಾದರೆ ಮತ್ತು ಆದರಿಂದ ವಿದ್ಯುಚ್ಛಕ್ತಿ ಪಡೆಯಬೇಕಾದರೆ ಏನು ಮಾಡುತ್ತೀರಿ ! ಈಗ ನೀವು ಮಾಡುತ್ತಿರುವಂತೆ ಮಾಡಿದರೆ ನೀವು ಆ ಮಟ್ಟಕ್ಕೆ ಬರುವುದು ಸಾಧ್ಯವಿಲ್ಲ. ಹಾಗಾದರೆ ಮೈಸೂರು ಸರಕಾರ ಈಗ ಮಾಡಿರುವ ಪ್ಲಾನನ್ನು ಯಾವ ರೀತಿಯಾಗಿ ಇಂಪ್ಲಿಮೆಂಟು ಮಾಡಲು ಪ್ರಯತ್ನ ಮಾಡುತ್ತೀರಿ ! ಮೈಸೂರು ರಾಜ್ಯದಲ್ಲಿ ಪ್ಲಾನ್ ಮಾಡುವಾಗ ಮ್ಯಾನ್‌ಪವರ್ ಹೇಗೆ ಯುಟಿಲೈಸ್ ಮಾಡಿಕೊಂಡಿದ್ದಾರೆ ಅಂತ ಹೇಳಿ ಅವರು 206—207ನೇ ಪುಟದಲ್ಲಿ ಹೇಳಿದ್ದಾರೆ.

Mr. SPEAKER.—The Member may cut down all that he has to say in writing and I will pass it on to the Hon'ble Minister to take note. After all, speeches are not intended for any other purpose than to guide the Government. Members do not adjust themselves and at the last moment I do not want to hurt anybody's feelings.

Sri C. J. MUCKANNAPPA.—See, Sir, how the other districts are undeveloped. You will see from Table 92 that the majority of the districts are having a *per capita* income below 178. Why are those districts neglected ?

Mr. SPEAKER.—That is past and I am concerned with the immediate present.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಮೊದಲೇ ಆರಂಭ ಮಾಡಿಕೊಂಡಿದ್ದೇನೆ. ನಾನು ಸರ್ಕಾರ ದವರನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆ ರೀತಿ ಮಾಡುವುದರಿಂದ We are beating the dead horse, ಇದನೆರ್ನಾ ಗಮನದಲ್ಲಿಟ್ಟುಕೊಂಡು ತಾವು ಈ ಸಭೆಯ ಪರವಾಗಿ, ಈ ರಾಜ್ಯದ ಪರವಾಗಿ ತಮ್ಮ ಶಕ್ತಿ ಮೀರಿ ಕೆಲಸ ಮಾಡಿ ನಮಗೆ ಬರಬೇಕಾದ ಹಣವನ್ನು ತೆಗೆದುಕೊಂಡು ಕಾರ್ಯ ಸಾಧನೆ ಮಾಡಿ ಎಂದು ಹೇಳುವುದಕ್ಕೆ ನಾನು ಇದನ್ನೆರ್ನಾ ಹೇಳುತ್ತಾ ಇದ್ದೇನೆ. ಲೋಕನಾಥನ್ ಕಮಿಟಿ ರಿಪೋರ್ಟ್ ಸರ್ಕಾರದ ಮುಂದೆ ಇದೆ. ಅದರಲ್ಲಿ ಸರ್ಕಾರದವರು ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿ ಏನನ್ನು ಅಚೀವ್ ಮಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ. ಅದೇನೆಂದರೆ : ನಮ್ಮ ಸರ್ಕಾರ ದವರು ಅದರಲ್ಲಿ ಸಾಧನೆ ಮಾಡಿರುವುದು ಅತಿ ಅಲ್ಪ ಅಂತ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

Mr. SPEAKER.—He may say that what they have done upto now and what they want to do in the Fourth Plan, is very insignificant and that Government should come up to the level, indicated in the Logananthan's Report.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—Housing in the Country, ಇದಕ್ಕೆ ತಾವು ಎಷ್ಟು ಹಣ ಒದಗಿಸಿದ್ದೀರಿ ! ನಿನ್ನೆ ದಿನ ಶ್ರೀಮಾನ್ ಅರಸ್ ಅವರು ಹೇಳುತ್ತಾ ಇದ್ದರು, ಈ ರಾಜ್ಯದಲ್ಲಿ ಎಲ್ಲರಿಗೂ ಮನೆ ಕಟ್ಟುವುದಕ್ಕಾಗುವುದಿಲ್ಲ ಎಂದು. ರಷ್ಯಾದಲ್ಲಿ 5 ವರ್ಷದಲ್ಲಿ 50 ಮಿಲಿಯನ್ ಜನರಿಗೆ ಕಾನ್‌ಕ್ರೀಟ್ ಷೆಲ್ಟರ್ಸ್‌ನ್ನು ಕಟ್ಟಿಸಿಕೊಟ್ಟಿದ್ದಾರೆ. ರಷ್ಯಾ, ಅಮೆರಿಕಾ, ಇಂಗ್ಲೆಂಡ್ ಈ ದೇಶಗಳೊಡನೆ ನಾವು ಹೊಲಸಿ ನೋಡುವುದು ಬೇಡಿ, ಕೊನೇ ಪಕ್ಷ 5 ಲಕ್ಷ ಜನರಿಗಾದರೂ ಮೈಸೂರು ರಾಜ್ಯದಲ್ಲಿ 5 ವರ್ಷದಲ್ಲಿ ಮನೆಕಟ್ಟುವುದಕ್ಕೆ ಏಕೆ ಏರ್ಪಾಡು ಮಾಡಬಾರದಾಗಿತ್ತು ? 3 ಕೋಟಿ 75 ಲಕ್ಷ ರೂಪಾಯಿಗಳನ್ನು ಹರಿಜನ ಗಿರಿಜನರಿಗಾಗಿ ಇಟ್ಟಿದ್ದೀರಿ. ಆ ದುಡ್ಡನ್ನಾದರೂ ಖರ್ಚುಮಾಡಿ ಯಾವ ಟಾರ್ಗೆಟ್‌ನ್ನು ಅಚೀವ್ ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ನಡೆಸಿದ್ದೀರೇನು ! 3ನೇ ಪ್ಲಾನ್‌ನಲ್ಲಿ ಹೌಸಿಂಗ್ ಸೆಕ್ಟರ್‌ನಲ್ಲಿ, ಲೋ ಇನ್‌ಕಂ ಹೌಸಿಂಗ್ ಬಗ್ಗೆ ನಿಮ್ಮ ಟಾರ್ಗೆಟ್‌ನ್ನು ಅಚೀವ್ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಶೇಕಡ 10 ಜನಕ್ಕೂ ಕೂಡ ಮನೆ ಗಳನ್ನು ಒದಗಿಸುವುದಕ್ಕೆ ನೀವು ಅಸಮರ್ಥರಾಗಿದ್ದೀರಿ. ತಾವು ಕೇಂದ್ರದ ಮುಂದೆ ಹೋದಾಗ ಮನಸ್ಸು ಮಾಡಿಕೊಂಡು ಹೋಗಬೇಕು ಕೊನೆ ಪಕ್ಷ ಈ ಸೆಕ್ಟರ್ಸ್‌ನಲ್ಲಿ 20 ಪರ್ಸೆಂಟ್ ಆದೂರ ಅಚೀವ್ ಮಾಡಲೇಬೇಕು ಎಂದು ದೃಢ ನಿರ್ಧಾರ ಮಾಡಿಕೊಂಡು ಹೋದರೆ ನಿಮ್ಮ ಉದ್ದೇಶವನ್ನು ನೆರವೇ ರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ ಎಂದು ಹೆಳ ಬಯಸುತ್ತೇನೆ.

Large and medium industries ಇದು ಒಂದು ಕಥೆಯಾಗಿದೆ. ಸರ್ಕಾರ ಈ ವಿಷಯ ದಲ್ಲಿ ಎಷ್ಟು ಉದಾಸೀನತೆಯಿಂದ ಕೂಡಿದೆ ಎಂಬುದರ ಬಗ್ಗೆ ತಮ್ಮ ಮುಂದೆ ಸ್ವಲ್ಪ ಬಿನ್ನಪ ಮಾಡಿ ಕೊಳ್ಳಬೇಕೆಂದು ಇಚ್ಛೆ ಇದೆ. ತುಮಕೂರು, ಬಿಜಾಪುರ, ರಾಯಚೂರು ಈ ಪ್ರದೇಶಗಳಲ್ಲಿ ಕೋ ಆಪರೇಟೀವ್ ಸೆಕ್ಟರ್‌ನಲ್ಲಿ ಇಂಡಸ್ಟ್ರೀಸ್ ತೆಗೆದಿದ್ದೇವೆ ಎಂದು ಬರೆದ್ದೀರಲ್ಲಾ, ತುಮಕೂರಿನಲ್ಲಿ ಎಷ್ಟು ಎಕರೆ ಭೂಮಿಯಲ್ಲಿ ಕಾಟನ್ ಬೆಳೆಯುತ್ತದೆ ! ಎಷ್ಟು ಲಕ್ಷ ಬೇಲು ಕಾಟನ್ ಉತ್ಪನ್ನವಾಗುತ್ತದೆ ! ಅಲ್ಲಿ ತೆರೆದಿರತಕ್ಕ ಕೋ-ಆಪರೇಟೀವ್ ಸೊಸೈಟಿ ಯಾವುದು ? ಬಟ್ಟೆ ತಯಾರು ಮಾಡತಕ್ಕ ಒಂದು ಮಿಲ್ ಕೂಡ ಅಲ್ಲಿ ಇರುವುದು ನಾನಂತೂ ಒಂದನ್ನೂ ಕೂಡ ನೋಡಿಲ್ಲ. ಅಂತೂ ಈ ಪುಸ್ತಕದಲ್ಲಿ ಅದನ್ನು ಕೊಟ್ಟಿದ್ದೀರಿ, ಇದು ಎಲ್ಲಿಂದ ಬಂತು ! ಏನನ್ನೂ ಮಾಡದೇ ಮಾಡಿದ್ದೇವೆ ಎಂದು ಬರೆಯುವು ದಾದರೆ ಈ ತಮ್ಮ ಪುಸ್ತಕಕ್ಕೆ ಬೆಲೆಯಾದರೂ ಏನು ! ಬಾಗಲಕೋಟೆಯಲ್ಲಿ, ಬಿಜಾಪುರದಲ್ಲಿ, ಬೆಳಗಾಂನಲ್ಲಿ, ರಾಯಚೂರಿನಲ್ಲಿ ಮಾಡಿರಬಹುದು, ತುಮಕೂರಿನಲ್ಲಿ ಮಾಡಿರುವುದು ಯಾವುದೂ ಕೂಡ ನಮ್ಮ ಕಣ್ಣಿಗೆ ಬಿದ್ದಿಲ್ಲ. ಇದಕ್ಕೆ ತಾವು 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ, ಇಷ್ಟು ಹಣ ಖರ್ಚು ಮಾಡಿದ್ದೇ ಆದರೆ ಇದರ ಷೇರ್‌ಹೋಲ್ಡರ್ಸ್ ಯಾರು ! ಡೈರೆಕ್ಟರುಗಳು ಯಾರು ! ಇಂತಹ ಪ್ಲಾನ್‌ಗಳನ್ನು ಮಾಡುವುದಾದರೆ ನಿಜವಾಗಿಯೂ ನಮಗೆ ಅನಿಸುತ್ತದೆ, ದೇವರು ತಮಗೆ ಒಳ್ಳೆಯ ಮನಸ್ಸು ಕೊಡಲಿ ಎಂದು.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಪ್ಲಾನ್ ಸರ್ವಿಸ್, ಹೆರ್ತ್ ಇದರಿಂದ ಲಾಭ ನಿರೀಕ್ಷಣೆ ಮಾಡುವುದಿಲ್ಲ, ಇವತ್ತಿನ ದಿವಸ ವಿದ್ಯಾಭ್ಯಾಸಕ್ಕೆ ಎಷ್ಟು ಹಣ ಖರ್ಚು ಮಾಡುತ್ತಾ ಇದ್ದೀರಿ ಎಂದರೆ 41 ಕೋಟಿ 30 ಲಕ್ಷ ರೂಪಾಯಿ. ಇದರ ಸಿ

(ಶ್ರೀ ಸಿ. ಜೆ. ಮುಕ್ಕಣ್ಣಶೆಟ್ಟಿ)

ಓವರ್ ಎಷ್ಟು ಎಂದರೆ 25 ಕೋಟಿ 79 ಲಕ್ಷ. ಇಷ್ಟು ಹಣ ಇರುವಾಗ ಮಕ್ಕಳಿಗೆ ಬೇಕಾದ ಶಾಲಾ ಕಟ್ಟಡಗಳನ್ನು ಕಟ್ಟಿಸಿಯುವುದು ಎಷ್ಟು? ನಿಜವಾಗಿಯೂ ಇದು ಯಾವ ರಾಜ್ಯಕ್ಕೂ ಕೂಡ ಕೀರ್ತಿ ತರುವುದು ಅಲ್ಲ. ಎಂಟನೆ ಮಗ್ಗಿ, ಒಂಭತ್ತರ ಮಗ್ಗಿ ಬರದೇ ಇರತಕ್ಕ ಮಕ್ಕಳು, ಎಸ್.ಎಸ್.ಎಲ್.ಸಿ. ಪಾಸ್ ಮಾಡಿ, 4 ಸಾವಿರ ಜನ ಪಾಲಿಟೆಕ್ನೀಕ್‌ನಲ್ಲಿ, 3 ಸಾವಿರ ಜನ ಎಂಜಿನಿಯರಿಂಗ್ ಕಾಲೇಜಿನಲ್ಲಿ 1,200 ಜನ ಮೆಡಿಕಲ್ ಕಾಲೇಜಿನಲ್ಲಿ ಓದಿದ ಗ್ರಾಜ್ಯುಯೇಟ್ಸ್‌ನ್ನು ನಿರ್ಮಾಣ ಮಾಡುತ್ತಾ ಇದ್ದೀರಿ. ಅವರಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಅಂತಹ ಮಣ್ಣಿನ ಮಡಕೆಗಳನ್ನು ತಯಾರು ಮಾಡುವುದಕ್ಕೆ 41 ಕೋಟಿ ರೂಪಾಯಿಗಳನ್ನು ಈ ಪ್ಲಾನ್‌ನಲ್ಲಿ ಇಟ್ಟು ಏನನ್ನು ಸಾಧನೆ ಮಾಡಬೇಕೆಂದು ಇದ್ದೀರಿ? ಆದ್ದರಿಂದ ಇದರಲ್ಲಿ 21 ಕೋಟಿ ರೂಪಾಯಿಗಳನ್ನಾದರೂ ಇರಿಗೇಷನ್‌ಗೆ ತೆಗೆದಿಡುವುದು ಒಳ್ಳೆಯದು. ಆ ರೀತಿ ತೆಗೆದಿಟ್ಟು ಅಗ್ರಿಕಲ್ಚರ್ ಡೆವಲಪ್‌ಮೆಂಟು, ಪುಡ್ ಪ್ರೊಡಕ್ಷನ್ ಮಾಡುವುದು ಬಹಳ ಉತ್ಪಾದಕವಾದ ಕೆಲಸ ಎಂದು ಹೇಳಿ ಇಷ್ಟು ವೇಳೆ ತೆಗೆದು ಕೊಂಡದ್ದಕ್ಕಾಗಿ ಅಧ್ಯಕ್ಷರನ್ನು ಕ್ಷಮಾಪಣೆ ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†ಶ್ರೀ ವೀರೇಂದ್ರ ಪಾಟೀಲ್ (ರೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಿನ್ನೆ ಮಧ್ಯಾಹ್ನದಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಈ ಕರಡಿನಮೇಲೆ ಅನೇಕ ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ ಮತ್ತು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರನ್ನೂ ನಾನು ಅಭಿನಂದಿಸಬೇಕಾಗಿದೆ. ಈ ನಾಲ್ಕನೆಯ ಯೋಜನೆಯ ಬಗ್ಗೆ ಚರ್ಚೆ ಮಾಡುವಾಗ ಮುಖ್ಯವಾಗಿ ಎರಡು ಮೂರು ವಿಷಯಗಳ ಕಡೆ ಹೆಚ್ಚಾಗಿ ಗಮನಕೊಡಬೇಕು. ಮೊದಲನೆಯದಾಗಿ ಈ ಯೋಜನೆ ಗಾತ್ರ ಎಷ್ಟುಮಟ್ಟಿಗಿರಬೇಕೆಂಬುದು ಬಹಳ ಮುಖ್ಯವಾದುದು. ಮೂರನೆ ಯೋಜನೆಯು ಗಾತ್ರ 250 ಕೋಟಿ ರೂಪಾಯಿಗಳವರೆಗಿತ್ತು. ನಾಲ್ಕನೆ ಯೋಜನೆ ಗಾತ್ರ 500 ಕೋಟಿ ಇರಬೇಕೇ, 530 ಕೋಟಿ ಇರಬೇಕೇ, 750 ಕೋಟಿ ಇರಬೇಕೇ ಎಂಬುದು ಬಹಳ ಮುಖ್ಯವಾದುದು. ಒಂದು ಸಲ ನಾವು ಈ ಒಂದು ಗಾತ್ರವನ್ನು ನಿರ್ಣಯ ಮಾಡಿದಮೇಲೆ ಪ್ಲಾನಿಂಗ್ ಕಮಿಷನ್ ಮತ್ತೆ ಒತ್ತಾಯಮಾಡಲು ಇದನ್ನು ಯಾವರೀತಿಯಿಂದ ಯಾವ ಯಾವ ಕೆಲಸಗಳಿಗೆ ಯಾವ ಯಾವ ಬಾಬುಗಳಿಗೆ ಖರ್ಚು ಮಾಡಬೇಕೆಂದು ನಾವೂ ನೀವೂ ಕುಳಿತು ನಿರ್ಣಯಮಾಡಿ ಪ್ಲಾನಿಂಗ್ ಕಮಿಷನ್ ಮುಂದೆ ಇಟ್ಟು ಅದರ ಅನುಮತಿ ಪಡೆದು ಅದರ ಸಲಹೆಯಂತೆ ಖರ್ಚುಮಾಡಲು ಸಾಧ್ಯವಾಗುತ್ತದೆ, ಇದು ಬಹಳ ಮುಖ್ಯವಾದುದು. ಅಲ್ಲಿಂದ ಒಂದು ಸಲ ಪ್ಲಾನಿಂಗ್ ಕಮಿಷನ್ ಯೋಜನೆಯು ಗಾತ್ರ ಇಷ್ಟುಮಟ್ಟಿಗಿರಬೇಕೆಂದು ಹೇಳಿದಮೇಲೆ ಅಷ್ಟುಮಟ್ಟಿಗಿರಬೇಕಾದರೆ ಕೇಂದ್ರ ಸರಕಾರದ ಸಹಾಯವೆಷ್ಟಿರಬೇಕು, ನಾವು ನಮ್ಮ ಸಂಪತ್ತಿನಿಂದ ಎಷ್ಟು ಒದಗಿಸಬೇಕಾಗುತ್ತದೆ ಎಂಬುದು ಬಹಳ ಮುಖ್ಯವಾದ ವಿಚಾರ. ಏಕೆಂದರೆ, ಎಲ್ಲಾ ಕೇಂದ್ರದಿಂದ ಬರಲು ಸಾಧ್ಯವಿಲ್ಲ. ಆ ರೀತಿಯಿಂದ ನಾವೂ ಆಶಿಸುತ್ತಿಲ್ಲ. ನಾವು ಹಿಂದಿರಬಹುದು, ಕೆಲವರು ಮುಂದಿರಬಹುದು, ಅದು ಬೇರೆ ಪ್ರಶ್ನೆ. ಆದರೆ ಕೇಂದ್ರ ಸರಕಾರ ಒಂದು ಸ್ಟ್ಯಾಂಡರ್ಡ್ ಪ್ಯಾಟ್ರನ್ ಮಾಡಿ ಯಾವ ಯಾವ ಸಂಸ್ಥಾನಗಳಿಗೆ ಎಷ್ಟು ಸಹಾಯ ಮಾಡಬೇಕು ಎಂದು ನಿರ್ಣಯ ಮಾಡುತ್ತದೆ, ಅದರ ಜೊತೆಗೆ ನಾವೂ ನಮ್ಮ ಸಂಪನ್ಮೂಲಗಳಿಂದ ಸಾಧ್ಯವಾದಷ್ಟು ಒದಗಿಸಿಕೊಳ್ಳಲು ಪ್ರಯತ್ನಮಾಡಬೇಕು. ಇದರ ಬಗ್ಗೆ ಕೂಡ ಪ್ಲಾನಿನಮೇಲೆ ಚರ್ಚೆಮಾಡುವಾಗ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಕೇಂದ್ರ ಸರಕಾರ ನಮಗೆ ಒದಗಿಸುವ ಸಹಾಯದ ಬಗ್ಗೆ ಮತ್ತು, ನಾವು ನಮ್ಮ ಸಂಪನ್ಮೂಲಗಳಿಂದ ಒದಗಿಕೊಳ್ಳಬೇಕಾದ ಹಣದ ಬಗ್ಗೆ ನಿರ್ಣಯ ಮಾಡಿದಮೇಲೆ ಪ್ರಾಯಶಃ ಯಾವರೀತಿಯಿಂದ ಖರ್ಚುಮಾಡಬೇಕೆಂದು ಯೋಚನೆ ಮಾಡಬೇಕಾದ್ದು ಮೂರನೆಯ ಪ್ರಶ್ನೆ, ಇದು ಮಹತ್ವವುಳ್ಳದ್ದು. ನಮ್ಮ ಯೋಜನೆಯ ಗಾತ್ರ 537 ಅಥವ 750 ಕೋಟಿ ಮಾಡಿದರೆ ಕೇಂದ್ರದ ಸಹಾಯ ಯಾವರೀತಿ ಇರಬೇಕು, ಇರಿಗೇಷನ್‌ಗೆ ಪ್ರಾಶಸ್ತ್ಯ ಕೊಡಬೇಕೆ ಅಥವ ಪವರ್‌ಗೆ ಪ್ರಾಶಸ್ತ್ಯ ಕೊಡಬೇಕೆ, ವ್ಯವಸಾಯಾಭಿವೃದ್ಧಿ, ಸೋಷಿಯಲ್ ಸರ್ವಿಸ್ ಮುಂತಾದ ಬಾಬುಗಳಲ್ಲಿ ಪ್ರತಿಯೊಂದು ಸೆಕ್ಟಾರಿಗೂ ಎಷ್ಟು ಪರ್ಸೆಂಟೇಜಿರಬೇಕು ಎಂಬುದೂ ಸೇರಿ ಮೂರು ಅಂಶಗಳು ಪ್ಲಾನಿನ ಚರ್ಚೆಯಲ್ಲಿ ಬಹಳ ಮಹತ್ವವುಳ್ಳದ್ದಾಗಿವೆ. ಅನೇಕ ಸದಸ್ಯರು ಯಾರು ಇದರಮೇಲೆ ಚರ್ಚೆಮಾಡಿದ್ದಾರೆ ಅವರು ಈ ಮೂರು ವಿಷಯಗಳ ಬಗ್ಗೆ ವಿಚಾರಮಾಡಿ ಸಲಹೆ ಮಾಡಿದ್ದರೆ ಬಹುಶಃ ಈಗ ಬಂದಿರುವ ಸಲಹೆಗಳಿಗಿಂತ ಹೆಚ್ಚು ಉಪಯುಕ್ತವಾದ ಸಲಹೆ ಬರುವುದಕ್ಕೆ ಅವಕಾಶವಿತ್ತು. ಆದರೆ ಆ

ರೀತಿಯಿಂದ ಚರ್ಚೆಯಾಗಿಲ್ಲ. ಇದರ ಅರ್ಥ ಯಾರು ಮಾತನಾಡಿದರೋ ಅವರು ಬೇಕಾದ ವಿಚಾರ ಹೇಳಲಿಲ್ಲವೆಂದಲ್ಲ, ಆದರೆ ಎಷ್ಟು ಪ್ರಮಾಣದಲ್ಲಿ ನಲಹೆ ದೊರಕಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ದೊರಕಲಿಲ್ಲ. ಅನೇಕ ನಲ ಪ್ಲಾನಿನಮೇಲೆ ಚರ್ಚೆ ಬಿಟ್ಟು ಅದರ ಹೊರಗಡೆ ಬಹಳ ಮಟ್ಟಿಗೆ ಚರ್ಚೆ ಮಾಡಲು ಸಮಯ ತೆಗೆದುಕೊಂಡಿದ್ದೇವೆ. ಏನೇ ಇರಲಿ, ಈ ದಿವನ 537 ಕೋಟಿ ರೂಪಾಯಿಗಳ ಒಂದು ಕರಡು ಯೋಜನೆ ನಭೆಯ ಮುಂದಿದೆ, ಅದರಮೇಲೆ ಚರ್ಚೆಯಾಗಿದೆ. ಅನೇಕರು ಮಾತ ನಾಡುತ್ತಾ ಮೂರನೆಯ ಯೋಜನೆಗೆ ಕೇಂದ್ರ ನರಕಾರದಿಂದ ಸಾಕಾರಷ್ಟು ಪ್ರಮಾಣದಲ್ಲಿ ನಹಾಯ ಪಡೆಯಲು ನಮ್ಮ ನರಕಾರಕ್ಕೆ ಸಾಧ್ಯವಾಗಿಲ್ಲ ಎಂದು ಮುಂತಾಗಿ ಕೆಲವು ಮಾತುಗಳನ್ನು ಹೇಳಿದರು. ಈಗ ಮೆಮೊರ್ಯಾಂಡಂನಲ್ಲಿ ಹೇಳಿರುವಹಾಗೆ 250 ಕೋಟಿ ರೂಪಾಯಿಗಳ ಮೂರ ನೆಯ ಯೋಜನೆ ಇತ್ತು, ಅದರಲ್ಲಿ ಎಲ್ಲಾ ಖರ್ಚಾಗಿದೆ ಎಂದು ಹೇಳಿದರೆ ತಪ್ಪಲ್ಲ. ಇನ್ನು ಅದು ಯಾವಾಗ ಸಿದ್ಧವಾಗಿತ್ತು, ನಿರ್ಧಾರವಾಗಿತ್ತು ಎಂಬುದು ಮುಖ್ಯವಾದ ಪ್ರಶ್ನೆ. ಈಗ ಒಪ್ಪಿರುವ ಪ್ರಕಾರ 250 ಕೋಟಿಯಲ್ಲಿ ಕೇಂದ್ರ ನರಕಾರದ ನಹಾಯ ಶೇಕಡ 56 ಭಾಗ, ಉಳಿದಿರುವುದು ನಮ್ಮ ಭಾಗಕ್ಕೆ ಸೇರಿದ್ದು, 140 ಕೋಟಿ ರೂಪಾಯಿಗಳನ್ನು ಕೇಂದ್ರ ನರಕಾರ ಕೊಡುವುದು, 110 ಕೋಟಿ ನಾವು ಒದಗಿಸಿಕೊಳ್ಳಬೇಕು. ಇದರಲ್ಲಿ ಅಡೀಷನಲ್ ಟ್ಯಾಕ್ಸೇಷನ್ನಿನಿಂದ ನುಮಾರು 40 ಕೋಟಿ ರೂಪಾಯಿಗಳಷ್ಟು ಸಂಪತ್ತನ್ನು ನಾವು ಮೊಬಿಲೈಜ್ ಮಾಡಬೇಕಾಗಿತ್ತು. ಅದರೆ ಅಷ್ಟನ್ನು ಕೂಡಿನುವುದಕ್ಕಾಗಲಿಲ್ಲ, ಕಾರಣ ತಮಗೆ ಗೊತ್ತಿದೆ. ಆದರೆ ಒಂದು ವಿಚಾರದ ಬಗ್ಗೆ ಬಹಳ ರೀತಿಯಿಂದ ಪ್ರಯತ್ನ ಮಾಡಿ ನಂಪೂರ್ಣ ಯಶಸ್ಸು ದೊರೆತಿದೆ. ಇದಕ್ಕೆ ಕೇಂದ್ರದ ನಹಾಯ ಶೇಕಡ 56ರಷ್ಟು ಇದ್ದುದನ್ನು ಅದು ಕಡಮೆ, ಪರ್ಸೆಂಟೇಜ್ ಹೆಚ್ಚಿನಬೇಕು, ಹೆಚ್ಚು ನಹಾಯ ಮಾಡಬೇಕು ಎಂದು ಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ನಚಿವರು ಕೇಂದ್ರದ ಮೇಲೆ ಒತ್ತಾಯ ತಂದ ಪರಿಣಾಮವಾಗಿ ಈ ದಿವನ ನುಮಾರು 65 ಪರ್ಸೆಂಟ್‌ವರೆಗೆ ಮೂರನೆಯ ಯೋಜನೆಯಲ್ಲಿ ಕೊಟ್ಟಿದ್ದಾರೆ ಎಂದು ಹೆಮ್ಮೆಯಿಂದ ನಂತೋಷದಿಂದ ಹೇಳಬೇಕಾಗಿದೆ. ಈ ನಂದರ್ಭದಲ್ಲಿ ಪ್ಲಾನಿಂಗ್ ಕಮಿಷನ್ ಮತ್ತು ಕೇಂದ್ರ ನರಕಾರ 140 ಕೋಟಿ ಕೊಡುವುದಾಗಿ ಹೇಳಿದ್ದು ನುಮಾರು 157–158 ಕೋಟಿ ಕೊಟ್ಟಿದ್ದಾರೆ. ಇದರಿಂದ ನಮಾರು 245 ಕೋಟಿ ರೂಪಾಯಿ ಗಳನ್ನು ನಾವು ಖರ್ಚುಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಮೆಮೊರ್ಯಾಂಡಂನಲ್ಲಿ ಸ್ಪಷ್ಟವಾಗಿ ಹೇಳಿದೆ.

ಇನ್ನು ಫಿಸಿಕರ್ ಅಜೀವ್‌ಮೆಂಟನ್ನು ನೋಡೋಣ, ಮೂರನೆಯ ಯೋಜನೆಯಲ್ಲಿ ಟಾರ್ಜೆಟ್ ಏನಿತ್ತೋ ಅದನ್ನು ಮುಟ್ಟಿದೆ ಎಂದು ಮೆಮೊರ್ಯಾಂಡಂನಲ್ಲಿ ವಿವರವಾಗಿ ಪ್ರತಿಯೊಂದು ಸೆಕ್ಟಾರಿನ ವಿವರವನ್ನೂ ಹೇಳಿದೆ. ಅದರ ಬಗ್ಗೆ ಮತ್ತೆ ಹೇಳಿ ಈ ನಭೆಯ ನಮಯವನ್ನು ಕಳೆಯಲು ನನಗೆ ಇಷ್ಟವಿಲ್ಲ. ಇನ್ನು 537 ಕೋಟಿ ರೂಪಾಯಿಗಳ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಪ್ರಶ್ನೆ ಇದೆ. ಇದರ ಗಾತ್ರವನ್ನು ಪ್ಲಾನಿಂಗ್ ಕಮಿಷನ್ನಿನಲ್ಲಿ ನಿರ್ಧಾರಮಾಡಿಕೊಳ್ಳಬೇಕಾದರೆ ಕೇಂದ್ರ ದಿಂದ ಇದಕ್ಕೆ ಸೇಕಡ ನೂರರಷ್ಟು ನಹಾಯ ಬರುವುದಿಲ್ಲ, ಅಷ್ಟು ಬರುವುದೆಂದು ಆಶಿನುವಹಾಗಿಲ್ಲ. ಇದರಲ್ಲಿ ನಮ್ಮ ಪಾಲೇನೆಂಬುದನ್ನು ನಿರ್ಧಾರಮಾಡಬೇಕಾಗಿದೆ. ಇದನ್ನು ಕೇಂದ್ರ ನರಕಾರದಲ್ಲಿ ಕೇಳುತ್ತೇವೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿರುವಹಾಗೆ ಕೇಂದ್ರದವರು 360-380 ಕೋಟಿ ಕೊಡಬಹುದು, ನುಮಾರು 175 ಕೋಟಿ ನಾವು ಒದಗಿಸಿಕೊಳ್ಳಬೇಕು. ಒಂದು ವೇಳೆ 65 ಪರ್ಸೆಂಟ್ ಅವರದು, 35 ಪರ್ಸೆಂಟ್ ನಮ್ಮದು ಎಂದು ನಿರ್ಧಾರವಾದರೆ ನುಮಾರು 175 ಕೋಟಿ ರೂಪಾಯಿಗಳಷ್ಟು ಸಂಪತ್ತನ್ನು ನಾವು ಕೂಡಿನಕೊಳ್ಳಬೇಕು. ಇಷ್ಟು ಹಣ ಜನರರ್ ರೆವೆನ್ಯೂನಿಂದ ಬರುವುದಿಲ್ಲ, ಅಡೀಷನಲ್ ಟ್ಯಾಕ್ಸೇಷನ್ ಮುಂತಾವುದುವುಗಳಿಂದ ಒದಗಿನಿಕೊಳ್ಳ ಬೇಕು. ಆದರೆ ಕೇಂದ್ರ ನರಕಾರ ಕನಿಷ್ಪಪಕ್ಷ 70 ಕೋಟಿಯಾದರೂ ಅಡೀಷನಲ್ ಸೊರ್ನಸ್‌ನಿಂದ ಒದಗಿನಿಕೊಳ್ಳಬೇಕೆಂದು ನೂಚಿನಿದೆ. ನಾವು 70 ಕೋಟಿ ಕೂಡಿನಿಕೊಳ್ಳುವುದು ಕಷ್ಟವಾಗಬಹುದು, 50 ಕೋಟಿಯನ್ನು ಒದಗಿನಿಕೊಳ್ಳಲು ವಿಶ್ವಪ್ರಯತ್ನವನ್ನು ಮಾಡುತ್ತೇವೆ ಎಂದು ನಾವು ಹೇಳುತ್ತಿ ದ್ದೇವೆ. ಅಂದಮೇಲೆ 50 ಕೋಟಿಯಷ್ಟು ಸಂಪತ್ತನ್ನು ನಾಲ್ಕನೆಯ ಯೋಜನೆಯಲ್ಲಿ ಕೂಡಿನ ಬೇಕಾದರೆ ಎಲ್ಲರೂ ಬಹಳಮಟ್ಟಿಗೆ ಪ್ರಯತ್ನಮಾಡಬೇಕು. ಮತ್ತು ನಮ್ಮ ಪ್ಲಾನಿನ ಗಾತ್ರ ಹೆಚ್ಚ ಬೇಕಾದರೆ ನಂಪತ್ತಾನ್ವಧನ ಅಗತ್ಯ, ಅದು ಹೆಚ್ಚಾದರೆ ಹೆಚ್ಚಿನ ಕೆಲನಕಾರ್ಯ ಮಾಡುವುದಕ್ಕೆ ಸಾಧ್ಯ, ಇರಿಗೇಷನ್, ಕೆಲನಕಾರ್ಯ ಹೆಚ್ಚಿನಬಹುದು, ಕಾವೇರಿ ಮತ್ತು ಕೃಷ್ಣ ನದಿಗಳ ನೀರಿನ ಪಾಲನ್ನು ಉಪಯೋಗಮಾಡುವುದಕ್ಕೆ ಸಾಧ್ಯ. ಅನೇಕ ಕೆಲನಕಾರ್ಯ ಮಾಡಲು ಸಾಧ್ಯವಾಗಬೇಕಾದರೆ ನಮ್ಮ ಪ್ಲಾನಿನ ಗಾತ್ರ ಹೆಚ್ಚಿನಬೇಕು. ಪ್ಲಾನಿನ ಸೈಜು ಹೆಚ್ಚಾಗುವುದಕ್ಕೆ ಮುಂಚೆ 750 ಕೋಟಿ, 800 ಕೋಟಿ ಎಂದು ಹೇಳಬಹುದು. ನಮ್ಮ ಶಕ್ತಿ ವಿಚಾರಮಾಡಬೇಕು. ನಾವು ಎಷ್ಟುಮಟ್ಟಿಗೆ ನಂಪತ್ತನ್ನು ಕೂಡಿನಬಹುದು, ನಮ್ಮ ಶಕ್ತಿ ಎಷ್ಟಿನೆ ಎಂದು ನಿರ್ಧಾರವಾಡಬೇಕಾದ ಪರಿನ್ಥಿತಿ ಒದ ಗಿದೆ. ಇದನ್ನು ನಾನು ಒಪ್ಪುತ್ತೇನೆ. 537 ಕೋಟಿ ನಾಲುವುದಿಲ್ಲ ಪ್ಲಾನಿನ ಸೈಜು ಹೆಚ್ಚಬೇಕು, ಇದಕ್ಕೆ

(ಶ್ರೀ ವೀರೇಂದ್ರ ಪಾಟೀಲ್)

ಕೇಂದ್ರದ ಸಹಾಯ ಹೆಚ್ಚಾಗಿ ಪಡೆಯುವುದೇಕು ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಕೇಂದ್ರ ಸರಕಾರದವರು 55 ಪರ್ಸೆಂಟ್ ಸಹಾಯ ಕೊಟ್ಟಿರುವುದು ಅದು ಕಡಿಮೆಯೂ ಅಲ್ಲ ಹೆಚ್ಚೂ ಅಲ್ಲ. ಗುಜರಾತ ರಾಜ್ಯಕ್ಕೆ 40-45 ಪರ್ಸೆಂಟ್ ಸೆಂಟ್ರಲ್ ಅಸಿಸ್ಟೆನ್ಸ್ ಇದೆ. ಅದನ್ನು ನೋಡಿದರೆ ನಮಗೆ ಬಹಳ ಹೆಚ್ಚು ಸಹಾಯ ಕೇಂದ್ರದಿಂದ ಬಂದಿದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸೆಂಟ್ರಲ್ ಅಸಿಸ್ಟೆನ್ಸ್ 80 ಪರ್ಸೆಂಟು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡಬೇಕು ಎಂದು ಶ್ರೀಮಾನ್ ವೆಂಕಟೇಗೌಡರು ಹೇಳಿದರು. ನಾನು ಈ ಸಂದರ್ಭದಲ್ಲಿ ಎಲ್ಲ ಸದಸ್ಯರನ್ನೂ ವಿಶ್ವಾಸದಲ್ಲಿ ತೆಗೆದುಕೊಂಡು ಒಂದು ಮಾತು ಹೇಳುತ್ತೇನೆ. ನಮಗೆ 90 ಪರ್ಸೆಂಟ್ ಸೆಂಟ್ರಲ್ ಅಸಿಸ್ಟೆನ್ಸ್ ಕೊಡಿ ಎಂದು ನಾವು ಅವರ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ನಮ್ಮಲ್ಲಿ ಶಕ್ತಿ ಇಲ್ಲ. ನೀರಾವರಿ ಸೌಕರ್ಯ ಬಹಳ ಕಡಿಮೆ ಇದೆ. ಬಹಳ ಪ್ರದೇಶ ಬ್ಯಾಕ್‌ವರ್ಡ್ ಇದೆ. ಹೆಚ್ಚು ಅನುಕೂಲತೆ ಒದಗಿಸುವುದು ಅಗತ್ಯವಿದೆ. ವ್ಯವಸಾಯ ಮತ್ತು ಆಹಾರ ವಿಚಾರದಲ್ಲಿ ನಾವು ಸೆಲ್ಫ್ ಸಫೀಶಿಯಂಟ್ ಆಗುವುದಕ್ಕೆ ಕೇಂದ್ರವು ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಸಹಾಯಕ್ಕೆ ಬರಬೇಕು ಎಂದು ಒತ್ತಾಯ ಪೂರ್ವಕ ಹೇಳಿತ್ತಿದ್ದೇವೆ. ಆಡಿಷನಲ್ ರಿಸೋರ್ಸಸ್ ಮೊಬಿಲೈಜ್ ಮಾಡುವುದಕ್ಕಾಗಿ ಪ್ರತಿ ವರ್ಷ ಕೇಂದ್ರದಿಂದ ಸಾಲ ಪಡೆಯುತ್ತೇವೆ. ಪಬ್ಲಿಕ್ ವಾರೋಯಿಂಗ್‌ನಿಂದ ಸಹ ಸಾಲ ಪಡೆಯುತ್ತೇವೆ. By way of interst ಕೇಂದ್ರ ಸರಕಾರದಿಂದ ತೆಗೆದುಕೊಂಡ ಸಾಲದ ಮೇಲೆ ಬಡ್ಡಿ ನಾಲ್ಕೂವರೆ-ಐದು ಕೋಟಿ ರೂಪಾಯಿ ಪ್ರತಿ ವರ್ಷ ಕೊಡುತ್ತೇವೆ. ಈ ಹಣವನ್ನು ದೊಡ್ಡ ಪ್ರೊಜೆಕ್ಟುಗಳ ಮೇಲೆ ನಾವು ಇನ್‌ವೆಸ್ಟ್ ಮಾಡಿದ್ದೇವೆ. ಬಹು ಮಟ್ಟಿಗೆ ಈ ದೊಡ್ಡ ಯೋಜನೆಗಳು ಇನ್ನೂ ಫಲಪ್ರದವಾಗಿಲ್ಲ. ಪ್ರತಿಫಲ ಬರುತ್ತಾ ಇಲ್ಲ. ಶರಾವತಿ ಯೋಜನೆ ಒಂದು ಮಾತ್ರ ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ಫಲಪ್ರದವಾಗಿದೆ. ಬಾಕಿ ಯೋಜನೆಗಳಲ್ಲಿ ವರಮಾನ ಬರುತ್ತಾ ಇಲ್ಲ. ಶರಾವತಿ ಯೋಜನೆಯಲ್ಲಿ ಒಂದೆರಡು ಯೂನಿಟ್ಸ್ ಕಮಿಷನ್ ಆಗಿದೆ. ಸ್ವಲ್ಪ ಮಟ್ಟಿಗೆ ರೆವೆನ್ಯೂ ಬರುತ್ತಿದೆ. ನಾರ್ಮಲ್ಲಿ ವರ್ಷಗಳವರೆಗೆ ಸಾಲ ಪಡೆದದ್ದರ ಮೇಲೆ ಬಡ್ಡಿ ಕೊಡುವುದಕ್ಕೆ ಈ ಹಣ ಹೋಗುತ್ತದೆ. ಏನೂ ಲಾಭವಾಗುವುದಿಲ್ಲ. ಈಗ ಬಡ್ಡಿ ಕೊಡುತ್ತಾ ಇದ್ದೇವೆ. ಈಗ ಕೇಂದ್ರ ಸರಕಾರದವರು ದುಡ್ಡು ಏನು ಕೊಡುತ್ತಾ ಇದ್ದಾರೆಯೋ ಆ ದುಡ್ಡನ್ನು ತೆಗೆದುಕೊಂಡು ಬಂದು ಬಹು ಮಟ್ಟಿಗೆ ಪ್ರೊಜೆಕ್ಟುಗಳ ಮೇಲೆ ಇನ್‌ವೆಸ್ಟ್‌ಮೆಂಟ್ ಮಾಡುತ್ತಾ ಬಂದಿದ್ದೇವೆ. ಸ್ವಲ್ಪ ಮಟ್ಟಿಗೆ ಬಂದಂಥ ಲಾಭದಿಂದ ಇಂಟರೆಸ್ಟ್ ಕೊಡುತ್ತಾ ಇದ್ದೇವೆ. ನಮ್ಮ ದುರ್ದೈವದಿಂದ ದುಡ್ಡು ತೆಗೆದುಕೊಂಡು ಬಂದು ಪ್ರೊಜೆಕ್ಟುಗಳ ಮೇಲೆ ಇನ್‌ವೆಸ್ಟ್‌ಮೆಂಟ್ ಮಾಡಿರುವುದರಲ್ಲಿ ಇನ್ನೂ ನಮಗೆ ರೆವೆನ್ಯೂ ಬರುತ್ತಾ ಇಲ್ಲ. ಒಂದೇ ಸಾಲದ ಹಣದ ಮೇಲೆ ಬಡ್ಡಿ ಮಾತ್ರ ಕೊಡುತ್ತಾ ಇದ್ದೇವೆ. ನಾಲ್ಕನೇ ಯೋಜನೆಯಲ್ಲಿ ಕೇಂದ್ರ ಸರಕಾರದಿಂದ ಪಡೆದಂಥ ಸಾಲದ ಬಗ್ಗೆ ನಮ್ಮ ರಾಜ್ಯ ಸರಕಾರವು ರೀಪೇಮೆಂಟ್ ಮಾಡತ್ಕದ್ದು 100 ಕೋಟಿ ರೂಪಾಯಿ ಗಳಷ್ಟು ಆಗುತ್ತದೆ. ನಾವು ಕೂಡಿಸುವ ನಂಪನ್ಮೂಲವೆಲ್ಲಾ ರೀಪೇಮೆಂಟ್ ಮಾಡುವುದಕ್ಕಾಗಿಯೇ ಎಲ್ಲವೂ ಹೊರಟು ಹೋಗುತ್ತದೆಯೋ ಎಂಬ ಪರಿಸ್ಥಿತಿಯಲ್ಲಿ ಇಂದು ನಾವು ಇದ್ದೇವೆ. ನಾಲ್ಕನೇ ಯೋಜನೆಯಲ್ಲಿ ನಾವು 100 ಕೋಟಿ ರೂಪಾಯಿವರೆಗೆ ರೋನ್ ರೀಪೇಮೆಂಟ್ ಮಾಡಬೇಕಾಗುತ್ತದೆ. ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿ ಪದೇ ಪದೇ ಹೇಳುತ್ತಿದ್ದೇವೆ. ಸಾಲ ಕೊಟ್ಟರುವುದನ್ನು ಪ್ರೊಜೆಕ್ಟುಗಳ ಮೇಲೆ ಖರ್ಚು ಮಾಡುತ್ತಾ ಇದ್ದೇವೆ. ಪ್ರೊಜೆಕ್ಟುಗಳು ಪೂರ್ತಿಯಾಗಬೇಕು. ಪ್ರೊಜೆಕ್ಟುಗಳು ಪೂರ್ತಿಯಾದ ನಂತರ ಲಾಭ ಬಂದ ಮೇಲೆ ಪ್ರೊಜೆಕ್ಟಿನಿಂದ ಬರುವಂಥ ರೆವೆನ್ಯೂದಲ್ಲಿ ಬಡ್ಡಿ ಮತ್ತು ಕ್ಯಾಪಿಟಲ್‌ನ ಕಂತು ತಿರುಗಿ ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಹೇಳುತ್ತಿದ್ದೇವೆ. ಯೋಜನೆಗಳು ಫಲಪ್ರದವಾಗುವ ಮೊದಲೇ ಸಾಲ ತೀರಿಸುವುದು ಆರಂಭವಾಗುವುದರಿಂದ ರಾಜ್ಯಕ್ಕೆ ಒದಗುವ ಕಷ್ಟ ಪರಿಸ್ಥಿತಿಯನ್ನು ಈಗಾಗಲೇ ಕೇಂದ್ರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಈ ಪ್ರಶ್ನೆ ಮೈನೂರು ರಾಜ್ಯಕ್ಕೆ ಸಂಬಂಧಪಟ್ಟದ್ದು ಆಗಿಲ್ಲ, ಇದು ನಮಗ್ರ ರಾಷ್ಟ್ರಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಇದು ಎಲ್ಲ ರಾಜ್ಯ ಸರಕಾರಗಳಿಗೂ ಸಂಬಂಧಪಟ್ಟದಾಗಿದೆ. ಆದುದರಿಂದ ಅವರಿಗೆ ಇದುವರೆಗೆ ಈ ಬಗ್ಗೆ ಒಂದು ನಿರ್ಣಯ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ಪರಿಸ್ಥಿತಿ ಎನು ಇದೆ, ನಮ್ಮ ರಿಸೋರ್ಸಸ್ ಪರಿಸ್ಥಿತಿ ಎನು ಇದೆ ಇದು ಕೇಂದ್ರ ಸರಕಾರಕ್ಕೆ ಗೊತ್ತಿದೆ. ಮುಂದಿನ ವರ್ಷದಿಂದ ಹೆಚ್ಚಿನ ಸಹಾಯ ಬರುವ ನಿರೀಕ್ಷೆ ಇದೆ. ನಾಲ್ಕನೇ ಯೋಜನೆಯಲ್ಲಿ by way of repayament of loan ಎಷ್ಟು ಕೊಡಬೇಕಾಗಿದೆ ಎಂಬುದು ನಿಮಗೆಲ್ಲರಿಗೂ ಗೊತ್ತಿರಬೇಕು ಎಂದು ಈ ಮಾತು ಹೇಳುತ್ತಿದ್ದೇನೆ.

ಈಗ ಇನ್ನೊಂದು ವಿಚಾರ. ಹೋದ ಸಲ ಮೂರನೇ ಪಂಚ ವಾರ್ಷಿಕ ಯೋಜನೆಯು ಕೊನೆಯ ವರ್ಷವಾಗಿತ್ತು. 1966-67 ನೇ ಸಾಲಿನ ಬಗ್ಗೆ ಬಹು ಜನ

ಮಾನ್ಯ ಸದಸ್ಯರಿಗೆ ಅನುಮಾನ ಬಂದಿದೆ. ಹೋದ ವರ್ಷ ಕೇಂದ್ರದಿಂದ ನಮಗೆ 51 ಕೋಟಿ ರೂಪಾಯಿ ಬಂದಿದೆ. ಇದೇ ರೀತಿಯಾಗಿ ಮುಂದಿನ ಐದು ವರ್ಷ ಕೇಂದ್ರದಿಂದ ನಮಗೆ ದುಡ್ಡು ಬಂದರೆ ಅನುಕೂಲವಾಗುತ್ತದೆ. ಆದರೆ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಗಾತ್ರ 537 ಕೋಟಿ ರೂಪಾಯಿ ಇದ್ದಂತೆ ಕಾಣುತ್ತದೆ. ಇದರಲ್ಲಿ ನಾವು ಕೈಯಿಂದ ಹಾಕಬೇಕಾದ ದುಡ್ಡು ಸಹ ಇದರಲ್ಲಿ ಸೇರಿದೆ. ಈ ವಿಚಾರದಲ್ಲಿ ಕೇಂದ್ರ ಸರಕಾರ ನಮಗೆ ಭರವಸೆ ಕೊಟ್ಟಿದ್ದಾರೆ. ನಮ್ಮ ವಿಶೇಷ ಪರಿಸ್ಥಿತಿ ಅವರಿಗೆ ಗೊತ್ತಿದೆ. ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿ ಇಂಥ ಪರಿಸ್ಥಿತಿ ಇದೆ. ಮುಂದಿನ ವರ್ಷ ಇಂಥ ಪರಿಸ್ಥಿತಿ ಇರುವುದಿಲ್ಲ. ಈಗ ಪ್ಲಾನ್ ಸೈಜ್ ಎಷ್ಟಿರಬೇಕು ಎಂಬುದು ನಿರ್ಧಾರವಾಗುತ್ತದೆ. ಮುಂದಿನ ವರ್ಷದಿಂದ ನಮಗೆ ಕೇಂದ್ರ ಸರಕಾರದಿಂದ ಹೆಚ್ಚಿನ ಸಹಾಯ ದೊರೆಯುವ ಭರವಸೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು ಹೇಳಿದರು, ಶರಾವತಿ ಯೋಜನೆಯ ಬಗ್ಗೆ ಈಗಾಗಲೇ ಹಣ ಖರ್ಚು ಮಾಡಿದ್ದೇವೆ, ಮುಂದೆ ಮಾಡಬಹುದಾದ ಖರ್ಚನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ಅವರು ಹೇಳಿದರು. ಆದರೆ ಈಗಾಗಲೇ ಶರಾವತಿ ಯೋಜನೆಯ ಬಗ್ಗೆ 65 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಹತ್ತು ಯೂನಿಟ್ಟುಗಳು ಪ್ರಾರಂಭವಾಗಲಿವೆ. ಸಿವಿಲ್ ಎಂಜಿನಿಯರಿಂಗ್ ಕೆಲಸ ಮಾಡಿದ್ದೇವೆ. ರಿಜರ್ವಾಯರ್ ಕೆಲಸ ಅಗಿದ್ದು ಅಲ್ಲಿ ನೀರು ಇದೆ. ಇನ್ನೂ ಎರಡು ಯೂನಿಟ್ಟುಗಳ ಮೆಷಿನರಿ ಆರ್ಡರ್ ಮಾಡಿದ್ದೇವೆ ಅದು ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಅಲ್ಲಿ ಉತ್ಪಾದಿಸುವ ಪವರ್ ಉಪಯೋಗ ಮಾಡಿಕೊಂಡು ದೇಶದಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕಾಗಿದೆ. ಪರಿಸ್ಥಿತಿ ಈ ರೀತಿ ಇರುವಾಗ ಈ ಬಾಬಿನಲ್ಲಿ go slow policy ನಿಜವಾಗಿಯೂ ನಮ್ಮ ರಾಜ್ಯಕ್ಕೆ ಘಾತುಕ ಪಾಲಿಸಿ ಆಗುತ್ತದೆ. ಈ ವಿಚಾರದ ಬಗ್ಗೆ, ಈ ಮೊದಲು ಹೇಳಿದ್ದೇನೆ. ಅದನ್ನು ಪುನಃ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಶರಾವತಿ ಯೋಜನೆಗೆ 106 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ನಿಗಧಿ ಮಾಡಿದ್ದೇವೆ ಇದಕ್ಕೆ ಒದಗಿಸಬೇಕಾಗಿರುವ 106 ಕೋಟಿ ಯಾವುದು ವೆಚ್ಚವಾಗಬೇಕಾಗಿದೆ. ಬೇರೆ ಕಡೆ ಎರಡನೇ ಪ್ರೊಜೆಕ್ಟಿಗೆ ಈ ಹಣವನ್ನು ಒದಗಿಸಲು ಸಾಧ್ಯವಿಲ್ಲ. ಶರಾವತಿಯಲ್ಲಿ ಉತ್ಪಾದಿಸುವ ಪವರ್ ನಮ್ಮ ರಾಜ್ಯದಲ್ಲಿ ಉಪಯೋಗವಾಗಬೇಕಾದುದು ಅಗತ್ಯ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ, ವರಾಹಿ ಮತ್ತು ಶಿವಪುರ ಯೋಜನೆಗಳನ್ನು ತೆಗೆದುಕೊಳ್ಳಲು ಯೋಚನೆ ಮಾಡಿದ್ದೇವೆ. ಆದರೆ ಅವುಗಳ ಬಗ್ಗೆ ಕೇಂದ್ರದ ನೆರವು ಅಗತ್ಯ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಕಾಳಿ ಮತ್ತು ವರಾಹಿ ಯೋಜನೆ ತೆಗೆದುಕೊಳ್ಳುತ್ತೇವೆ. ಇವುಗಳಿಗೆ ಕೇಂದ್ರದ ಸಹಾಯ ಬೇಕಾಗುತ್ತದೆ. ಇಲ್ಲದಿದ್ದರೆ ಈ ಯೋಜನೆಗಳನ್ನು ಬಹುಶಃ ತೆಗೆದುಕೊಳ್ಳುವುದು ಕಷ್ಟಸಾಧ್ಯ ಎಂಬುದನ್ನು ತಮ್ಮ ಮುಂದೆ ಹೇಳುತ್ತೇನೆ. ಇದನ್ನು ಕೇಂದ್ರ ಸರಕಾರಕ್ಕೂ ಸ್ಪಷ್ಟವಾಗಿ ಹೇಳಿದ್ದೇವೆ. ಶರಾವತಿ ಯೋಜನೆಯಲ್ಲಿ ಉಳಿದಿರತಕ್ಕ ಕೆಲಸ ಮುಗಿಸಲು ದುಡ್ಡು ಒದಗಿಸಿದ್ದೇವೆ. ವಿದ್ಯುತ್‌ಶಕ್ತಿ ಉಪಯೋಗಿಸುವುದಕ್ಕೆ ಬೇಕಾದಂಥ ಟ್ರಾನ್ಸ್ ಮಿಷನ್ ಲೈನ್ ಹಾಕುವ ಕೆಲಸ ಕಾರ್ಯಕ್ಕೆ ದುಡ್ಡು ಒದಗಿಸಿದ್ದೇವೆ. ಹೆಚ್ಚಿನ ದುಡ್ಡು ಹೊಸ ಕೆಲಸಕ್ಕೆ ಒದಗಿಸಿಲ್ಲ. ಏನಾದರೂ ಅವಕಾಶವಿದ್ದರೆ ಹಣ ಡೈವರ್ಟ್ ಮಾಡುವುದಕ್ಕೆ ತಯಾರಾಗಿದ್ದೇವೆ ಎಂಬ ಮಾತು ನಾನು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಒದಗಿಸಿರುವ ಹಣ ಸಾಕಾಗುವುದಿಲ್ಲ ಎಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನೀರಾವರಿ ಯೋಜನೆಗಳಿಗೆ ಒದಗಿಸಿರುವ 80 ಕೋಟಿ ರೂಪಾಯಿ ಸಾಕಾಗುವುದಿಲ್ಲ. ಇದನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಇದಕ್ಕೆ ಒದಗಿಸಿದ 80 ಕೋಟಿ ರೂಪಾಯಿ ಅಷ್ಟನ್ನು 100 ಕೋಟಿ ರೂಪಾಯಿಗಳಿಗೆ ಹೆಚ್ಚಿನಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಇದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಕೂಲಂಕಷವಾಗಿ ವಿಚಾರಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ. ನಮ್ಮ ಮನಸ್ಸು ಯಾವಕಡೆ ಇದೆ, ನಾವು ಯಾವ ರೀತಿ ಪ್ರಯತ್ನ ಮಾಡಬೇಕಾಗಿದೆ ಎಂಬುದು ತಮಗೆ ಸೂಕ್ಷ್ಮವಾಗಿ ಗೊತ್ತಿರಲಿ ಎಂದು ಇದನ್ನು ಹೇಳಬಯಸುತ್ತೇನೆ. ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇವೆ. ಸಾಕಷ್ಟು ದುಡ್ಡು ಸಿಕ್ಕದೇಹೋದರೆ ಜನ ಮುಂದೆ ಬರಬೇಕಾಗುತ್ತದೆ. ತ್ಯಾಗಮಾಡಬೇಕಾಗುತ್ತದೆ. ಟ್ಯಾಕ್ಸ್ ರೂಪದಲ್ಲಿ ಸರಕಾರಕ್ಕೆ ದುಡ್ಡು ಒದಗಿಸಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ ಎಂದು ನಮಗೆ ಅವರು ಏನೇನೋ ಹೇಳಿದ್ದಾರೆ. ಇವತ್ತಿನ ದಿವಸ ಆ ಮಾತನ್ನು ತಮ್ಮ ಮುಂದೆ ನಾನು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರೊಬ್ಬರು ಇನ್ನೊಂದು ವಿಷಯ ಪ್ರಸ್ತಾಪ ಮಾಡಿದರು. ಲೋಕನಾಥನ್ ಕಮಿಟಿ ರಿಪೋರ್ಟ್ ಆಧಾರದ ಮೇಲೆ ಕೆಲವು ಅಂಕಿಅಂಶಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ದೇಶದ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಖರ್ಚು ಮಾಡಬೇಕಾಗಿದೆ.

(ಶ್ರೀ ವೀರೇಂದ್ರ ಪಾಟೀಲ್)

ಅಭಿವೃದ್ಧಿಗಾಗಿ ಹೆಚ್ಚಿನ ಪ್ರಮಾಣದಲ್ಲಿ ಖರ್ಚು ಮಾಡಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟೆಷ್ಟು ಖರ್ಚು ಮಾಡಬೇಕಾಗಿದೆ ಎಂಬುದು ತಮ್ಮ ಮುಂದೆ ಇದೆ.

ಈ ಸಂದರ್ಭದಲ್ಲಿ ನಾವು ಪ್ರೈವೇಟ್ ಸೆಕ್ಟಾರಿನ ಆಶ್ರಯ ಮಾಡಬೇಕಾಗಿದೆ, ಅವರೂ ನಮಗೆ ಸಹಾಯ ಸಹಾಯ ಮಾಡಬೇಕಾಗಿದೆ. ನಮ್ಮ ದೇಶದ ನಮಗ್ರ ಆರ್ಥಿಕಾಭಿವೃದ್ಧಿಯಾಗ ಬೇಕಾಗಿದ್ದರೆ ಅದು ಬರೀ ಪಬ್ಲಿಕ್ ಸೆಕ್ಟಾರಿನಿಂದ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಪ್ರೈವೇಟ್ ಸೆಕ್ಟಾರಿನಿಂದ ಸಾಕಷ್ಟು ಪ್ರಮಾಣದಲ್ಲಿ ಮುಂದೆ ಬರಬೇಕು. ಇದುವರೆಗೂ ಪ್ರೈವೇಟ್ ಸೆಕ್ಟಾರಿನಿಂದ ಮುಂದೆ ಬರುವುದಕ್ಕೆ ಅಡ್ಡಿ ಆತಂಕಗಳಿದ್ದುವು. ಅವರಿಗೆ ಬೇಕಾಗತಕ್ಕ ಪವರ್ ನಮ್ಮಲ್ಲಿರಲಿಲ್ಲ, ಈಗ ಶರಾವತಿಯಿಂದ ಪವರ್ ಬರುವುದಕ್ಕೆ ಪ್ರಾರಂಭವಾದ ಮೇಲೆ ಇಂಡಿಯಾ ದೇಶದ ಯಾವ ರಾಜ್ಯವೂ ಇಷ್ಟು ಕಡಿಮೆ ದರದಲ್ಲಿ ಪವರನ್ನು ಕೊಡುತ್ತಿಲ್ಲ. ಅಲ್ಯುಮಿನಿಯಂ ಕೈಗಾರಿಕೆಗೆ ನಾವು ಪವರ್ ಕೊಡುವುದಕ್ಕೆ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ. ಯಾವ ಪ್ಲಾಟ್ ಫಾರಂ ಮೇಲೆ ಅವಕಾಶ ಸಿಕ್ಕದರೂ ಮುಖ್ಯಮಂತ್ರಿಗಳೂ, ಕೈಗಾರಿಕೆ ಮಂತ್ರಿಗಳೂ, ಆರ್ಥಿಕ ಮಂತ್ರಿಗಳೂ, ಎಲ್ಲರೂ ಹೇಳುತ್ತಿದ್ದೇವೆ: ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮೈಸೂರು ರಾಜ್ಯದಲ್ಲಿ ಅನುಕೂಲ ವಾತಾವರಣವಿದೆ, ಬೇಕಾದಷ್ಟು ಪವರ್ ಬಹಳ ಯೋಗ್ಯ ದರದಲ್ಲಿ ಕೊಡುವುದಕ್ಕೆ ತಯಾರಾಗಿದ್ದೇವೆ, ಬೇಕಾಗುವಂಥ ಭೂಮಿ ಕೊಡುವುದಕ್ಕೆ ತಯಾರಿದ್ದೇವೆ, ನೀರಿನ ಅನುಕೂಲತೆ ಮಾಡಿಕೊಡುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತಿದ್ದೇವೆ. ಈ ರೀತಿ ಹೊಸದಾಗಿ ಕಾರ್ಖಾನೆಗಳ, ಉದ್ಯೋಗಗಳ ಬೆಳವಣಿಗೆಗೆ ಬಹಳ ಅನುಕೂಲ ವಾತಾವರಣ ಇಡೀ ರಾಷ್ಟ್ರದಲ್ಲಿ ಇರಬಾರದಂಥ ಹೆಚ್ಚಿನ ಮಟ್ಟದ ಅವಕಾಶ ಇವೆಲ್ಲವೂ ಮೈಸೂರು ರಾಜ್ಯದಲ್ಲಿವೆ. ನಮ್ಮ ಜನರೂ ಸಹ ಮುಂದೆ ಬಂದು ಹೆಚ್ಚಿನ ಪ್ರಮಾಣದಲ್ಲಿ ಈ ಬಗ್ಗೆ ಆಸಕ್ತಿ ತೋರಿಸಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಂಡಿದ್ದೇವೆ. ಈ ಸಭೆಯ ಮುಖಾಂತರವೂ ಮನವಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ನಾಲ್ಕನೆಯ ಯೋಜನೆಯಲ್ಲಿ ಪೆಚ್ಚಮಾಡಲು ಅಂದಾಜು ಮಾಡಲಾಗಿರುವ 537 ಕೋಟಿ ರೂಪಾಯಿಗಳಲ್ಲಿ ಪ್ರೈವೇಟ್ ಸೆಕ್ಟಾರಿನಿಂದ 200-250 ಕೋಟಿ ರೂಪಾಯಿಗಳವರೆಗೂ ಖರ್ಚು ಮಾಡುವುದಕ್ಕೆ ಏನು ಅನುಕೂಲಗಳನ್ನು ಮಾಡಿಕೊಡಬೇಕೋ ಅದನ್ನು ಮಾಡಿಕೊಡುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ.

ಒಕ್ಕಲುತನದ ನಲುವಾಗಿ ಸಾಕಷ್ಟು ಪ್ರಾಏಪಿಷನ್ ಮಾಡಿಲ್ಲ ಎಂದು ಕೆಲವರು ಮಾನ್ಯ ಸದಸ್ಯರು ಹೇಳಿದರು. ನಾವು ಸಮಗ್ರ ದೃಷ್ಟಿಯನ್ನು ಇಟ್ಟು ನೋಡಿದರೆ ಈ ವಿಷಯ ಗೊತ್ತಾಗುತ್ತದೆ. ಮೈನರ್ ಇರಿಗೇಷನ್ನಿಗೆ ಒದಗಿಸಿರುವ ಹಣ ಒಕ್ಕಲುತನದ ನಲುವಾಗಿ, ಮೇಜರ್ ಇರಿಗೇಷನ್‌ಗೆ ಒದಗಿಸಿರುವ ಹಣ ಒಕ್ಕಲುತನದ ನಲುವಾಗಿ, ಹಾಗೆಯೇ ಮೀಡಿಯಂ ಇರಿಗೇಷನ್‌ಸಹ ಒಕ್ಕಲುತನದ ನಲುವಾಗಿ, ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಯಕ್ರಮದಲ್ಲಿ ಪಂಪ್‌ಸೆಟ್ ನಲುವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಇರಿಗೇಷನ್ ಪಂಪ್‌ಸೆಟ್‌ಗಳನ್ನು ಸರ್ವಿಸ್ ಮಾಡುವುದಕ್ಕೆ ಒದಗಿಸಿರುವ ಹಣವೆಲ್ಲ ಒಕ್ಕಲುತನದ ನಲುವಾಗಿ. ಹೀಗೆ ನೋಡಿದರೆ 537 ಕೋಟಿ ರೂಪಾಯಿನಲ್ಲಿ 217 ಕೋಟಿ ರೂಪಾಯಿ ಒಕ್ಕಲುತನದ ಅಭಿವೃದ್ಧಿಯ ನಲುವಾಗಿ ಖರ್ಚು ಮಾಡುತ್ತಿದ್ದೇವೆ ಎನ್ನುವುದು ಕಂಡು ಬರುತ್ತದೆ. ಹೀಗಿರುವುದರಿಂದ ನಾವು ಖರ್ಚು ಮಾಡುವುದರಲ್ಲಿ ಒಕ್ಕಲುತನದ ಅಭಿವೃದ್ಧಿಗೆ ಕಡಮೆ ಖರ್ಚು ಮಾಡುತ್ತಿದ್ದೇವೆ ಎನ್ನುವ ಪಾದವನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ಆ ಪರಿಸ್ಥಿತಿ ಇಲ್ಲ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ;

ಶ್ರೀಮಾನ್ ಕೆ. ಎನ್. ಸೂರ್ಯನಾರಾಯಣರಾವ್ ಅವರು ನಾರ್ತ್ ಪ್ಲಾಂಟ್ ಸಂಬಂಧದ ಖರ್ಚನ್ನು ಕಡಮೆ ಮಾಡಬೇಕೆಂದು ಹೇಳಿದರು. ತತ್ವಶಃ ನಾವೂ ಅದನ್ನು ಒಪ್ಪಿಕೊಳ್ಳುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ನಾರ್ತ್ ಪ್ಲಾಂಟ್ ಖರ್ಚು ಬಹಳಮಟ್ಟಿಗೆ ಕಡಮೆ ಮಾಡಬೇಕು ಎಂದು ನಿರ್ಧಾರ ಮಾಡಿಕೊಂಡಿದ್ದಾರೆ. ಅದನ್ನು ಕಡಮೆ ಮಾಡುತ್ತಿದ್ದೇವೆ. ಅದನ್ನು ಕಡಮೆ ಮಾಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟನ್ನೂ ಮಾಡುವುದಕ್ಕೆ ತಯಾರಾಗಿದ್ದೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಸಿದ್ಧವಾಗಿದ್ದೇವೆ.

ಬೆಂಗಳೂರು ನೀರು ಸರಬರಾಜು ಬಗ್ಗೆ ಒಂದು ಮಾತು. ಯಾರೋ ಒಬ್ಬ ಸದಸ್ಯರು ಒಂದು ಸಾವಿರ ಗ್ಯಾಲನ್ನಿಗೆ ಮೂರು ನಾಲ್ಕು ರೂಪಾಯಿ ಬೀಳುತ್ತದೆ ಎನ್ನುವ ಮಾತನ್ನು ಹೇಳಿದರು. ಬೆಂಗಳೂರು ನೀರು ಸರಬರಾಜು ಬಗ್ಗೆ ಹೇಳಬೇಕಾಗಿದ್ದರೆ, ಈ ಯೋಜನೆಯನ್ನು ಪ್ಲಾನ್‌ನಲ್ಲಿ ಸೇರಿಸ ಬೇಕು ಎನ್ನುವ ಪಾದವನ್ನು ಪ್ಲಾನಿಂಗ್ ಕಮಿಷನ್‌ನವರು ಮಾಡುತ್ತಿದ್ದಾರೆ. ಬೆಂಗಳೂರು ನೀರು ಸರಬರಾಜು ಯೋಜನೆಗೆ 24-27 ಕೋಟಿ ರೂಪಾಯಿ ಆಗುತ್ತದೆ, ಇದನ್ನು ಪ್ಲಾನ್‌ನಲ್ಲಿ ಸೇರಿಸಿಕೊಳ್ಳಿ

part of the plan ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ, ಪ್ಲಾನ್ಡ್ ಸೀಲಿಂಗಿನ ಹೊರಗಡೆ ಇಡಿ ಎಂದು ನಾವು ಹೇಳುತ್ತಿದ್ದೇವೆ. ಅವರು ಒಪ್ಪಿಲ್ಲ. ಕಲ್ಕತ್ತ ವಾಟರ್ ಸಪ್ಲೈ ಮತ್ತು ಅಂಡರ್ ಗ್ರೌಂಡ್ ಡ್ರೇನೇಜ್ ಸ್ಕೀಮನ್ನು ಪ್ಲಾನಿನ ಹೊರಗಡೆ ಇಟ್ಟಿದ್ದಾರೆಂದು ಕೇಳಿದ್ದೇವೆ. ಬೆಂಗಳೂರು ನೀರು ಸರಬರಾಜು ಯೋಜನೆಯನ್ನೂ ಪ್ಲಾನಿನಿಂದ ಹೊರಗಡೆ ಇಟ್ಟರೆ ಉಳಿದ ಕೆಲಸಗಳನ್ನು ಮಾಡಿ ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಆದರೆ ಅವರು ಇನ್ನೂ ಒಪ್ಪಿಲ್ಲ. ಈ ಬಗ್ಗೆ ನಾನು ಒಂದು ವಿಚಾರವನ್ನು ಸ್ಪಷ್ಟಪಡಿಸುವುದಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ನೀರು ಸರಬರಾಜು ಯೋಜನೆಯ ವೆಚ್ಚ 24 ಕೋಟಿ ರೂಪಾಯಿ ಆಗಬಹುದು ಎಂದು ಇದ್ದುದು ಇವತ್ತು 27 ಕೋಟಿ ರೂಪಾಯಿ ಆಗುತ್ತದೆಯೇ, 35ಕೋಟಿ ರೂಪಾಯಿಗೆ ಬರುತ್ತದೆಯೆ ಎಂದು ಹೇಳುವಂಥ ಪರಿಸ್ಥಿತಿಯಲ್ಲಿಲ್ಲ. ಈ ಮಾನ್ಯ ಸಭೆಗೆ ನಾನು ಒಂದು ವಿಷಯವನ್ನು ಹೇಳುತ್ತೇನೆ ಬೆಂಗಳೂರಿನ ಜನತೆ ತಾವು ನೀರನ್ನು ತಮ್ಮ ಖರ್ಚಿನಿಂದ ಕುಡಿಯಬೇಕೋ ಅಥವಾ ಮೈಸೂರು ರಾಜ್ಯದ ಎಲ್ಲ ಜನರ ದುಡ್ಡಿನಿಂದ ನೀರನ್ನು ಕುಡಿಯಬೇಕೋ ಎನ್ನುವಂಥದ್ದನ್ನು ಆಲೋಚನೆ ಮಾಡ ಬೇಕು. ಉಚಿತ ನೀರನ್ನು ಕೊಡಿ ಎಂದು ಬೆಂಗಳೂರಿನ ಜನತೆ ಕೇಳುವುದಕ್ಕೆ ಕಷ್ಟವಿಲ್ಲ. ಒಂದು ವಿಷಯವನ್ನು ನಾನು ತಮ್ಮ ಮುಂದೆ ಸ್ಪಷ್ಟವಾಗಿ ಹೇಳಬೇಕಾಗಿದೆ. ಸರ್ಕಾರದವರು ಕೆಲವು ಯೋಜನೆಗಳನ್ನು ತೆಗೆದುಕೊಂಡು ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಮೈಸೂರು ಇಲ್ಲೆಲ್ಲ ನೀರು ಸರಬರಾಜು ಮಾಡುತ್ತಿದ್ದಾರೆ. ಇದರಲ್ಲಿ ಸರ್ಕಾರದ ನೀತಿ ಏನು ಎಂದರೆ 'ನೋ ಪ್ರಾಫಿಟ್ ನೊ ಲಾಸ್'. ಈ ತತ್ವದ ಮೇಲೆ ನೀರು ಸರಬರಾಜು ಮಾಡುತ್ತಿದ್ದೇವೆ. ಇದರಲ್ಲಿ ವ್ಯಾಪಾರ ಮಾಡ ಬೇಕು ಎಂದಿಲ್ಲ, ವ್ಯವಹಾರ ಮಾಡಬೇಕೆಂದಿಲ್ಲ, ಲಾಭ ಗಳಿಸಬೇಕು ಎನ್ನುವ ಉದ್ದೇಶವೂ ನಮಗಿಲ್ಲ. ಬೆಂಗಳೂರು ನೀರು ಸರಬರಾಜು ಯೋಜನೆಯನ್ನು ಸಹ ಇದೇ ನೀತಿಯ ಆಧಾರದ ಮೇಲೆ ಮಾಡ ಬೇಕೆಂಬ ಉದ್ದೇಶವಿದೆ. ಒಂದು ವೇಳೆ ಆ ಆಧಾರದ ಮೇಲೆ ಮಾಡಿದೆ ಇಂತಿಷ್ಟು ದುಡ್ಡನ್ನು ಆವ ರಿಂದ ತೆಗೆದುಕೊಂಡು ಅವರಿಗೆ ನೀರು ಸರಬರಾಜು ಮಾಡಿರಿ ಎಂದರೆ, ಅದರ ಮೇಲೆ ಬರುವಂಥ ಖರ್ಚನ್ನು ಜನರಲ್ ರೆವೆನ್ಯೂನಿಂದ ಹಾಕಲೇಬೇಕಾಗುತ್ತದೆ. ಈ ವಿಚಾರವನ್ನು ನಾವು ನಿರ್ಧಾರ ಮಾಡಬೇಕಾಗಿದೆ. ಬೆಂಗಳೂರು ಜನತೆಗೆ ಇಡೀ ರಾಜ್ಯ 225 ಲಕ್ಷ ಜನರ ಜೇಬಿನಿಂದ ಬರುವ ದುಡ್ಡಿನಿಂದ ನೀರನ್ನು ಕುಡಿಸಬೇಕೇ ಅಥವಾ ಅವರು ತಮ್ಮ ಖರ್ಚಿನಿಂದ ತಮ್ಮ ನೀರನ್ನು ತಾವು ಕುಡಿಯಬೇಕೇ ಎನ್ನುವುದನ್ನು ನೋಡಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಬೆಂಗಳೂರು ನೀರು ಸರಬರಾಜು ಯೋಜನೆ ಗಾಗಿಯೇ ಪ್ರತ್ಯೇಕವಾಗಿ ಒಂದು ಬೋರ್ಡನ್ನು ಮಾಡಿದ್ದೇವೆ. ರೆಕ್ಕ ಪತ್ರದ ಪ್ರಕಾರ ಖರ್ಚು ಎಷ್ಟಾಗುತ್ತದೆ, ಸಾವಿರ ಗ್ಯಾಲನ್ನುಗಳಿಗೆ ಮೂರು ರೂಪಾಯಿ ಅಥವಾ ನಾಲ್ಕು ರೂಪಾಯಿ ಆಗು ತ್ತದೆಯೇ ಎಂದು ಯಾವುದನ್ನೂ ಹೇಳುವಂಥ ಪರಿಸ್ಥಿತಿಯಲ್ಲಿ ಇಲ್ಲ. ಒಂದು ಸಾವಿರ ಗ್ಯಾಲನ್ನಿಗೆ ಹತ್ತಾಣೆಯಾಗುತ್ತದೆಯೇ, ಒಂದು ರೂಪಾಯಿ ಆಗುತ್ತದೆಯೇ, ಒಂದೂವರೆ ರೂಪಾಯಿ ಆಗು ತ್ತದೆಯೇ, ಮೂರು ರೂಪಾಯಿ ಆಗುತ್ತದೆಯೇ ಎನ್ನುವುದು ಗೊತ್ತಿಲ್ಲ. ನೀರು ಸರಬರಾಜು ಬಗ್ಗೆ ಏನು ಖರ್ಚಾದರೂ ಅದನ್ನು ಬೆಂಗಳೂರಿನ ಜನತೆಯೇ ವಹಿಸಿಕೊಳ್ಳಬೇಕು. ಎರಡನೆಯವರ ಮೈಮೇಲೆ ಖರ್ಚು ಹಾಕಬಾರದು. ಸ್ವೇಟ್ ಎಕ್ವಿಟೆಕರ್‌ನಿಂದ ಖರ್ಚು ಹಾಕಿ ಬೆಂಗಳೂರು ಜನರಿಗೆ ನೀರು ಕುಡಿಸಬೇಕು ಎನ್ನುವುದು ಸರಿಯಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಮಾನ್ಯ ಉಪಾಧ್ಯಕ್ಷರು ಮಾತನಾಡುತ್ತ ಘಟಪ್ರಭ ಕೆಲಸಕಾರ್ಯಗಳು ನಿಧಾನವಾಗಿ ನಡೆಯು ತ್ತವೆ ಎಂದು ಹೇಳಿದರು. ಅವರು ಹೇಳಿದ್ದರಲ್ಲಿ ಸ್ವಲ್ಪಮಟ್ಟಿಗೆ ನಿಜವಿದೆ. ಘಟಪ್ರಭ ಯೋಜನೆಗೆ ಎಕ್ಸ್‌ಕವೇಷನ್ ಮಾಡಿದೆವು. ದುರ್ದೈವದಿಂದ ಫೌಂಡೇಷನ್ ಹತ್ತಲಿಲ್ಲ. ಆ ಪರಿಸ್ಥಿತಿ ಇದ್ದಾಗ ಫೌಂಡೇಷನ್ ಟ್ರೀಟ್‌ಮೆಂಟ್ ಯಾವ ರೀತಿ ಕೊಡಬೇಕೆನ್ನುವ ಜಟಿಲವಾದ ಪ್ರಶ್ನೆ ಬಂತು. ಕೇಂದ್ರ ಜಲ ವಿದ್ಯುತ್ ಮಂಡಲಯವರು ಪೂನದಲ್ಲಿರುವ ಸಂಶೋಧನಾಲಯಕ್ಕೆ ಪರೀಕ್ಷಣೆಗೆ ಕಳುಹಿಸಬೇಕು ಎಂದು ಹೇಳಿದರು. ಅಲ್ಲಿಂದ ಫಲತಾಂಶಗಳು ಬರುವುದು ತಡವಾದ್ದರಿಂದ ಕೆಲಸಕಾರ್ಯಗಳು ನಿಧಾನ ವಾಗಿವೆ. ಕೆಲಸವನ್ನು ಜೋಗ ಮಾಡಬೇಕೆಂದು ಟೆಂಡರ್ ಕೂಡ ಕರೆದಿದ್ದೇವೆ. 14 ಕೋಟಿ ರೂಪಾಯಿ ಗಳ ಟೆಂಡರ್ ಈಗಾಗಲೇ ಬಂದಿವೆ. ಸಂಶೋಧನಾಲಯದವರು ಎಷ್ಟು ಬೇಗ ನಿರ್ಧಾರ ತೆಗೆದು ಕೊಳ್ಳುತ್ತಾರೆಯೋ ಅಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಅವರು ನಿರ್ಧಾರ ತೆಗೆದು ಕೊಂಡಮೇಲೆ ಬಹಳ ವೇಗವಾಗಿ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡುತ್ತೇವೆ. ಆ ಪ್ರಾಜೆಕ್ಟ್‌ನಲ್ಲಿ ಒಂದು ಪರಿಸ್ಥಿತಿ ಏನಿದೆ ಎಂದರೆ, ನೀರು ಹರಿಯುವುದಕ್ಕೆ ಬೇಕಾದ ನಾಲೆಗಳೆಲ್ಲ ಸಿದ್ಧವಾಗಿವೆ. ಹಿಡಕಲ್ ಬಳಿ ರಿಸರ್ವಾಯರ್ ಕಟ್ಟಲು ಕೆಲವು ಅನಿವಾರ್ಯ ತೊಂದರೆಗಳು ಬಂದಿರುವುದರಿಂದ ನಿಧಾನ ವಾಗಿದೆ. ಆ ಕೆಲಸವನ್ನು ಅದಷ್ಟು ತೀವ್ರವಾಗಿ ಮಾಡುತ್ತೇವೆಂದು ಹೇಳಬಯಸುತ್ತೇನೆ. ನೀರಾ ವರಿ ಬಾವಿಗಳ ಸಲುವಾಗಿ 4 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಸಾಕಾಗುವುದಿಲ್ಲ ಎಂದು ಹೇಳಿದರು. ನೀರಾವರಿ ಬಾವಿಗಳಿಗೆ ಸಾಲವನ್ನು ಭೂ ಅಭಿವೃದ್ಧಿ ಬ್ಯಾಂಕ್ ಮುಖಾಂತರ ಕೊಡು

(ಶ್ರೀ ವೀರೇಂದ್ರ ಪಾಟೀರ್)

ತ್ತೇವೆ. ಅವರು ಒಂದು ಕೋಟಿ ರೂಪಾಯಿಗೆ ನಾಲ್ಕು ಕೋಟಿ ರೂಪಾಯಿ ಸಾಲವನ್ನು ಎರಡನೆ ರೀತಿಯಿಂದ ಪಡೆಯುವುದಕ್ಕೆ ಸಾಧ್ಯವಿದೆ. ನಾವು ನಾಲ್ಕು ಕೋಟಿ ರೂಪಾಯಿ ಒದಗಿಸಿದ್ದೇವೆ. ಅದರಿಂದ 16 ಕೋಟಿ ರೂಪಾಯಿಗಳವರೆಗೂ ನೀರಾವರಿ ಬಾವಿಗಳಿಗೆ ಸಾಲ ಹಂಚುವುದಕ್ಕೆ ಸಾಧ್ಯವಾಗುತ್ತದೆ. ನಾಲ್ಕನೆಯ ಯೋಜನೆಯಲ್ಲಿ 16 ಕೋಟಿ ರೂಪಾಯಿಗಳನ್ನು ಬಾವಿಗಳಿಗೆ ಹಂಚುವುದು ಬಹಳ ಕಡಮೆ ಹಣ ಎಂದು ನಾನು ತಿಳಿಯುತ್ತಿಲ್ಲ. ಪರಿಸ್ಥಿತಿ ಈ ರೀತಿ ಇರುವುದರಿಂದ ನೀರಾವರಿ ಬಾವಿಗಳಿಗೆ ಏನೂ ಕಡಮೆ ಹಣವನ್ನು ಒದಗಿಸಿಲ್ಲ.

ನಾಲ್ಕನೆಯ ಯೋಜನೆಗೆ 537 ಕೋಟಿ ರೂಪಾಯಿಯ ಕರಡು ಯೋಜನೆ ನಮ್ಮ ಮುಂದಿದೆ. ಅದಕ್ಕೆ ತಮ್ಮೆಲ್ಲರ ಬೆಂಬಲವಿದೆ, ಆಶೀರ್ವಾದವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಕೆಲವೇ ದಿವಸಗಳಲ್ಲಿ ನಮ್ಮ ಮುಖ್ಯ ಮಂತ್ರಿಗಳೂ ಮತ್ತು ಉಳಿದ ಪ್ರತಿನಿಧಿಗಳೂ ಕೇಂದ್ರಕ್ಕೆಹೋಗಿ ಪ್ಲಾನಿಂಗ್ ಕಮಿಷನ್ ಹತ್ತಿರ ಹೋಗಿ ಸಾಧ್ಯವಾದಷ್ಟೂ ಹೆಚ್ಚು ಹಣವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ, ಅಂಥ ಪ್ರಯತ್ನಗಳು ಈಗಾಗಲೆ ನಡೆಯುತ್ತಿವೆ ಎನ್ನುವ ಭರವಸೆಯನ್ನು ನೀಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

6-00 P.M.

Mr. SPEAKER.—Before we adjourn, I wish to thank the members for the unanimous courtesy they have shown and the fullest co-operation they have given and it means all the members from every section, the Cabinet Ministers, Deputy Ministers and the members of all parties without any exception whatsoever. This is perhaps the longest Session and I would like to inform the Members about the business that we have transacted during this Session.

The House commenced its sitting from the 28th January 1966 and till to-day it has sat for 45 days, and on some days both morning and evening.

There were two sittings. The first sitting, from 28th January, 1966 to 5th February, 1966, was confined to discussion on the motion of thanks to the Governor's Address and consideration of 1 or 2 other items of business and the sittings from 23rd February onwards were devoted to the consideration of Financial, Legislative and other Business. The Session commenced with an Address by the Governor on the 28th January 1966.

The motion of thanks was debated for 4 days and 42 members participated in the discussion.

QUESTIONS.

The number of starred questions put and answered was 452. 5 Short Notice questions were put and answered. Answers to 100 unstarred questions were laid on the Table of the House.

STATEMENT BY MINISTERS.

13 statements were made by the Ministers in reply to call attention notices given notice of by members. In addition the Ministers made statements on important sobjects like the Food situation in the State, scarcity of Kerosene and Diesel Oil in Dharwar District, supply of free water to the citizens of Bangalore.

OBITUARY REFERENCE.

Obituary references were made about the death of the late Sri Lal Bahadur Sastry, Prime Minister of India and two sitting members of the Legislative Council and 4 Ex-Members of the Legislative Assembly.

LEAVE OF ABSENCE.

The House granted leave of absence to 10 members.

FINANCIAL.

The Budget Estimate for the year 1966-67 was presented to the House on 2nd March 1966. The general discussion on the Budget lasted for 5 days and 62 members participated in the Debate. The voting of demands lasted for 13 days and all demands were put to vote and carried. There were supplementary demands for grants for the year 1965-66 (2nd and 3rd Instalments) and voting on excess grants for the year 1961-62.

LEGISLATIVE BUSINESS.

19 Bills were introduced during the Session and 18 Bills were passed. Among the Bills passed there were 4 Appropriation Bills and 6 Taxation Bills. The Mysore Agricultural Produce Marketing (Regulation) Bill as reported by the Select Committee was one of the important Bills passed by the House.

The Bill relating to the Urban Development Board was referred to a Joint Select Committee.

During the Session the House considered the Andhra Pradesh and Mysore (Transfer of Territory) Bill, 1966, referred to by the President under Article 3 of the Constitution of India and approved the some.

NOTICES.

The House discussed on 7th April, 1966, a motion requesting the Government of India to take up the Upper Krishna Project.

On 8th April, 1966 another motion urging the Government to devise all ways and means of utilising fully before 1974 the waters of the Cauvery basin was discussed.

FOURTH FIVE YEAR PLAN.

The House discussed the Fourth Five Year Plan during the Session.

REPORTS OF THE COMMITTEES.

During the Session 8 reports of the several Committees like Business Advisory Committee, Subordinate Legislation Committee and Assurance Committee were presented to the House.

(MR. SPEAKER)

PETITIONS.

Two petitions were presented to the House, on behalf of the Mysore Chamber of Commerce and the Mysore non-gazetted Officers' Association. One Report was presented to the House by the Petitions Committee.

NON-OFFICIAL BUSINESS.

Non-official Business was transacted on 3 days and three resolutions were discussed and disposed off of which two Resolutions were those that were Carred over from previous Sessions another resolution was moved and the discussion was inconclusive.

A Bill to amend the Bangalore University Act was introduced by a non-official member.

This is the business we have done and let us depart with smilling faces. Now the House stands adjourned *Sine Die.*

The House adjourned Sine Die *at Five Minutes past Six of the Clock.*

KSA LIBRARY, B'lore
B004837
328.32402 548 LAD,1966
JJ35

WD 6854—GPB—500—15-7-66